Discussion on Matters of Public Importance and for Short Duration.

re : Difficulties experienced by students in the matter of admission to Medical Colleges in the State.

† Sri H. SIDDAVEERAPPA (Harihar).— I wish to raise a discussion on the difficulties experienced by students in the matter of admission to Medical Colleges in the Stase.

Since the time at our disposal is very short, I would like to make brief comments. As you are aware, there are three Universities in our State. Now regionwise seats have been prescribed for admission into the Medical Colleges of the Karnatak University, the Bangalore University and the Mysore University. In Bangalore University there is only one Medical College. For Karnatak University two Medical Colleges are attached. I am speaking of Government Colleges. I am not speaking of the private colleges. So far as Mysore University is concerned, there is only one Medical College which is attached to it. The number of students are more, the number of colleges are more and the number of districts attached to Mysore University are large, with the result, what has happened in the Mysore University is that in the general pool it has come to 73 per cent, marks; seats are limited to those who have obtained 73 per cent. Whereas in Karnatak University, I am told, it is about 66 or 67 per cent. And in Bangalore University also it is about 67 per cent. The result is, in Mysore University the students who have to come in the general pool are under terrible handicap. In Rule 9 or so, it is stated that transfers can be done from one University to the other. If the Government feels, they may transfer a certain percentage of seats from one University to the other. But that has not happened. I am not at all worried about the Karnatak University or the Bangalore University I have no grievance that students who have obtained 66 or 67 per cent are getting admission to the Medical Colleges of those two Universities. What I am worried is about the students who are seeking admission to the Medical College of the Mysore University. In Mysore University quite a large number of students who ought to be admitted, do not get seats, and that is the grievance. When this handicap of the students of Mysore University came to my notice, I addressed a letter to the Hon. Chief Minister and also to the Hon. Minister for Health and requested them to redress the grievance. What has happened in Mysore University is, most of the seats in the general pool are taken away by our students from South Canara for the reason that they are intelligent. I am not finding any fault with them. If you see the list nearly 70 to 80 seats go to South Canara District.

ಶ್ರೀಮತಿ ಕೆ. ಲೀಲಾವತಿ ರೈ.—ಸೌತ್ ಕೆನರಾದವರಿಗೆ ಕೊಡಬಾರದು ಎನ್ನುವುದು ಮಾನ್ಯ ಸದಸ್ಯರ ಉದ್ದೇಶವೋ ?

ಶ್ರೀ ಎಚ್. ಸಿದ್ಧವೀರಪ್ಪ.—ನೀವು ಬಹಳ ಬುದ್ಧಿವಂತರು. ಮೊದಲು ಕರ್ನಾಟಕ ಯೂನಿವರ್ಸಿಟಿಯಲ್ಲಿದ್ದಿರಿ. ಅಲ್ಲಿನವರಿಗೆ ಸೀಟು ಸಿಕ್ಕುವುದಿಲ್ಲವೆಂದು ನಿಮ್ಮನ್ನು ಮೈಸೂರು

(ಶ್ರೀ ಎಚ್. ಸಿದ್ಧವೀರಪ್ಪ)

ಯೂನಿವರ್ಸಿಟಿಗೆ ಕಳುಹಿಸಿಬಿಟ್ಟರು. ಮೈಸೂರು ಯೂನಿವರ್ಸಿಟಿಗೆ ಇನ್ನೂ 50 ಸೀಟು ಜನರಲ್ ಪೂಲ್‌ನಲ್ಲಿ ಕೊಡಿ. ತಮಿಳುನಾಡಿನಲ್ಲಿ ಇದೇ ರೀತಿ ರೀಜನ್‌ವೈಸ್ ಫಿಕ್ಸ್ ಮಾಡಿದ್ದು ಸರಿಯಿಲ್ಲ ಎಂದು ಕೆಲವು ಹುಡುಗರು ಸುಪ್ರೀಂ ಕೋರ್ಟಿಗೆ ಹೋದರು. ರೀಜನ್‌ವೈಸ್ ಮಾಡುವುದು ಸರಿಯಲ್ಲ, ಜನರಲ್ ಪೂಲ್ ಇರಬೇಕು ಎಂದು ಸುಪ್ರೀಂ ಕೋರ್ಟ್ ಒಂದು ತೀರ್ಪು ಕೊಟ್ಟಿದೆ. ಆದ್ದರಿಂದ ನಾನು ತಮಗೆ ಹೇಳುವುದೇನೆಂದರೆ ಮೈಸೂರು ಯೂನಿವರ್ಸಿಟಿಯಲ್ಲಿ ಈ ಕಡೆ ಉಳಿದಿರತಕ್ಕಂಥ 9 ಜಿಲ್ಲೆಗಳಲ್ಲಿರತಕ್ಕಂತಹವರಿಗೆ ಏನು ಕಡಿಮೆಯಾಗಿದೆಯೋ ಅದನ್ನು ಆ ಹುಡುಗರಿಗೆ ಭರ್ತಿಮಾಡಿ ಕೊಡಬೇಕಾದರೆ ಮೈಸೂರು ಯೂನಿವರ್ಸಿಟಿಗೆ ಹೆಚ್ಚಿಗೆ ಸೀಟುಗಳನ್ನು ಮಾಡಬೇಕು. ಈಗ ಪ್ರೈವೇಟ್ ಮೆಡಿಕಲ್ ಕಾಲೇಜುಗಳು ಏನಿವೆಯೋ ಅಲ್ಲಿ ಒಂದೊಂದು ಸೀಟಿಗೆ 20 ಸಾವಿರ, 30 ಸಾವಿರ, 40 ಸಾವಿರ ಹೀಗೆ ಕೊಡಬೇಕಾಗಿದೆ. ಮಾನ್ಯ ಶ್ರೀ ಕೌಲಾಲಂಪೂರ್ ಅವರು ದಾವಣಗೆರೆಯಲ್ಲಿ ಒಂದು ಸೀಟಿಗೆ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇಂತಹ ಪ್ರೈವೇಟ್ ಮೆಡಿಕಲ್ ಕಾಲೇಜುಗಳಲ್ಲಿ ಏನು ಸೀಟುಗಳು ಇವೆಯೋ ಅಲ್ಲಿ ಮೈಸೂರು ಕಾಲೇಜಿನ ಹುಡುಗರಿಗೆ ಮೆರಿಟ್‌ನಲ್ಲಿರತಕ್ಕವರಿಗೆ ನೀವು ರಿಜರ್ವ್ ಮಾಡಿದರೆ ಬಹಳ ಅನುಕೂಲಮಾಡಿದಂತಾಗುತ್ತದೆ. ಅಲ್ಲಿ ಆಗತಕ್ಕ ಅನ್ಯಾಯಗಳನ್ನು ತಪ್ಪಿಸಿದಂತಾಗುತ್ತದೆ. ಇದಕ್ಕೆ ಸರ್ಕಾರದವರು ಸಹಾಯ ಮಾಡಬೇಕೆಂದು ನಾನು ಮತ್ತೊಮ್ಮೆ ಹೇಳುತ್ತೇನೆ. ಬಾಕಿ ಯೂನಿವರ್ಸಿಟಿಯವರ ಮೇಲೆ ಯಾವ ಅಬ್‌ಜಕ್ಷನ್ ಹೇಳುತ್ತಾ ಇಲ್ಲ. ಮೈಸೂರಿನಲ್ಲಿ 9 ಜಿಲ್ಲೆಗಳಲ್ಲಿರತಕ್ಕ ವಿದ್ಯಾರ್ಥಿಗಳಿಗೆ ಏನೇನು ಅನಾನುಕೂಲಗಳು, ತೊಂದರೆಗಳು ಆಗಿವೆಯೋ ಅವನ್ನು ಸರಿಪಡಿಸಬೇಕು. ಅನೇಕ ಕಾಲೇಜುಗಳಲ್ಲಿ ಸೀಟುಗಳನ್ನು 50 ರಿಂದ 75ರ ವರೆಗೆ ಜಾಸ್ತಿ ಮಾಡಿ ಎಂದು ನಾನು ಹೇಳುತ್ತೇನೆ. ಒಟ್ಟಿನಲ್ಲಿ ಅನ್ಯಾಯ ಕಡಿಮೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ಸೌತ್ ಕೆನರಾದವರಿಗೆ ಒಂದು ಯೂನಿವರ್ಸಿಟಿಯನ್ನು ಬಹಳ ಜಾಗ್ರತೆಯಾಗಿ ಮಾಡಿಕೊಟ್ಟರೆ ಅನುಕೂಲವೆಂದು ಮಾನ್ಯ ಶ್ರೀ ಧರ್ಮವೀರ ಅವರು ಹೇಳಿದ್ದಾರೆ. ಆ ಪ್ರಕಾರ ಮಾಡಿದರೆ ಅವರಿಗೆ ಇನ್ನೂ ಹೆಚ್ಚಿಗೆ ಅನುಕೂಲವಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಎಸ್. ಶಿವಪ್ಪ.—ಈಗ ಮಾನ್ಯ ಶ್ರೀ ಸಿದ್ಧವೀರಪ್ಪನವರು ತಂದಿರತಕ್ಕ ವಿಷಯವನ್ನು ನಾನು ಅನುಮೋದನೆ ಮಾಡುತ್ತೇನೆ. ಮೈಸೂರು ರಾಜ್ಯದಲ್ಲಿ 4 ವಿಶ್ವವಿದ್ಯಾನಿಲಯಗಳಿವೆ. ಇವತ್ತು ಮೆಡಿಕಲ್ ಕಾಲೇಜಿನಲ್ಲಾಗಲೀ, ಇಂಜಿನಿಯರಿಂಗ್ ಕಾಲೇಜಿನಲ್ಲಾಗಲೀ ಸೀಟುಗಳನ್ನು ವಿತರಣೆ ಮಾಡಲು ಒಂದು ಪೂಲ್ ಮಾಡಿದ್ದಾರೆ. ಆದರೆ ಎಲ್ಲಾ ಕಾಲೇಜು ಅಡ್ಮಿಷನ್‌ಗಳಿಗೂ ಅನ್ವಯವಾಗುವಂಥ ಒಂದು ಯೂನಿಫಾರಂ ಕ್ವಾಲಿಫಿಕೇಷನ್ ಇಲ್ಲ. ಪಿ.ಯು.ಸಿ. ಪಾಸ್ ಮಾಡಿದಂಥ ವಿದ್ಯಾರ್ಥಿ ಯಾವುದೇ ವಿಶ್ವವಿದ್ಯಾನಿಲಯದಲ್ಲಿರಲಿ, ಮೆಡಿಕಲ್ ಕಾಲೇಜಿನಲ್ಲಿ ಅವನಿಗೆ ಸೀಟು ಸಿಗಬೇಕು.

ಶ್ರೀ ವೈ. ರಾಮಕೃಷ್ಣ (ಆರೋಗ್ಯ ಶಾಖೆಯ ಮಂತ್ರಿಗಳು).—ಮೈಸೂರು ಯೂನಿವರ್ಸಿಟಿಯಲ್ಲಿ ಮತ್ತು ಬೆಂಗಳೂರು ಯೂನಿವರ್ಸಿಟಿಯಲ್ಲಿ ಪಿ.ಸಿ.ಬಿ. ಅಥವಾ ಸಿ.ಬಿ.ಜಡ್. ಆದರ ಮ್ಯಾಗ್ಸಿಮಂ 300. ಕರ್ಣಾಟಕ ಯೂನಿವರ್ಸಿಟಿಯಲ್ಲಿ ಮೂರನೆಯ ಪಾರ್ಟಿಗೆ 4 ಸಬ್ಜೆಕ್ಟ್‌ಗಳು 450 ಅಂಕಗಳು. ಸಿಲೆಬಸ್ ಒಂದೇ ಇಲ್ಲ, ಇಟ್ಟಿರತಕ್ಕ ಅಂಕಗಳು ಒಂದೆ ಇಲ್ಲ. ಆದ್ದರಿಂದ ಯೂನಿವರ್ಸಿಟಿವೈಜ್ ನಾವು ಫಾಲೊ ಮಾಡುತ್ತಿದ್ದೇವೆ.

ಶ್ರೀ ಎಸ್. ಶಿವಪ್ಪ.—ಬೆಂಗಳೂರು ಯುನಿವರ್ಸಿಟಿ ಮತ್ತು ಮೈಸೂರು ಯೂನಿವರ್ಸಿಟಿಗಳಲ್ಲಿ ಪಿ.ಸಿ.ಬಿ. ಮೂರು ಸಬ್ಜೆಕ್ಟ್ಸ್. ಕರ್ಣಾಟಕ ಯೂನಿವರ್ಸಿಟಿಯಲ್ಲಿ 4 ಸಬ್ಜೆಕ್ಟ್ಸ್ ಇವೆ. ಇವರಿಗೂ ಅವರಿಗೂ ಕೋರ್ಸ್ ಒಂದೇ ಇದೆ, ವ್ಯತ್ಯಾಸವಿಲ್ಲ. ಮೆಡಿಕಲ್ ಕಾಲೇಜಿನಲ್ಲಿ ಯೂನಿಫಾರಂ ಸಿಲೆಬಸ್ ಇದೆ. ಈ ಕಾಲೇಜುಗಳಿಗೆ ವಿದ್ಯಾರ್ಥಿಗಳನ್ನು ಸೇರಿಸುವಾಗ ಯೂನಿಫಾರಂ ಸ್ಟ್ಯಾಂಡರ್ಡ್ ಆಫ್ ಕೋರ್ಸ್ ಇರಬೇಕು. ಮಾನ್ಯ ಶ್ರೀ ಸಿದ್ಧವೀರಪ್ಪನವರು ಹೇಳಿದ ಹಾಗೆ ಮೈಸೂರು ಯೂನಿವರ್ಸಿಟಿಯಲ್ಲಿ ಇರುವ ವಿದ್ಯಾರ್ಥಿ ಸೇಕಡ 70ಕ್ಕೆ ನಿಂತುಹೋಗಿದ್ದಾನೆ. ಬೆಂಗಳೂರು ಯೂನಿವರ್ಸಿಟಿಯಲ್ಲಿರುವ ವಿದ್ಯಾರ್ಥಿ ಒಂದೇ ಸಬ್ಜೆಕ್ಟ್‌ನಲ್ಲಿ ಸೇಕಡ 67ಕ್ಕೆ ನಿಂತಿದ್ದಾನೆ. ಯಾರೇ ಆಗಿರಲಿ ಅವರಿಗೆ ಅದು ಕಾಮನ್ ಆಗಿ ಇರಬೇಕು. ಎಲ್ಲರಿಗೂ ಒಂದೇ ವಿಧವಾದಂಥ ಅಂಕಗಳನ್ನು ಗಣನೆಗೆ ತೆಗೆದುಕೊಂಡು ಹಂಚಬೇಕು. ಪಾಪ್ಯುಲೇಷನ್ ಮೇಲೆ ಮಾಡಿದ್ದರೆ ಅದು ಒಂದು ತರಹ ಇರುತ್ತಿತ್ತು ಪ್ರೊಪೋರ್ಷನೇಟ್ ಆಗಿ ಬೆಂಗಳೂರು ಯೂನಿವರ್ಸಿಟಿ 7.25 ಲಕ್ಷ ಜನಸಂಖ್ಯೆ ಇದೆ. ಮೈಸೂರು ಯೂನಿವರ್ಸಿಟಿಗೆ ಎಷ್ಟು ಜನ ಪಾಪ್ಯುಲೇಷನ್ ಇರಬೇಕೆಂದು ಹೇಳಿದೆ ಅದನ್ನು ತಿಳಿಸಬೇಕು. ಯಾವ ಆಧಾರದ ಮೇಲೆ ತಾವು ಸೀಟುಗಳನ್ನು ಹಂಚುತ್ತೀರಿ? ಈ ಸೀಟುಗಳ ಹಂಚಿಕೆಯಲ್ಲಿ ವಿದ್ಯಾರ್ಥಿ

ಗಳಿಗೆ ಸಮಾಧಾನ ಬರುವ ರೀತಿಯಲ್ಲಿ ಸೀಟುಗಳನ್ನು ವಿತರಣೆಮಾಡುವುದು ಒಳ್ಳೆಯದೆಂದು ನಾನು ಹೇಳುತ್ತೇನೆ.

†SRI Y. RAMAKRISHNA.—Government in their order No. HMA 96 MME 70 dated 4th July 1970, Rules regulating the selections for admission to four Government Medical Colleges and 59 seats in the four Private Medical Colleges in the State for the academic year 1970-71 have been issued. In accordance with the provisions of the said rules, Government constituted a Committee consisting of the following members, for selection of students for admission to Medical College mentioned above :

1	Dr. H. G. Sattur, Director of Health and Family Planning Services, Bangalore.	Chairman
2	Dr. B. S. Jirge, Dean, Jawaharlal Nehru Medical College, Belgaum.	Member
3	Dr. P. R. Desai, Director, Post-Graduate and Research Institute and *Ex-officio* Superintendent, Bowring and Lady Curzon Hospital, Bangalore.	Member
4	Dr. Y. P. Rudrappa, Dean, Bangalore Medicial College, Bangalore.	Member
5	Dr. M. Ramu, Vice-Dean, Victoria Hospital, Bangalore...	Member-Secretary.

The Committee after careful consideration and in strict conformity with the rules, made selections and announced the lists of the selected candidates on 6th October 1970. Except the rules issued by Government, copies of which have been supplied to the candidates, Government have not issued any circular, notification, directions or instructions in the matter to the Selection Committee.

The selection of candidate is made universitywise. However, the Committee is empowered to allot at their discretion some of the selected candidates not exceeding 20 per cent of the seats from one university to another university in the State. The curriculam, the nature of study and the subjects in the three universities of Mysore, Bangalore and Karnatak being different, the distribution of seats, university-wise is considered to be the only practical basis.

(SRI Y. RAMAKRISHNA)

The admission strength of Medical Colleges, Universitywise is as follows:

I. Mysore University:	*Number of seats*
(i) Government College, Mysore (Government College)	200 *plus* 15 (lady candidates for family planning—Statewise).
(ii) Kasturba Medical College, Manipal (Private College).	20 reserved seats (10 per cent of admission strength of 200)
iii) J. J. M. Medical College, Davangere (Private College)	15 reserved seats (10 per cent of admission strength of 150)
Total ...	235 *plus* 15 seats under Family Planning for ladies.
II. Bangalore University:	
(i) Medical College, Bangalore (Government college)	200
III. Karnatak University:	
(i) Karnatak Medical College, Hubli (Government college)	200
(ii) Medical College, Bellary, (Government college)	150
(iii) Medical College, Gulbarga, (Private college)	12 reserved seats (10 per cent of admission strength of 120)
(iv) J. N. Medical College, Belgaum (Private)	12 reserved seats (10 per cent of admission strength of 120)
Total ...	374 seats.

The number of applications received and seats allotted by the Selection Committee, Universitywise are as follows:

	Name of University	*Applications received*	*No. of seats allotted*
1	Bangalore ...	1,160	223
2	Mysore ...	1,332	275
3	Karnatak ...	1,257	326 (including 4 seats for repariates from Burma, Ceylon and Mosambique and 3 for Goa)

The Hon. member Sri H. Siddaveerappa has raised the following contentions:

(i) Due to different percentage of marks needed for admission differing from University to University almost amounting to discrimination, a number of deserving boys in Mysore University are deprived of seats.

(ii) The rules of admission have worked to the detriment of the Mysore University students, who have a large number of applicants as there are larger number of colleges in Mysore University.

(iii) Private Colleges have been collecting donation from students coming from outside the State and also coming from outside the country to the detriment of the students of the State.

As regards the contention No. (i), it is true that the percentage of marks secured by the Mysore University students is comparatively higher than the Bangalore University and much higher than the students of the Karnatak University.

The following table will show the percentage of marks obtained by the last student selected in different University category-wise :

1970-71	*Bangalore University*		*Mysore University*		*Karnatak University*	
	GP	SEB	GP	SEB	GP	SEB
P.U.C.	70%	59. 3%	73.3%	61%	65.5%	56.6%
Graduates	63.4%	55. 8%	64.9%	59.3%	59.8%	50.7%

In this connection, it may be stated that Karnatak University students have to study in P.U.C. four subjects, *viz.*, P.C.B. and M. (Physics, Chemistry, Biology and Mathematics), whereas in Mysore and Bangalore Universities, the students have to study three subjects in P.U.C., *viz.*, P.C.B. (Physics, Chemistry and Biology) or C.B.Z. (Chemistry, Botany and Zoology). In the selection for admission to Medical Colleges, P.C.B. marks are only taken. In respect of students in Karnatak University marks obtained in Mathematics are excluded. The percentage of marks in the case of Bangalore and Mysore Universities students is calculated on 300 marks while the percentage of marks in the case of Karnatak University students is calculated on 450 marks. Due to this anomaly the percentage of marks scored by the Karnatak University students in the qualifying subjects (P.C.B.) will naturally be lower than the Mysore and Bangalore University students.

As regards contention No. (ii), the number of applications received and the number of seats allotted under different Universities in the year 1970-71 are as follows :—

University	*No. of applications received.*	*No. of seats available*	*No. of seats actually allotted*
Bangalore	1,160	200	223
Mysore	1,332	235+15 (FP	275
Karnatak	1,257	374 Statewise)	326

(In the case of both Bangalore and Mysore Universities, they have exercised their discretion in making use of Rule 9 and allotted more seats).

(SRI Y. RAMAKRISHNA)

From the above figures it is clear that the number of students seeking admission in the three Universities of the State is more or less equal. As already explained in the earlier paras the present distribution of seats Universitywise is the only practical basis for distribution of seats among the three Universities. However the selection Committee is empowered to use its discretion for allotting a few seats from one University to another, which the Selection Committee has actually done.

As regards the third contention, it is true that the private medical colleges are taking capitation fees from the students applying for seats except the seats reserved for Government. The State Government is not paying any maintenance grant to these private medical colleges, though clinical facilities in Government Hospitals are given. However, the managements of these private colleges have given assurance that 60 per cent of the admissions would be given to the students of the State.

I may, however, inform the hon. members of the House that Government for the first time were able to get the consent of all the private medical colleges except the St. John Medical College, Bangalore, in this State, to accept the Governing Body rules, according to which 3 nominees of the State Government (Secretary to Government, Health and Municipal Administration Department, Deputy Commissioner of the District concerned and the Dean of the Medical College) are appointed out of the 7 members of the Governing Body. The remaining 4 members represent the Management of the private Medical College concerned. The salient features of these rules are that three Sub-committees have already been constituted :—

(1) for recruitment of staff,

(2) for construction of buildings, and

(3) for purchase of equipment.

The Budget of each Medical College should be got approved by the Governing Body at the beginning of every year and their assets and liabilities are subject to the control of the Governing Body.

I am very happy to inform the Hon. members of this House that after the adoption of these rules, two quarterly meetings have been held in all the private medical colleges and Government nominees have been regularly attending these meetings and they have kept a keen watch over the administration of the private medical colleges. Government are anxious to lay more restrictions on the admissions in private medical colleges, so as to give more representation to Mysoreans and distribute the seats on merit basis even after collecting the capitation fee prescribed.

Sometimes, Government feel that taking over of these private medical colleges is also necessary. But unfortunately, the circumstances are not congenial to take over these private medical colleges by Government for these reasons :—

(1) According to the survey conducted by the Government of India, for each M.B.B.S. Doctor, it costs the Exchequer a sum of about Rs. 80,000 (both recurring and non-recurring), and it is a question whether it is desirable on the part of the State Government to spend such a huge amount at a time when our State is experiencing surplus of Doctors.

(2) It involves huge expenditure running to a few crores of rupees to take over these private medical colleges and it will be a great burden on the Exchequer especially at a time when Government are facing financial stringency.

However, Government are seriously considering all these points and they will take a definite decision in the near future.

It was decided in the Conference of the Health Ministers at Aurangabad that the admission strength of any medical college should not exceed 150 under any circumstances. I hope this decision will be considered for implementation in the coming years.

ಶ್ರೀ ಎಚ್. ಬಿ. ಜ್ವಾಲನಯ್ಯ.—ತಾವು ಮೈಸೂರು ಯೂನಿವರ್ಸಿಟಿಯಲ್ಲಿ ಮತ್ತು ಬೆಂಗಳೂರು ಯೂನಿವರ್ಸಿಟಿಯಲ್ಲಿ ಮೂರು ಸಬ್ಜೆಕ್ಟ್ಸ್ ಬರುತ್ತದೆ, ಕರ್ಣಾಟಕ ಯೂನಿವರ್ಸಿಟಿಯಲ್ಲಿ 4 ಸಬ್‌ಜೆಕ್ಟ್ಸ್ ಬರುತ್ತದೆ, ಮತ್ತು ಅದರಲ್ಲಿ ಮ್ಯಾತ್‌ಮ್ಯಾಟಿಕ್ಸ್ ಕೂಡ ಬರುತ್ತದೆ ಎಂದು ಹೇಳಿದ್ದೀರಿ. ಅವರಿಗೆ ಮ್ಯಾತ್‌ಮ್ಯಾಟಿಕ್ಸ್ ಸೇರಿಸಿರುವುದರಿಂದ, ಇದು ಅನುಕೂಲವಾಗುತ್ತದೆ. ಏಕೆಂದರೆ, ಮ್ಯಾತ್‌ಮ್ಯಾಟಿಕ್ಸ್‌ನಲ್ಲಿ ಸಾಧಾರಣವಾಗಿ ಜಾಸ್ತಿ ನಂಬರು ಬರುತ್ತದೆ. ಆದ್ದರಿಂದ ಮೊದಲನೆಯದಾಗಿ, ಈ ಮ್ಯಾತ್‌ಮ್ಯಾಟಿಕ್ಸ್ ಬಿಟ್ಟು ಎಲ್ಲಾ ಯೂನಿವರ್ಸಿಟಿಗೂ ಒಂದೇ ವಿಧವಾದ ಮೂರು ಸೈಯನ್ಸ್ ಸಬ್‌ಜೆಕ್ಟ್‌ಗಳ ನಂಬರುಗಳನ್ನು ಮಾತ್ರ ಲೆಕ್ಕಕ್ಕೆ ತೆಗೆದುಕೊಳ್ಳುವಂತೆ ಏರ್ಪಾಡು ಮಾಡುತ್ತೀರಾ ? ಎರಡನೆಯದು—ಹೆಣ್ಣು ಮಕ್ಕಳಿಗೆ ಈಗ ಹನ್ನೆರಡೂವರೆ ಪರ್‌ಸೆಂಟ್ ಏನೋ ಸೀಟುಗಳನ್ನು ಕೊಡುತ್ತಿದ್ದೀರಿ. ಈ ನಂಬರನ್ನು ಜಾಸ್ತಿ ಮಾಡಿದರೆ, ಹೆಚ್ಚು ಲೇಡಿ ಡಾಕ್ಟರುಗಳು ಮುಂದೆ ಬರುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ತಾವು ಇವು ಎರಡನ್ನು ಪರಿಶೀಲನೆ ಮಾಡುತ್ತೀರಾ ?

1-00 P.M.

ಶ್ರೀ ಬಿ. ದೊಡ್ಡಬೋರೇಗೌಡ.—ಈಗತಾನೆ ಮಾನ್ಯ ಮಂತ್ರಿಗಳು ಹೇಳಿದರು ಒಬ್ಬ ವಿದ್ಯಾರ್ಥಿ ಮೆಡಿಕಲ್ ಪದವೀಧರನಾಗಬೇಕಾದರೆ ಅವನಿಗೆ ಸರ್ಕಾರದ ಕಡೆಯಿಂದ 80 ಸಾವಿರ ರೂಪಾಯಿಗಳು ಖರ್ಚಾಗುತ್ತದೆ ಎಂದು. ಕೇಂದ್ರ ಸರ್ಕಾರದವರು ಒಬ್ಬ ವಿದ್ಯಾರ್ಥಿ ಮೆಡಿಕಲ್ ಪದವೀಧರನಾಗಬೇಕಾದರೆ 85 ಸಾವಿರ ರೂಪಾಯಿಗಳು ಖರ್ಚಾಗುತ್ತದೆ ಎಂದು ಹೇಳಿದ್ದು ಪತ್ರಿಕೆಯಲ್ಲ ಬಂದಿತ್ತು. ಅದು ಹಾಗಿರಲಿ. ಮೈಸೂರು ವಿಶ್ವವಿದ್ಯಾನಿಲಯಕ್ಕೆ 11 ಜಿಲ್ಲೆಗಳನ್ನು ಸೇರಿಸಿದ್ದಾರೆ. 11 ಜಿಲ್ಲೆಗಳಿಂದ 1332 ಅಪ್ಲಿಕೇಷನ್‌ಗಳು ಬಂದಿದ್ದವು ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಇದರಲ್ಲಿ 275 ಸೀಟುಗಳನ್ನು ಮಾತ್ರ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಮಾನ್ಯ ಮಂತ್ರಿಗಳು ಹೇಳಿದಂತಹ ಸ್ಟೇಟ್‌ಮೆಂಟ್ ಪ್ರಕಾರ 11 ಜಿಲ್ಲೆಗಳಿಗೆ ಗ್ರಾಮಾಂತರ ಪ್ರದೇಶಕ್ಕೆ 40 ಸೀಟುಗಳನ್ನು ಮಾತ್ರ ಕೊಟ್ಟಿದ್ದಾರೆಂದು ಗೊತ್ತಾಗುತ್ತದೆ. ಇದನ್ನು ನೋಡಿದರೆ

(ಶ್ರೀ ಬಿ. ದೊಡ್ಡಬೋರೇಗೌಡ)

ರೈತರ ಮಕ್ಕಳಿಗೆ ಸಾಕಷ್ಟು ಸೀಟು ಮೆಡಿಕಲ್ ಕಾಲೇಜಿನಲ್ಲಿ ಸಿಕ್ಕಿಲ್ಲ ಎಂದು ತಿಳಿಯುತ್ತದೆ. ಗ್ರಾಮಾಂತರ ಪ್ರದೇಶದವರು ಶೇಕಡಾ 74 ಭಾಗ ತೆರಿಗೆಯನ್ನು ಕೊಡುತ್ತಿದ್ದಾರೆ. ಹೀಗಿರುವಾಗ ಸಿಟಿ ಮತ್ತು ಟೌನುಗಳಲ್ಲಿರುವ ಮಕ್ಕಳಿಗೆ ಹೆಚ್ಚು ಸೀಟು ಕೊಟ್ಟು ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಮಕ್ಕಳಿಗೆ ಕಡಿಮೆ ಸೀಟು ಕೊಟ್ಟಿರುವುದನ್ನು ನೋಡಿದರೆ ಸರ್ಕಾರದವರು ಈ ಬಗ್ಗೆ ಮಲತಾಯಿಧೋರಣೆಯನ್ನು ಅನುಸರಿಸುತ್ತಿದ್ದಾರೆ ಎಂದು ಗೊತ್ತಾಗುತ್ತಿದೆ ಅಲ್ಲವೇ ?

ಶ್ರೀ ಪಿ. ಎಲ್. ಶಿವಪ್ಪ.—ಈಗ ಕಡಿಮೆ ಆದಾಯ ಎಂದರೆ ವಾರ್ಷಿಕವಾಗಿ 1,200 ರೂಪಾಯಿಗಳು ಎಂದು ಸರ್ಕಾರದವರು ನಿಗದಿ ಮಾಡಿದ್ದಾರೆ. ಕೆಲವು ರೈತರಿಗೆ 4 ಎಕರೆ, 3 ಎಕರೆ, 5 ಎಕರೆ ಜಮೀನು ಇರುತ್ತದೆ. ಅದಕ್ಕೆ ರೆವಿನ್ಯೂ ಅಥಾರಿಟಿಯವರು ಇಷ್ಟು ಬೆಳೆ ಆಗುತ್ತದೆ ಎಂದು ಹೇಳುತ್ತಾರೆ. ಅಂಥಾ ಸಂದರ್ಭದಲ್ಲಿ ಕಡಿಮೆ ಆದಾಯ ಎಂದು ರೈತರ ಮಕ್ಕಳಿಗೆ ಸರ್ಟಿಫಿಕೇಟ್ ಒದಗಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಇದನ್ನು ರಿವೈಜ್ ಮಾಡುವುದಕ್ಕೆ ವಿಚಾರ ಮಾಡುತ್ತೀರಾ ? ಎರಡನೆಯದು ಹೆಲ್ತ್ ಯೂನಿಟ್‌ಗಳಲ್ಲಿ ಲೇಡಿ ಡಾಕ್ಟರುಗಳನ್ನು ಸರಿಯಾಗಿ ನೇಮಕ ಮಾಡುತ್ತಿಲ್ಲ. ನಮ್ಮ ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ನಲ್ಲಿ 5-6 ಜನ ಲೇಡಿ ಡಾಕ್ಟರುಗಳು ಇರಬೇಕಾದ ಜಾಗದಲ್ಲಿ ಒಬ್ಬ ಲೇಡಿ ಡಾಕ್ಟರನ್ನು ಹಾಕಿದ್ದಾರೆ. ಆದ್ದರಿಂದ ಎಲ್ಲೆಲ್ಲಿ ಲೇಡಿ ಡಾಕ್ಟರುಗಳ ಅವಶ್ಯಕತೆ ಇದೆಯೋ ಅಂಥಾ ಜಾಗಗಳಿಗೆ ಲೇಡಿ ಡಾಕ್ಟರುಗಳನ್ನು ಪೋಸ್ಟ್ ಮಾಡುವುದಕ್ಕೆ ಕೂಡಲೇ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎನ್. ಎ. ಚನ್ನೇಗೌಡ.—ಈಗ ಬೆಂಗಳೂರು ಯೂನಿವರ್ಸಿಟಿಯಲ್ಲಿ 223 ಜನಗಳಿಗೆ ಸೀಟು ಕೊಟ್ಟಿದ್ದಾರೆ. ಮೈಸೂರು ಯೂನಿವರ್ಸಿಟಿಯಲ್ಲಿ 275 ಜನ ವಿದ್ಯಾರ್ಥಿಗಳಿಗೆ ಸೀಟು ಕೊಟ್ಟಿದ್ದಾರೆ ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ 326 ಜನಗಳಿಗೆ ಸೀಟು ಕೊಟ್ಟಿದ್ದಾರೆ. ಅನೇಕ ವಿದ್ಯಾರ್ಥಿಗಳಿಗೆ ಸೀಟು ಸಿಕ್ಕಿಲ್ಲ. ಆದ್ದರಿಂದ ಸರ್ಕಾರದವರು ಆಯಾ ಯೂನಿವರ್ಸಿಟಿಯಲ್ಲಿರತಕ್ಕ ಅನುಕೂಲತೆಗನುಗುಣವಾಗಿ ಇನ್ನೂ ಎಷ್ಟೆಷ್ಟು ಜನಗಳಿಗೆ ಸೀಟುಗಳನ್ನು ಕೊಡುವುದಕ್ಕೆ ಅವಕಾಶ ಇದೆ ಎಂಬುದನ್ನು ತಿಳಿದುಕೊಂಡು ಅದನ್ನು ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನವರಿಗೆ ರೆಕಮೆಂಡ್ ಮಾಡಿ ಅವರಿಂದ ಪರ್ಮಿಷನ್ ತರಿಸಿಕೊಂಡು ಹೆಚ್ಚು ಜನ ವಿದ್ಯಾರ್ಥಿಗಳಿಗೆ ಅವಕಾಶ ಮಾಡಿಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ನಾಗಪ್ಪ.—ಈ ಮೆಡಿಕಲ್ ಕಾಲೇಜುಗಳಲ್ಲಿ ಸೀಟುಗಳನ್ನು ಹಂಚುವಾಗ ಕೆಲವು ವ್ಯತ್ಯಾಸಗಳು ಬಂದಿವೆ. ಆದ್ದರಿಂದ 19 ಜಿಲ್ಲೆಗಳಿಗೂ ಸಮಾನವಾಗಿ ಆಯಾ ಜಿಲ್ಲೆಗಳ ಪಾಪ್ಯುಲೇಶನ್ ಬೇಸಿಸ್ ಮೇಲೆ ಮೂರು ಯೂನಿವರ್ಸಿಟಿಗಳಿಗೂ ಸೀಟುಗಳನ್ನು ಹಂಚುವುದಕ್ಕೆ ಸಾಧ್ಯವಿದೆಯೋ ?

Sri S. R. BOMMAI.—Is the method of examination and standrad of examination differnt from University to University ? Will the Government recommend to the Universities to have uniform syllabus and uniform examination of P. U. C. ?

ಶ್ರೀ ಐ. ಸೋಮಶೇಖರಪ್ಪ.—ಸೆಂಟ್ ಜಾನ್ ಮೆಡಿಕಲ್ ಕಾಲೇಜಿನವರು ಗವರ್ನಿಂಗ್ ಬಾಡಿ ಕಂಟ್ರೋಲನ್ನು ಒಪ್ಪಿಕೊಂಡಿಲ್ಲ. ಆದ್ದರಿಂದ ಅವರು ಗೌರ್ನಿಂಗ್ ಬಾಡಿ ಕಂಟ್ರೋಲ್ ಒಪ್ಪಿಕೊಳ್ಳುವವರೆಗೆ ರೆಕಗ್ನಿಷನ್ ಕಿತ್ತು ಹಾಕುತ್ತೀರಾ ?

ಶ್ರೀ ಎಚ್. ಎನ್. ನಂಜೇಗೌಡ.—ಅಗ್ರಿಕಲ್ಚರಲ್ ಮತ್ತು ಮೆಡಿಕಲ್ ಕಾಲೇಜುಗಳಿಗೆ ಒಂದೇ ಕಾಲದಲ್ಲಿ ಸೀಟುಗಳನ್ನು ಹಂಚುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ವೈ. ರಾಮಕೃಷ್ಣ.—ಸ್ವಾಮಿ, ಈಗ ಮಾನ್ಯ ಸದಸ್ಯರು ಏನೇನು ಪ್ರಶ್ನೆಗಳನ್ನು ಕೇಳಿದ್ದಾರೆ ಅದಕ್ಕೆಲ್ಲಾ ಎಲ್ಲರಿಗೂ ಕೂಡ ಸಾಮಾನ್ಯವಾಗಿ ಹೈಕೋರ್ಟಿನವರು ಕೊಟ್ಟಿರತಕ್ಕ ಜಡ್ಜ್‌ಮೆಂಟ್‌ನಲ್ಲಿ ಉತ್ತರ ಸಿಕ್ಕುತ್ತದೆ. ಕೆಲವು ಮಾನ್ಯ ಸದಸ್ಯರು ಹೆಣ್ಣುಮಕ್ಕಳಿಗೆ ಸೀಟುಗಳನ್ನು ರಿಜರ್ವೇಷನ್ ಇಡಬೇಕು ಎಂದು ಹೇಳಿದರು. ಈಗಾಗಲೇ ಮೆರಿಟ್‌ಮೇಲೆ 20 ಪರ್ಸೆಂಟ್ ರಿಜರ್ವೇಷನ್ ಇದೆ. ಮತ್ತೆ ಇವರಿಗೆ ಹೆಚ್ಚು ರಿಜರ್ವೇಷನ್ ಇಟ್ಟರೆ ಅದು ಅಷ್ಟು ಸಮಂಜಸವಲ್ಲ ಎಂದು ಕಾಣುತ್ತದೆ. ಯಾವುದೇ ರಿಜರ್ವೇಷನ್ 50 ಪರ್ಸೆಂಟಿಗಿಂತ ಹೆಚ್ಚಿಗೆ ಇರಬಾರದು ಎಂದು ಹೈಕೋರ್ಟ್ ಆರ್ಡರ್ ಇದೆ. ಆದ್ದರಿಂದ ಅದನ್ನು ಹೆಚ್ಚು ಮಾಡುವುದಕ್ಕೆ ಆಗುವುದಿಲ್ಲ. ಈಗ ಸೀಟುಗಳನ್ನು ಯೂನಿವರ್ಸಿಟಿ ವೈಸ್ ಏನು ಹಂಚಿಕೆ ಮಾಡಲಾಗಿದೆ ಅದನ್ನು ಬಿಟ್ಟು

ಡಿಸ್ಟ್ರಿಕ್ಟ್‌ವೈಜ್ ಅಥವಾ ಪಾಪ್ಯುಲೇಷನ್ ಬೇಸಿಸ್ ಮೇಲೆ ಏತಕ್ಕೆ ಸೀಟುಗಳನ್ನು ಹಂಚಬಾರದು ಎಂದು ಕೆಲವು ಮಾನ್ಯ ಸದಸ್ಯರು ಕೇಳಿದರು. ಮದ್ರಾಸಿನಲ್ಲಿ ಅಗ್ರಿಕಲ್ಚರಲ್ ಕಾಲೇಜಿಗೆ ಡಿಸ್ಟ್ರಿಕ್ಟ್‌ವೈಜ್ ಸೀಟನ್ನು ಅನೌನ್ಸ್ ಮಾಡಿದ್ದರು. ಅದು ಸರಿಯಿಲ್ಲ. ಅದು ಅನ್‌ಕಾನ್‌ಸ್ಟಿಟ್ಯೂಷನಲ್ ಎಂದು ಸುಪ್ರೀಮ್ ಕೋರ್ಟಿನವರು ತೀರ್ಮಾನ ಕೊಟ್ಟಿದ್ದಾರೆ. ಆದ್ದರಿಂದ ಆ ರೀತಿ ಮಾಡುವುದಕ್ಕೆ ಆಗುವುದಿಲ್ಲ.

ಎಲ್ಲ ಮೂರು ವಿಶ್ವವಿದ್ಯಾನಿಲಯದವರು ಯೋಚನೆ ಮಾಡಿ ಒಂದು ಸಮಗ್ರವಾದಂಥ ಮತ್ತು ಒಂದೇ ರೀತಿಯ ಸಿಲಬಸ್ ಅನ್ನು ಏತಕ್ಕೆ ಹಾಕಿಕೊಳ್ಳಬಾರದು ಎಂದು ಕೆಲವರು ಹೇಳಿದರು; ಇದು ಒಂದು ಸಮಂಜಸವಾದಂತ ಸಲಹೆ ಎಂದು ನಾನು ತಿಳಿದುಕೊಂಡಿದ್ದೇನೆ. ನಾನು ಆರೋಗ್ಯ ಇಲಾಖೆಯನ್ನು ವಹಿಸಿಕೊಂಡ ಕೂಡಲೇ ಮೂರು ವಿಶ್ವವಿದ್ಯಾನಿಲಯದವರಿಗೂ ಕೂಡ ಒಂದೇ ರೀತಿಯ ಸಿಲಬಸ್‌ನ್ನು ಜಾರಿಗೆ ತರುವಂತೆ ಸಲಹೆ ಮಾಡಿದೆ. ಅವರೆ ಅವರುಗಳು ಒಂದೆಡೆ ಸೇರಿ ಈ ಬಗ್ಗೆ ಯಾವ ತೀರ್ಮಾನವನ್ನೂ ಇದುವರೆಗೆ ತೆಗೆದುಕೊಂಡಿಲ್ಲ. ಆ ರೀತಿ ಏನಾದರೂ ತೀರ್ಮಾನ ಕೈಕೊಂಡು ಮೂರು ವಿಶ್ವವಿದ್ಯಾನಿಲಯಗಳಲ್ಲಿಯೂ ಕೂಡ ಒಂದೇ ರೀತಿಯ ಸಿಲಬಸ್‌ನ್ನು ಜಾರಿಗೆ ತಂದರೆ ಮುಂದಿನ ವರ್ಷದಿಂದಲೇ ಸೀಟ್‌ಗಳನ್ನು ಎಲ್ಲ ವಿಶ್ವವಿದ್ಯಾನಿಲಯಗಳಿಗೂ ಕೂಡ ಒಂದೇ ರೀತಿ ಹಂಚುವುದಕ್ಕೆ ಏರ್ಪಾಡು ಮಾಡಬಹುದು, ಈಗ ಒಂದೊಂದು ವಿಶ್ವವಿದ್ಯಾನಿಲಯದಲ್ಲಿ ಒಂದೊಂದು ರೀತಿಯ ಸಬ್ಜೆಕ್ಟ್ಸ್ ಇರುವುದರಿಂದ ಏನು ಮಾಡುವುದಕ್ಕೂ ಸಾಧ್ಯವಾಗುತ್ತಿಲ್ಲ. ಮೈಸೂರು ವಿಶ್ವವಿದ್ಯಾನಿಲಯಕ್ಕೆ ಹೆಚ್ಚು ಸೀಟ್‌ಗಳನ್ನು ಏತಕ್ಕೆ ಅಲಾಟ್ ಮಾಡಬಾರದೆಂದು ಕೇಳಿದರು, ಈಗಾಗಲೇ ಸೆಲಕ್ಷನ್ ಕಮಿಟಿಯವರು 9ನೇ ರೂಲ್ಸ್‌ನ್ನು ಅನುಸರಿಸಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ 45 ಸೀಟ್‌ಗಳನ್ನು ಜಾಸ್ತಿ ಕೊಟ್ಟಿದ್ದಾರೆ. ಇದಕ್ಕಿಂತ ಜಾಸ್ತಿ ಕೊಡುವುದಕ್ಕೆ ರೂಲ್ಸಿನಲ್ಲಿ ಪ್ರಾವಿಜನ್ ಇಲ್ಲ. ಪ್ರಾವಿಜನ್ ಇದ್ದರೆ ಕೊಡಬಹುದಾಗಿತ್ತು. ಗ್ರಾಮಾಂತರ ಪ್ರದೇಶಗಳಿಂದ ಬಂದಂಥ ವಿದ್ಯಾರ್ಥಿಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಮೆಡಿಕಲ್ ಸೀಟ್ ಸಿಗುತ್ತಿಲ್ಲ, ಕಾರಣವೇನು ಎಂದು ಕೇಳಿದರು. ಮೆರಿಟ್ ಒಂದನ್ನೇ ಆಧಾರವಾಗಿಟ್ಟುಕೊಂಡು ಸೀಟ್‌ಗಳನ್ನು ಅಲಾಟ್ ಮಾಡಬೇಕೆಂದು ನಿಯಮವಿರುವುದರಿಂದ ಅದನ್ನೇ ನಾವು ಅನುಸರಿಸುತ್ತಿದ್ದೇವೆ.

ಶ್ರೀ ಎಂ. ನಾಗಪ್ಪ.—ಬಳ್ಳಾರಿ ಜಿಲ್ಲೆ ಮೊದಲು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಿತ್ತು. ವಿಶಾಲ ಮೈಸೂರು ಆದಮೇಲೆ ಆ ಜಿಲ್ಲೆಯನ್ನು ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ಸೇರಿಸಲು ಕಾರಣವೇನು ? ಇದರಿಂದ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಮೆಡಿಕಲ್ ಸೀಟ್‌ಗಳ ಅಲಾಟ್‌ಮೆಂಟ್ ಕಡಿಮೆಯಾಗುವುದಕ್ಕೆ ಕಾರಣವಾಗಲಿಲ್ಲವೇ ?

ಶ್ರೀ ವೈ. ರಾಮಕೃಷ್ಣ.—ಈಗ ನಾವು ಮೂರು ವಿಶ್ವವಿದ್ಯಾನಿಲಯಗಳಿಗೆ ಏನು ಸೀಟ್‌ಗಳನ್ನು ಅಲಾಟ್ ಮಾಡಿದ್ದೇವೆ ಅದರಲ್ಲಿ ಬಹಳಷ್ಟು ವ್ಯತ್ಯಾಸವೇನೂ ಇಲ್ಲ. ಇದ್ದರೆ 20 ರಿಂದ 50ರೊಳಗೆ ವ್ಯತ್ಯಾಸ ಇದೆ. ಆಯಾ ಜಿಲ್ಲೆಗಳಿಂದ ಬರತಕ್ಕಂಥ ಅರ್ಜಿಗಳ ಸಂಖ್ಯೆಯನ್ನು ನೋಡಿದರೆ ಈಗಿನ ಅಲಾಟ್‌ಮೆಂಟಿನಲ್ಲಿ ಅಷ್ಟೊಂದು ವ್ಯತ್ಯಾಸವೇನೂ ಇಲ್ಲ. ಆದ್ದರಿಂದ ಮಾನ್ಯ ನಾಗಪ್ಪನವರು ಹೇಳುವುದು ಅಷ್ಟೊಂದು ಸಮಂಜಸವಾಗಲಾರದು. ಅವರು ಈ ಬಗ್ಗೆ ಏನಾದರೂ ಸಲಹೆಗಳನ್ನು ಬರಹದಲ್ಲಿ ಕೊಟ್ಟರೆ ಅದನ್ನು ನಾನು ವಿಚಾರ ಮಾಡುತ್ತೇನೆ.

Mr. SPEAKER.—The House will now rise to meet again at 3-00 P.M.

The House adjourned for Recess at Thirteen minutes past One of the Clock and re-assembled at Fifteen Minutes past Three of the Clock.

[Mr. SPEAKER in the Chair]

Opposition Party in the Legislative Assembly

Sri AZEEZ SAIT.—Before the regular business starts, I want to know the position of the Opposition Party in this House. I was told that you

(SRI AZEEZ SAIT)

were good enough to say that you would be making an announcement on it at 1 O'clock today. Now it is 3-15 P. M. Besides separate seating arrangement for our Party has not been made.

MR. SPEAKER.—I never made such a promise. I stated that if documents duly signed come to me, I will take action. So far, nothing has happened in that direction.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಸ್ವಾಮಿ, ಈಗ ನಮ್ಮ ಪಕ್ಷದಲ್ಲಿ ನಾವು 37 ಜನ ಸದಸ್ಯರಿದ್ದೇವೆ. ಮೊದಲು ಎಸ್. ಪಿ. ಡಿ. ಪಕ್ಷದಲ್ಲಿ 47 ಜನ ಸದಸ್ಯರಿದ್ದರು. ಈಗ 37 ಇದ್ದಾರೆ. ನಮಗೆ ಪ್ರತ್ಯೇಕ ಸೀಟಿಂಗ್ ಅರೇಂಜ್‌ಮೆಂಟ್ ಮಾಡುವುದಾಗಿ ತಾವು ಹೇಳಿದ್ದಿರಿ. ಅದನ್ನು ಯಾವಾಗ ಮಾಡುವುದು ?

ಅಧ್ಯಕ್ಷರು.—ಮೊದಲು ಶ್ರೀ ಜ್ವಾಲನಯ್ಯನವರ ಮೋಷನ್ ಮುಗಿಯಲಿ. ಅನಂತರ ಅದನ್ನು ವಿಚಾರ ಮಾಡೋಣ.

ಶ್ರೀ ಎಲ್. ಶ್ರೀಕಂಠಯ್ಯ.—ಸ್ವಾಮಿ, ಈಗ ಪಿ. ಎಸ್. ಸಿ. ವರದಿಯ ಮೇಲಿನ ಚರ್ಚೆಯನ್ನು ಮುಂದುವರಿಸುವುದಿಲ್ಲವೇ ?

ಅಧ್ಯಕ್ಷರು.—ಶ್ರೀ ಜ್ವಾಲನಯ್ಯನವರ ಮೋಷನ್ 10–15 ನಿಮಿಷಗಳಲ್ಲೇ ಮುಗಿಯುತ್ತದೆ. ಅದಕ್ಕೆ ಮಂತ್ರಿಗಳು ಉತ್ತರ ಹೇಳಿದಮೇಲೆ ಅದನ್ನು ತೆಗೆದುಕೊಳ್ಳೋಣ.

Discussion on Matter of Public Importance for short duration re: failure of Potato Crop in Hassan District

† ಶ್ರೀ ಎಚ್. ಬಿ. ಜ್ವಾಲನಯ್ಯ (ಹಾಸನ).—ಸ್ವಾಮಿ, ಅಧ್ಯಕ್ಷರೇ, ಈಗ ನಾನು ಈ ಮಾನ್ಯ ಸಭೆಯ ಮುಂದೆ ಒಂದು ಬಹಳ ಮುಖ್ಯವಾದ ವಿಚಾರವನ್ನು ಚರ್ಚೆಮಾಡುವುದಕ್ಕೆ ನಿಂತಿದ್ದೇನೆ. ನಾನು ಮಂಡಿಸಬೇಕೆಂದಿರತಕ್ಕ ವಿಷಯವೇನೆಂಬುದನ್ನು ಸಭೆಗೆ ಈಗ ಅರಿಕೆ ಮಾಡಿಕೊಳ್ಳುತ್ತೇನೆ.

ಮೈಸೂರು ಸಂಸ್ಥಾನದ ಹಾಸನ ಜಿಲ್ಲೆಯಲ್ಲಿ ಅಪಾರವಾಗಿ ಆಲೂಗಡ್ಡೆಯನ್ನು ಬೆಳೆಯುತ್ತಾರೆಂಬ ವಿಚಾರ ಎಲ್ಲರಿಗೂ ತಿಳಿದಿರತಕ್ಕದ್ದೇ ಆಗಿದೆ. ಅಲ್ಲಿ ಪ್ರತಿ ವರ್ಷ ಸುಮಾರು 20 ಸಾವಿರ ಎಕರೆಗಳಿಗೆ ಕಡಮೆ ಇಲ್ಲದೆ ಆಲೂಗಡ್ಡೆಯನ್ನು ಬೆಳೆಯಲಾಗುತ್ತಿದೆ. ಅಲ್ಲಿ ಒಂದು ವರ್ಷದಲ್ಲಿ ಬಿತ್ತನೆಯಾಗತಕ್ಕ ಆಲೂಗಡ್ಡೆಯ ಬೆಲೆಯೇ ಸುಮಾರು 60 ಲಕ್ಷ ರೂಪಾಯಿ ಆಗಬಹುದು. ಅಂದರೆ ಸುಮಾರು ಒಂದು ಲಕ್ಷ ಇಪ್ಪತ್ತೈದು ಸಾವಿರ ಚೀಲ ಆಲೂಗಡ್ಡೆ ಬೀಜವನ್ನು ಅಲ್ಲಿ ವರ್ಷಂಪ್ರತಿ ಬಿತ್ತನೆ ಮಾಡಲಾಗುತ್ತಿದೆ. ಈ ಬೆಳೆಗೆ ಬರತಕ್ಕ ರೋಗಾದಿಗಳನ್ನು ತಡೆಗಟ್ಟಲು ಅಲ್ಲಿಯ ರೈತರು ವರ್ಷಂಪ್ರತಿ 5 ಲಕ್ಷ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದಾರೆ.

ಮೈಸೂರು ಸಂಸ್ಥಾನದಲ್ಲಿ ಹಾಸನ ಜಿಲ್ಲೆಯಲ್ಲಿ ವರ್ಷ ಒಂದಕ್ಕೆ 80 ಸಾವಿರ ಟನ್ನಿನಷ್ಟು ಆಲೂಗೆಡ್ಡೆಯನ್ನು ಅಗಾಧವಾದ ಪ್ರಮಾಣದಲ್ಲಿ ಬೆಳೆಯುತ್ತಾ ಇದ್ದೇವೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಇದರ ಬೆಲೆ ಸುಮಾರು 5 ರಿಂದ 6½ ಕೋಟಿ ರೂಪಾಯಿಗಳಷ್ಟು ಆಗುತ್ತದೆ. ಮೈಸೂರು ಸಂಸ್ಥಾನದಲ್ಲಿ ಲ್ಯಾಂಡ್ ರೆವಿನ್ಯೂ ಎಷ್ಟಿದೆ ಹೆಚ್ಚು ಕಡಿಮೆ ಅಷ್ಟೇ ಹಾಸನ ಜಿಲ್ಲೆಯ ರೈತರಿಂದ ಬರುತ್ತಾ ಇದೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಆದರೆ ಈ ಸಾಲಿನಲ್ಲಿ ಆಲೂಗೆಡ್ಡೆ ಬೆಳೆಗೆ ಒಂದು ರೋಗ ಬಂದು 24 ಗಂಟೆ ಅವಧಿಯಲ್ಲಿ ಸಾವಿರಾರು ಎಕರೆಗಳಲ್ಲಿರತಕ್ಕಂಥ ಬೆಳೆ ನಾಶವಾಯಿತು. ರಾತ್ರಿಯೆಲ್ಲಾ ಚೆನ್ನಾಗಿದ್ದ ಬೆಳೆ ಮೇಲೆ ಅಷ್ಟೂ ಭಸ್ಮವಾಗಿ ಹೋಯಿತು. ಇದರ ಬಗ್ಗೆ ಸಾಕಷ್ಟು ಎಚ್ಚರಿಕೆಯನ್ನು ಸರ್ಕಾರದವರು ವಹಿಸಲಿಲ್ಲ. ಈಗ ಮೈಸೂರು ಸಂಸ್ಥಾನಕ್ಕೆ ಆಲೂಗೆಡ್ಡೆ ಬೀಜವನ್ನು ಸಿಮ್ಲಾದಿಂದ ಪಡೆಯುತ್ತಿದ್ದಾರೆ.

ಹಾಸನ, ಚಿಕ್ಕಮಗಳೂರು, ಮಾಲೂರು ಈ ಕಡೆ ಆಲೂಗೆಡ್ಡೆ ಬೆಳೆಯುತ್ತಿದ್ದಾರೆ. ಈ ಆಲೂಗೆಡ್ಡೆ ಬೀಜವನ್ನು ಸರ್ಟಿಫೈಡ್ ಏಜೆನ್ಸಿ ಮುಖಾಂತರ ಕೊಡದೆ ಖಾಸಗಿಯವರು ತಂದು ಮಾರಾಟ ಮಾಡಿದ್ದರಿಂದ ರೈತರು ಆ ಬೀಜವನ್ನು ಪಡೆದು ಭೂಮಿಯಲ್ಲಿ ಬಿತ್ತಿದ್ದರಿಂದ ರಾಜ್ಯದಲ್ಲಿ ಆಲೂಗೆಡ್ಡೆ ಬೆಳೆ ನಾಶವಾಗಿ ಕೋಟ್ಯಾಂತರ ರೂಪಾಯಿ ನಷ್ಟವಾಯಿತು. ಇದರ ಬಗ್ಗೆ ಸರ್ಕಾರ ಹೆಚ್ಚಿನ ಗಮನ ಕೊಡಲಿಲ್ಲ ಎಂದು ಹೇಳಬಯಸುತ್ತೇನೆ.

ಸ್ವಾಮಿ, ಈ ಆಲೂಗೆಡ್ಡೆ ಇದರ ಪ್ರಾಮುಖ್ಯತೆ ಎಷ್ಟು ಎನ್ನುವ ವಿಚಾರದಲ್ಲಿ ಕೆಲವು ಉದಾಹರಣೆಗಳನ್ನು ಹೇಳಬಯಸುತ್ತೇನೆ. ಸೆಕೆಂಡ್ ವರ್ಲ್ಡ್ ವಾರ್‌ನಲ್ಲಿ ಇಂಗ್ಲೆಂಡ್‌ನಲ್ಲಿ ಆಹಾರ ಉತ್ಪತ್ತಿ ಕಡಿಮೆಯಾದಂಥ ಸಂದರ್ಭದಲ್ಲಿ ಇಂಗ್ಲೆಂಡ್ ಸರ್ಕಾರ ಆಲೂಗೆಡ್ಡೆಗೆ ಹೆಚ್ಚು ಗಮನ ಕೊಟ್ಟು ಅಲ್ಲಿಯ ಜನತೆ ಹಸಿವಿನಿಂದ ಬಳಲುತ್ತಾ, ಸಾಯುವಂಥಾ ಪರಿಸ್ಥಿತಿಯಲ್ಲಿ ಇದ್ದಾಗ ಇದನ್ನು ಬೆಳೆದು ಹೆಚ್ಚು ಆಹಾರ ಉತ್ಪತ್ತಿಯನ್ನು ಮಾಡಿದರು. ಅದೇ ರೀತಿ ಐರ್ಲಂಡ್ ವಾರ್ ಆದಾಗ ಶತ್ರುಗಳ ಕಣ್ಣನ್ನು ತಪ್ಪಿಸುವುದಕ್ಕಾಗಿ ಅಲ್ಲಿಯ ಸರ್ಕಾರ ಆಲೋಚನೆ ಮಾಡಿ ಯಾವ ಆಹಾರ ಪದಾರ್ಥ ಭೂಮಿ ಒಳಗಡೆ ಬೆಳೆಯುತ್ತದೆ ಎನ್ನುವುದನ್ನು ಯೋಚನೆ ಮಾಡಿ ಈ ಆಲೂಗೆಡ್ಡೆ ಬೆಳೆಯನ್ನು ಉಳಿಸಿಕೊಂಡರು. ಈವೊತ್ತು ಹಾಲೆಂಡ್‌ನಲ್ಲಿ ಒಂದು ಆಲೂಗೆಡ್ಡೆ ರೀಸರ್ಚ್‌ಗೋಸ್ಕರ ಒಂದು ಇನ್ಸ್ಟಿಟ್ಯೂಷನ್ ಕಟ್ಟಿದ್ದಾರೆ. ಸುಮಾರು 6–8 ಕೋಟಿ ರೂಪಾಯಿ ಉತ್ಪತ್ತಿ ಕೊಡುವ ಆಲೂಗೆಡ್ಡೆ ಬೆಳೆಯುವಂಥ ಹಾಸನ ಜಿಲ್ಲೆಯಲ್ಲಿ ಇದರ ಬಗ್ಗೆ ಏನೂ ಯೋಚನೆ ಮಾಡದೇ ಇರುವುದು ಶೋಚನೀಯ, ಸರ್ಕಾರದವರು ಸಿಮ್ಲಾದಿಂದ ಉತ್ತಮ ರೀತಿಯ ಆಲೂಗೆಡ್ಡೆ ಬೀಜಗಳನ್ನು ತರಿಸಿ ಶೀತಲಗೃಹದಲ್ಲಿಟ್ಟು ವಿತರಣೆ ಮಾಡಬೇಕು. ಇಂಡಿಯಾ ದೇಶದಲ್ಲಿ ಸಿಮ್ಲಾದಲ್ಲಿ ಆಲ್ ಇಂಡಿಯಾ ಕೌನ್ಸಿಲ್ ಆಫ್ ಆಗ್ರಿಕಲ್‌ಚರಲ್ ಇನ್ಸ್ಟಿಟ್ಯೂಟ್ ಇದೆ. ಅದು ಇಂಡಿಯಾ ದೇಶಕ್ಕೆಲ್ಲಾ ಬೇಕಾದಂಥ ಬೀಜವನ್ನು ಒದಗಿಸುತ್ತದೆ. ರೋಗ ಬಂದರೂ ಕೂಡ ತಡೆಯುವುದಕ್ಕೆ ಶಕ್ತಿ ಇರುವ 15-20 ಬ್ಲೆಂಡ್ಸ್ ಇವೆ. ಅದನ್ನು ಅಗ್ರಿಕಲ್‌ಚರಲ್ ಆಫೀಸಿಗೆ ಕಳುಹಿಸಿಕೊಟ್ಟದ್ದು ಎಲ್ಲಿ ಹೋಯಿತೋ ಗೊತ್ತಿಲ್ಲ. 1963–64 ರಲ್ಲಿ ಸುಮಾರು 8-9 ಸಾವಿರ ಎಕರೆಯಲ್ಲಿ ಆಲೂಗೆಡ್ಡೆಯನ್ನು ಬೆಳೆದಿದ್ದರು. ಈಗ 24-25 ಸಾವಿರ ಎಕರೆಯಲ್ಲಿ ಆಲೂಗೆಡ್ಡೆಯನ್ನು ಬೆಳೆಯುತ್ತಾರೆ. ಈ ಸಾರಿ ಹಾಸನ ಮತ್ತು ಮಲೆನಾಡು ಪ್ರದೇಶಗಳಲ್ಲಿ ಆಲೂಗೆಡ್ಡೆಗೆ ರೋಗ ಬಂದಂಥ ಸಂದರ್ಭದಲ್ಲಿ ಸರ್ಕಾರ ಶೀಘ್ರವಾಗಿ ಗಮನ ತೆಗೆದುಕೊಳ್ಳಬೇಕಾಗಿತ್ತು. ಹಾರ್ಟಿಕಲ್‌ಚರ್ ಡಿಪಾರ್ಟ್‌ಮೆಂಟ್‌ನವರು ಒಂದು ಸ್ಕ್ವಾಡ್‌ನ್ನು ಕಳುಹಿಸಿದರು. 20 ಸಾವಿರ ಎಕರೆಯಲ್ಲಿ ಬೆಳೆಯುವಂಥ ಜಾಗಕ್ಕೆ ಒಂದು ಸ್ಕ್ವಾಡ್‌ನ್ನು ಕಳುಹಿಸಿದರೆ ಏನು ಪ್ರಯೋಜನ? ಆ ಸ್ಕ್ವಾಡ್‌ನವರು ಸುಮಾರು 600–800 ಎಕರೆಯಷ್ಟು ಮಾತ್ರ ಸ್ಪ್ರೇ ಮಾಡುವುದಕ್ಕೆ ಆಯಿತು. ಬಹು ಮುಖ್ಯವಾಗಿ ಸರ್ಕಾರದವರು ಮಾಡಬೇಕಾದ್ದು ಉತ್ತಮವಾದಂಥ ಫೌಂಡೇಷನ್ ಸೀಡ್ಸ್‌ನ್ನು ಸಿಮ್ಲಾದಿಂದ ತರಿಸಿ ಸರ್ಟಿಫೈಡ್ ಏಜೆನ್ಸಿ ಮುಖಾಂತರ ಕೊಡಬೇಕಾಗಿತ್ತು. ಈಗ ಹಾಸನದಲ್ಲಿರುವ ರೈತರು ಅವರೇ ಸಿಮ್ಲಾಕ್ಕೆ ಹೋಗಿ ಆಲೂಗೆಡ್ಡೆ ಬೀಜವನ್ನು ತೆಗೆದುಕೊಂಡು ಬಂದಿದ್ದರಿಂದ ಈ ರೀತಿ ಆಗಿದೆ. ಅಲ್ಲಿಂದ ಯಾವ ಬೀಜವನ್ನು ತೆಗೆದುಕೊಂಡು ಬಂದರೋ ಗೊತ್ತಿಲ್ಲ. ಸಿಮ್ಲಾದಲ್ಲಿ ಎಲ್ಲಾ ರಾಜ್ಯಗಳವರೂ ಹೋಗಿ ಅತ್ಯುತ್ತಮವಾದ ಬೀಜಗಳನ್ನು ಆರಿಸಿಕೊಂಡಾದ ಮೇಲೆ ಉಳಿದ ಬೀಜವನ್ನು ತಂದಿದ್ದರಿಂದಲೂ ಮತ್ತು ಉತ್ತಮವಾದ ಬೀಜವನ್ನು ಹಾಕದೇ ಇದ್ದುದರಿಂದಲೂ ಆಲೂಗೆಡ್ಡೆಯ ಬೆಳೆ ನಾಶವಾಗಿದೆ. ಚಿಕ್ಕಮಗಳೂರು, ಮಾಲೂರುಗಳಲ್ಲಿ ರೋಗರಹಿತವಾದ ಬೀಜ ಇಲ್ಲದೇ ಇರುವುದರಿಂದ ಈ ರೀತಿ ಆಗಿದೆ. ಹಾಸನ ಜಿಲ್ಲೆಯಲ್ಲಿ ಆಲೂಗೆಡ್ಡೆ ಬೆಳೆಯುವುದಕ್ಕೆ ಅನೇಕ ರೈತರು ಗೊಬ್ಬರ ತರುವುದಕ್ಕೋಸ್ಕರ ತಮ್ಮಲ್ಲಿದ್ದ ಚಿನ್ನ, ಒಡವೆಗಳನ್ನು ಬ್ಯಾಂಕ್‌ನಲ್ಲಿಟ್ಟಿದ್ದಾರೆ. ಒಂದೇ ಬ್ಯಾಂಕ್‌ನಲ್ಲಿ 8 ಲಕ್ಷ ರೂಪಾಯಿನಷ್ಟು ಚಿನ್ನವನ್ನು ತೆಗೆದುಕೊಂಡು ಹೋಗಿ ಇಟ್ಟಿದ್ದಾರೆ. ಈ ಬೆಳೆಗೆ ರೋಗ ಬಂದು ಬೆಳೆ ನಷ್ಟವಾದುದರಿಂದ ಆ ಚಿನ್ನವನ್ನು ಮಾರಾಟ ಮಾಡುವ ಸನ್ನಿವೇಶ ಬಂದಿದೆ. ಅದಕ್ಕೆ ಈಗ ಸರ್ಕಾರದವರು ಈ ಸುಧಾರಿತ ಬೀಜವನ್ನು, ಹೈ ಯೀಲ್ಡಿಂಗ್ ವೆರೈಟಿ ಬೀಜವನ್ನು ರೈತರಿಗೆ ಸರ್ಟಿಫೈಡ್ ಏಜೆಂಟ್ ಮುಖಾಂತರ ತರಿಸಿಕೊಡುವ ವ್ಯವಸ್ಥೆ ಮಾಡಬೇಕು. ಅದನ್ನು ಸೊಸೈಟಿ ಮುಖಾಂತರ ಮಾರಾಟ ಮಾಡಬಹುದು. ಅಲ್ಲಿ ದುಡ್ಡು ತೊಂದರೆ ಇದ್ದ ಪಕ್ಷದಲ್ಲಿ ಅದರ ಮೂಲಕ ಆಗದೇ ಹೋದರೆ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಮುಖಾಂತರವಾದರೂ ಮಾಡಬಹುದು. ಏತಕ್ಕೆಂದರೆ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಮೈಸೂರು ರಾಜ್ಯದಲ್ಲಿ ವ್ಯವಸಾಯದ ಬಗ್ಗೆ ಒಂದು ಮುಖ್ಯವಾದ ಸಂಸ್ಥೆ. ಅದಕ್ಕೆ ಹಣವೂ ಇದೆ. ಆದುದರಿಂದ ಅದರ ಮುಖಾಂತರವಾದರೂ ಬೀಜವನ್ನು ತರಿಸಿಕೊಡುವ ವ್ಯವಸ್ಥೆ ಮಾಡಿದರೆ ಅತ್ಯುತ್ತಮವಾದ ವ್ಯವಸಾಯವಾಗುತ್ತದೆ. ಜೊತೆಗೆ ಬರೀ ಬೀಜವನ್ನು ತರಿಸಿಕೊಟ್ಟರೆ ಸಾಲದು. ಅದು ರೋಗರಹಿತವಾಗಿರಬೇಕು. ಹೈಬ್ರಿಡ್ ವೆರೈಟಿ ಬೀಜವನ್ನು ಎಲ್ಲಾ ರಾಜ್ಯದವರೂ ತೆಗೆದುಕೊಂಡಾದ ಮೇಲೆ ಉಳಿದುದನ್ನು ತರುತ್ತಾರೆ. ಆ ರೀತಿ ಮಾಡಬಾರದು. ತಜ್ಞರು ಇದನ್ನು ಪರೀಕ್ಷೆ ಮಾಡಬೇಕು. ಮತ್ತು ಅದು

(ಶ್ರೀ ಎಚ್. ಬಿ. ಜ್ವಾಲನಯ್ಯ)

ರೋಗದಿಂದ ಮುಕ್ತವಾಗಿರಬೇಕು. ಮತ್ತು ಬೀಜ ತರಿಸುವ ಮೊದಲೇ ರೋಗ ನಿರೋಧಕ ಸಂಪಾದಿಸಬೇಕು. ವ್ಯವಸಾಯದ ಇಲಾಖೆಯಲ್ಲಿ ಈಗ ಏನು ಜನ ಇದ್ದಾರೆ ಅವರು ಏನೂ ಮಾಡುವುದಕ್ಕೂ ಸಾಧ್ಯವಿಲ್ಲ. The magnitude of the money involved is equal to the land revenue of the Mysore State. ಸುಮಾರು 6–7 ಕೋಟಿ ರೂಪಾಯಿಯಷ್ಟು ಆಲೂಗೆಡ್ಡೆ ಬೆಳೆ ನಷ್ಟವಾಗಿರುವಾಗ ಅದರ ಕಡೆ ಸರ್ಕಾರದವರು ಸಾಕಷ್ಟು ಗಮನ ಕೊಡಲಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಹಾರ್ಟಿಕಲ್ಚರಲ್ ಡಿಪಾರ್ಟ್‌ಮೆಂಟ್‌ನವರು ಈ ಸುಧಾರಿತ ಬೀಜಗಳನ್ನು ಏಜೆನ್ಸಿ ಮುಖಾಂತರ ತರಿಸಿ, ತಜ್ಞರಿಂದ ಇದನ್ನು ಪರೀಕ್ಷೆ ಮಾಡಿ ಅದನ್ನು ನಡೆಸುವಂಥಾ ಜವಾಬ್ದಾರಿಯನ್ನು ಮಾಡಬೇಕು ಎಂದು ಹೇಳಬಯಸುತ್ತೇನೆ. ಈಗ ಬೀಜ ಬರುತ್ತದೆ, ರೈತರು ಅದನ್ನು ಕೊಂಡುಕೊಂಡು ಹೋಗುತ್ತಾರೆ. ಅವರಿಗೆ ಗೊಬ್ಬರವನ್ನು ಮುಂಚಿತವಾಗಿ ಕೊಟ್ಟರೆ ನಮ್ಮ ಜಿಲ್ಲೆಯಲ್ಲಿರುವ 25 ಸಾವಿರ ಎಕರೆಯಲ್ಲೂ ಆಲೂಗೆಡ್ಡೆಯನ್ನು ಬೆಳೆಯಬಹುದು. ಈಗ ಮೈಸೂರು ಸಂಸ್ಥಾನದಲ್ಲಿ ಬಿಳಿಗಿರಿರಂಗನಬೆಟ್ಟ, ಚಿಕ್ಕಬಳ್ಳಾಪುರ, ಹಾಸನ, ಸೋಮನಹಳ್ಳಿ ಕಾವಲು, ಕೆಮ್ಮಣ್ಣುಗುಂಡಿ ಈ ಸ್ಥಳಗಳಲ್ಲಿ ಕೆಲವು ವ್ಯವಸ್ಥೆಯನ್ನು ಮಾಡಿದ್ದಾರೆ. ಹಾಸನ ಜಿಲ್ಲೆಯ ಸೋಮನಹಳ್ಳಿ ಕಾವಲಿನಲ್ಲಿ ಸುಮಾರು 400 ಎಕರೆಯಷ್ಟು ಫಲವತ್ತಾದ ಭೂಮಿಯನ್ನು ಪಡೆದಿದ್ದಾರೆ. ತಾವು ಈಗ ನೋಡಿದ್ದೀರಾ? ಸೋಮನಹಳ್ಳಿ ಕಾವಲಿನಲ್ಲಿ ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್‌ನವರು ಸೀಡ್ ರೀಸರ್ಚ್ ಮಾಡಿರುವುದನ್ನು ತಾವು ನೋಡಿಲ್ಲ. ಹಿಂದೆ ಅಲ್ಲಿರತಕ್ಕಂಥ ಅವ್ಯವಸ್ಥೆ ನೋಡಿದ್ದರೆ ಗೊತ್ತಾಗುತ್ತಿತ್ತು. ಮೊನ್ನೆ ಪಿ.ಎಸ್.ಸಿ. ಕಮಿಟಿ ಹೋದಾಗ ಅಲ್ಲಿ ಮಾಡಿರುವ ಅತ್ಯುತ್ತಮವಾದ ಕೆಲಸವನ್ನು ನೋಡಿ ಮೆಚ್ಚಿದ್ದಾರೆ. ನನಗೆ ಅಧ್ಯಕ್ಷರೂ ಕೂಡ ಹೇಳಿದ್ದಾರೆ. ನಾನು ಈಗಲೂ ಕೂಡ ಸೋಮನಹಳ್ಳಿ ಕಾವಲಿನಲ್ಲಿ ನೇರವಾದ ಸಂಪರ್ಕವನ್ನು ಇಟ್ಟುಕೊಂಡಿದ್ದೇನೆ. ಸರ್ಕಾರದವರು ಏನು ಮಾಡುತ್ತಿದ್ದಾರೆಂದರೆ ಉತ್ತಮವಾದ ಅಧಿಕಾರಿಗಳು ಯಾರು ಈ ವಿಚಾರದಲ್ಲಿ ಶ್ರದ್ಧೆಯಿಂದ ಕೆಲಸಮಾಡುತ್ತಿದ್ದಾರೆ ಅವರನ್ನು ಪನಿಷ್‌ಮೆಂಟ್ ಕೊಡುವ ರೀತಿಯಲ್ಲಿ ದೂರದ ಸ್ಥಳಗಳಿಗೆ ವರ್ಗ ಮಾಡುತ್ತಾರೆ. ಸೋಮನಹಳ್ಳಿ ಕಾವಲಿಗೆ ಹೋಗಲು ಒಂದು ಸರಿಯಾದ ರಸ್ತೆ ಇಲ್ಲ. ಅಲ್ಲಿ ಒಂದು ಬಾವಿಯನ್ನು ತೆಗೆಸಿದ್ದರೆ ಅದು ಡಿಪಾರ್ಟ್‌ಮೆಂಟ್ ರೂಲ್ಸ್ ಪ್ರಕಾರ ಇಲ್ಲ ಎನ್ನುವ ಒಂದೇ ಒಂದು ಕಾರಣದಿಂದ ಅತ್ಯುತ್ತಮವಾಗಿ ಕೆಲಸ ಮಾಡುತ್ತಿದ್ದ ಅಧಿಕಾರಿಗಳ ಮೇಲೆ ನೀವು ಗದಾಪ್ರಹಾರ ಮಾಡಿದ್ದೀರಿ. ಈ ಅಧಿಕಾರಿಗಳು ಹೆಚ್ಚು ಶ್ರಮಪಟ್ಟು ಕೆಲಸ ಮಾಡುತ್ತಿದ್ದರು. ಸಂಶೋಧನೆಯನ್ನು ಮಾಡುವಾಗ ಕಾನೂನು ಪ್ರಕಾರ ಮಾಡುವುದಕ್ಕಾಗುವುದಿಲ್ಲ. ಇದು ಮಾರಾಟದ ವ್ಯವಸ್ಥೆಯಲ್ಲ. ಸಂಶೋಧನೆ ಮಾಡುವಂಥ ವ್ಯವಸ್ಥೆಯನ್ನು ಮಾಡುವುದಕ್ಕೆ ಉತ್ತೇಜನ ಕೊಡುವುದರ ಬದಲು ಅವರ ಉತ್ತೇಜನವನ್ನು ಸರ್ಕಾರದವರು ಹಾಳು ಮಾಡಿದ್ದಾರೆ ಎಂದರೆ ಸ್ಪಷ್ಟವಾದ ಟೀಕೆಯಾದೀತು ಎಂದು ಅಷ್ಟು ಕಠಿಣವಾಗಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ.

3-30 P. M.

ಕೋಲ್ಡ್ ಸ್ಟೋರೇಜ್ ಪ್ರಾರಂಭ ಮಾಡುವ ಸಂದರ್ಭದಲ್ಲಿ ಹಾಸನದಲ್ಲಿ ಮುಖ್ಯ ಮಂತ್ರಿಗಳ ಪರವಾಗಿ ಮಾತನಾಡುವಾಗ ತಾವೇ ಒಂದು ಮಾತು ಹೇಳಿದ್ದೀರಿ. 300 ಟನ್ ಆಲೂಗೆಡ್ಡೆಯನ್ನು ಇದರಲ್ಲಿ ಇಡುವುದಕ್ಕೆ ವ್ಯವಸ್ಥೆ ಇದೆ ಎಂಬುದಾಗಿ. ಹಾಸನದಲ್ಲಿ ಆಲೂಗೆಡ್ಡೆ ಮುಂಗಾರು ಮಳೆಯಿಂದ ಬೆಳೆಯುತ್ತದೆ, ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳಿನಲ್ಲಿ ಬೆಳೆ ಬರುತ್ತದೆ. ಸುಮಾರು 70-80 ಸಾವಿರ ಟನ್ ಆಲೂಗಡ್ಡೆ ಬೆಳೆಯುವ ಜಾಗದಲ್ಲಿ ಅದನ್ನು ರಕ್ಷಣೆ ಮಾಡುವುದಕ್ಕೆ 300 ಟನ್ ಕೆಪಾಸಿಟಿ ಇರುವ ಕೋಲ್ಡ್ ಸ್ಟೋರೇಜ್‌ನಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ನನ್ನ ಅಭಿಪ್ರಾಯದಲ್ಲಿ ಕನಿಷ್ಟಪಕ್ಷ ನಾಲ್ಕು ಸಾವಿರ ಟನ್ ಆಲೂಗೆಡ್ಡೆ ಇಡಬಹುದಾದ ಎರಡು ಮೂರು ಕೋಲ್ಡ್ ಸ್ಟೋರೇಜ್ ಹಾಸನ ಜಿಲ್ಲೆ ಮತ್ತು ಚಿಕ್ಕಮಗಳೂರು ಜಿಲ್ಲೆಯ ಮಧ್ಯೆ ಮಾಡುವುದರಿಂದ ರೈತರಿಗೆ ಅನುಕೂಲವಾಗುತ್ತದೆ. ಇದಕ್ಕಾಗಿ ಸರ್ಕಾರದವರು ಕೋಲ್ಡ್ ಸ್ಟೋರೇಜ್ ಮೇಲೆ ಹಣವನ್ನು ಖರ್ಚು ಮಾಡುವುದು ನಷ್ಟವಾಗಲಾರದು ಎನ್ನುವುದು ನನ್ನ ಸ್ಪಷ್ಟವಾದ ಅಭಿಪ್ರಾಯ.

ಸರ್ಕಾರದ ವತಿಯಿಂದ ಬೀಜವನ್ನು ರೈತರಿಗೆ ತೆಗೆದುಕೊಂಡು ಹೋಗಿ ಕೊಟ್ಟು, ಬೀಜವನ್ನು ಯಾವರೀತಿ ಬಿತ್ತಬೇಕು, ಸಣ್ಣ ಬೀಜ ಬಿತ್ತುವುದರಿಂದ ಏನಾಗುತ್ತದೆ, ದೊಡ್ಡ ಬೀಜ ಬಿತ್ತಿದರೆ ಏನಾಗುತ್ತದೆ ಎನ್ನುವುದನ್ನು ರೈತರಿಗೆ ತಿಳಿಸುವ ವ್ಯವಸ್ಥೆ ಮಾಡಬೇಕು. ಕನಿಷ್ಟಪಕ್ಷ ಐದಾರು ಸಲ ಸ್ಪ್ರೇ ಮಾಡಬೇಕೆಂಬುದು ತಜ್ಞರ ಅಭಿಪ್ರಾಯ. ಆದರೆ ಸ್ಪ್ರೇಯರ್ಸ್ ಸಿಕ್ಕುತ್ತಿಲ್ಲ. ತಾಲ್ಲೂಕು

ಬೋರ್ಡಿನಲ್ಲಿ ಒಂದು ಸ್ಪ್ರೇಯರ್ ಇದ್ದು ಅದೂಕೂಡ ಮುರಿದು ಹೋಗಿದೆ. ಈ ಬಗ್ಗೆ ಸರ್ಕಾರಕ್ಕೆ ಒಂದು ಯೋಜನೆಯನ್ನು ಕಳುಹಿಸಿಕೊಟ್ಟಿದ್ದಾರೆ. ಆದರೆ ಹೇಗೆ ರಕ್ಷಣೆ ಕೊಡಬೇಕು, ಎಷ್ಟು ಸ್ಪ್ರೇಯರ್ಸ್ ಬೇಕು, ಯಾವರೀತಿ ಕೆಲಸಮಾಡಬೇಕು ಎನ್ನುವುದನ್ನು ಯೋಚನೆ ಮಾಡ ಬೇಕು. ಒಂದು ಸಾವಿರ ಅಥವಾ ಎರಡು ಸಾವಿರ ಎಕರೆಗಳಿಗೆ ಒಂದೊಂದು ಮೊಬೈಲ್ ಯೂನಿಟ್ ಮಾಡಿ ರೈತರಿಗೆ ಬೇಕಾದ ಎಲ್ಲ ಸಹಾಯವನ್ನೂ, ಮೊದಲಿನಿಂದ ಕಡೆಯುವರೆಗೆ ಬೇಕಾದ ಸಹಾಯ ವನ್ನು ಕೊಟ್ಟರೆ ಮಾತ್ರ ಕೆಲಸ ಅತ್ಯುತ್ತಮವಾಗುತ್ತದೆ. ಉದಕಮಂಡಲದಲ್ಲಿ ಹೆಚ್ಚು ಆಲೂ ಗಡ್ಡೆಯನ್ನೂ ಬೆಳೆಯುತ್ತಿದ್ದರು. ಅಲ್ಲಿ ಲೇಟ್ ಬ್ಲೈಟ್ ಎಂಬ ರೋಗ ಬಂದು, ಅದಕ್ಕೆ ಸರ್ಕಾರ ದವರು ಯಾವ ಗಮನವನ್ನೂ ಕೊಡದೆ ಹೋದುದರಿಂದ ಬೆಳೆ ಎಲ್ಲ ನಷ್ಟವಾಯಿತು. ಹಾಸನ ದಲ್ಲಿಯೂ ಅದೇ ಪರಿಸ್ಥಿತಿ ಬರುವ ಸಂಭವವಿದೆ. ಆಲೂಗಡ್ಡೆ ಹಣ ತರುವ ಬೆಳೆ. ಇದರಲ್ಲಿ ನಷ್ಟ ವಾಗುವುದನ್ನು ತಪ್ಪಿಸದೆ ಹೋದರೆ ಆಲೂಗಡ್ಡೆ ಬೆಳೆಯುವುದನ್ನೇ ಬಿಡುತ್ತಾರೆ. ಹಾಸನದಲ್ಲಿ ಬೆಳೆಯುವಂಥ ಆಲೂಗಡ್ಡೆ ಅಹಮದಾಬಾದ್, ಹೈದರಾಬಾದ್, ಕಲ್ಕತ್ತ, ಬೊಂಬಾಯಿ ಮತ್ತು ಇಂಡಿಯಾ ದೇಶದ ಬಹುಭಾಗಗಳಿಗೆ ಹೋಗುತ್ತಿದೆ. ಇದರಿಂದ ಕೋಟ್ಯಂತರ ರೂಪಾಯಿ ರಾಜ್ಯಕ್ಕೆ ಬರುತ್ತಿದೆ. ಸಾವಿರಾರು ಲಾರಿಗಳು ಓಡಾಡುತ್ತವೆ. ಸುಮಾರು ಹತ್ತು ಸಾವಿರ ಗೋಣಿಚೀಲಗಳು ಆಲೂಗಡ್ಡೆಯನ್ನು ತುಂಬಲು ಹೊರಗಿನಿಂದ ಬರುತ್ತಿವೆ. ಅನೇಕರು ಇದರಲ್ಲಿ ಕೆಲಸ ಮಾಡಿಕೊಂಡಿದ್ದಾರೆ. ಆಲೂಗಡ್ಡೆಯನ್ನು ಹೊರಗಡೆಗೆ ಕಳುಹಿಸಲು ವ್ಯಾಗನ್‌ಗಳ ತೊಂದರೆ ಪ್ರತಿಸಲವೂ ಬರುತ್ತಿದೆ. ಸರ್ಕಾರದ ವತಿಯಿಂದ ರೈಲ್ವೆಯವರ ಜೊತೆಯಲ್ಲಿ ಈ ಬಗ್ಗೆ ಮಾತನಾಡಿ ಎಂದರೆ ಏನೂ ಮಾಡಿಲ್ಲ. ಆಲೂಗಡ್ಡೆಯನ್ನು ರವಾನೆ ಮಾಡಲು ಸಾಧಾರಣ ವ್ಯಾಗನ್‌ಗಳನ್ನು ಕಳುಹಿಸುತ್ತಿದ್ದಾರೆ. ಇದರಿಂದ ಮೀಟರ್‌ಗೇಜಿನಿಂದ ಬ್ರಾಡ್‌ಗೇಜಿಗೆ ಬದಲಾ ವಣೆ ಮಾಡಬೇಕಾದ ಸಂದರ್ಭದಲ್ಲಿ ಕೆಲವು ಕಡೆ ಬಹಳ ಕಾಲ ನಿಂತು ಲಕ್ಷಾಂತರ ರೂಪಾಯಿ ಆಲೂಗಡ್ಡೆ ಬೆಂದು, ಕೊಳೆತು ಹೋಗಿ ರೈತರಿಗೆ ದುಡ್ಡು ಬರಲೇ ಇಲ್ಲ. ಇದರಿಂದ ರೈತ ಹಾಳಾಗಿ ದ್ದಾನೆ. ಆಲೂಗಡ್ಡೆಯನ್ನು ರವಾನೆ ಮಾಡಲು ಸ್ಪೆಷಲ್ ವ್ಯಾಗನ್‌ಗಳನ್ನು ಒದಗಿಸಬೇಕು. ವ್ಯಾಗನ್‌ಗಳಿಗೆ ತುಂಬುವ ಸ್ಥಳದಲ್ಲಿ ಏನು ಟೆಂಪರೇಚರ್ ಇದೆ ಅದೇ ಟೆಂಪರೇಚರ್‌ನಲ್ಲಿ ಮಾರಾಟ ಮಾಡುವ ಸ್ಥಳದವರೆಗೂ ಸಾಗಿಸುವ ವ್ಯವಸ್ಥೆ ಆಗಬೇಕು. ಇಂಥ ಸ್ಪೆಷಲ್ ವ್ಯಾಗನ್‌ಗಳನ್ನು ಒದಗಿಸಬೇಕು ಎಂದು ರೈಲ್ವೆಯವರನ್ನು ನಮ್ಮ ರಾಜ್ಯಸರ್ಕಾರ ಒತ್ತಾಯಮಾಡಬೇಕು. 80-90 ಸಾವಿರ ಟನ್ ಆಲೂಗಡ್ಡೆ ಬೆಳೆಯುವಾಗ ಅದರ ಬಗ್ಗೆ ಹೆಚ್ಚಿನ ಸಹಾಯ ಮಾಡಿದರೆ ಆಗ ರೈತರಿಗೆ ಅನುಕೂಲವಾಗುತ್ತದೆ. ಅದೇ ರೀತಿಯಲ್ಲಿ ಕೋಲ್ಡ್ ಸ್ಟೋರೇಜ್ ವ್ಯವಸ್ಥೆಯನ್ನೂ ಹೆಚ್ಚು ಮಾಡಬೇಕು. ಇದಲ್ಲದೆ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನವರು ಒಳ್ಳೆಯ ಆಲೂಗಡ್ಡೆಯನ್ನು ತಂದು ರೈತರಿಗೆ ಒದಗಿಸಿ ಒಳ್ಳೆಯ ಬೆಳೆ ಬರುವಂತೆ ಈಗಿನ ಪದ್ಧತಿಯಲ್ಲಿ ಮಾರ್ಪಾಡು ಮಾಡ ಬೇಕು.

ಹಸಿರು ಕ್ರಾಂತಿ ಎಂದು ಬೇಕಾದಷ್ಟು ಹೇಳುತ್ತಿದ್ದಾರೆ. ನೂರು ಗ್ರಾಂ ಆಲೂಗಡ್ಡೆಯಲ್ಲಿ ನೂರು ಗ್ರಾಂ ಅಕ್ಕಿಗಿಂತ ಹೆಚ್ಚಾದ ಪೌಷ್ಟಿಕಾಂಶವಿದೆ. ಇಂಥ ಆಲೂಗಡ್ಡೆಯನ್ನೂ ಕೊಳೆಸಿ ನಷ್ಟ ಮಾಡುತ್ತಿದ್ದಾರೆ. ಆಲೂಗಡ್ಡೆಯನ್ನು ನಮ್ಮ ರಾಜ್ಯದಲ್ಲಿ ಹೆಚ್ಚಾಗಿ ಉಪಯೋಗಿಸುವುದಕ್ಕೆ ಪ್ರಯತ್ನ ಮಾಡಿದರೆ ನಾಶವಾಗದೆ ಇರುವ ಆಹಾರ ಧಾನ್ಯಗಳನ್ನು ಹೊರಗಡೆಗೆ ಕಳಿಹಿಸುವುದಕ್ಕೆ ಅವಕಾಶವಾಗಿ ಅದರಿಂದ ರಾಜ್ಯಕ್ಕೆ ಹೆಚ್ಚು ಹಣ ಬರುವುದಕ್ಕೆ ಅವಕಾಶವಾಗುತ್ತದೆ. ಆಲೂಗಡ್ಡೆ ಹೊರಗಡೆಗೆ ಕಳುಹಿಸಿ ಚೆನ್ನಾಗಿ ಮಾರಾಟ ಮಾಡಲು ಅಪ್-ಟು-ಡೇಟ್ ಮಾರ್ಕೆಟ್ ರೇಟನ್ನು ಪ್ರತಿನಿತ್ಯವೂ ರೈತರಿಗೆ ತಿಳಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ಮೈಸೂರು ರಾಜ್ಯದಲ್ಲಿರುವ ಆಲ್ ಇಂಡಿಯಾ ರೇಡಿಯೋ ಮೂಲಕ ಈ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತಿದ್ದೇನೆ.

ಇದಕ್ಕಿಂತ ಬಹಳ ಮುಖ್ಯವಾದ ಅಂಶವೆಂದರೆ ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಆಲೂಗಡ್ಡೆ ಬೆಳೆಯುವ ಕಡೆ ಹೆಚ್ಚು ರೈತರು ಸಾಲುತ್ತಿದ್ದಾರೆ. 90 ದಿವಸದಲ್ಲಿ ಬೆಳೆ ಕೈಗೆ ಬಂದು ಒಳ್ಳೆಯ ಹಣ ಬರುತ್ತದೆ ಎನ್ನುವ ಕಾರಣದಿಂದ ವಿದ್ಯಾವಂತ ಯುವಕ ತರುಣರು ಇದರಲ್ಲಿ ಆಸಕ್ತಿ ವಹಿಸುತ್ತಿದ್ದಾರೆ. ಆದರೆ ಅವರಿಗೆ ಸರಿಯಾದ ಟ್ರೇನಿಂಗ್ ಇಲ್ಲ. ಸೋಮನಹಳ್ಳಿ ಕಾವಲ್ ನಲ್ಲಿ ಒಳ್ಳೆಯ ಟ್ರೈನಿಂಗ್ ಸೆಂಟರ್ ಮಾಡಿ ಅದರಲ್ಲಿ ವಿದ್ಯಾವಂತ ತರುಣರಿಗೆ ಆಲೂಗಡ್ಡೆ ಬೆಳೆ ಯುವ ವಿಚಾರದಲ್ಲಿ ಕೂಲಂಕಷವಾಗಿ ತಿಳಿದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಬೇಕು ಮತ್ತು ಸಂಶೋಧನೆ ವಿಭಾಗದಲ್ಲಿ ಕೂಡ ಹೆಚ್ಚು ಅಭಿವೃದ್ಧಿಯಾಗಬೇಕು. ಮಂಡ್ಯಜಿಲ್ಲೆಯಲ್ಲಿ ಬತ್ತ ಮತ್ತು ಇತರ ಬೆಳೆಗಳ ಸಂಬಂಧದಲ್ಲಿ ಪ್ಯಾಕೇಜ್ ಸ್ಕೀಂ ಯಾವ ರೀತಿ ಮಾಡಿದ್ದಾರೆಯೋ ಅದೇ ರೀತಿ ಹಾಸನದಲ್ಲಿ ಪ್ಯಾಕೇಜ್ ಸ್ಕೀಂ ಮಾಡಬೇಕು. ಇದಕ್ಕಾಗಿ ನಾಲ್ಕನೆ ಯೋಜನೆಯಲ್ಲಿ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿದರೂ ನಷ್ಟವಿಲ್ಲ. ಈ ಮೂಲಕ ಸಾವಿರಾರು ಜನ

(ಶ್ರೀ ಎಚ್. ಬಿ. ಜ್ವಾಲನಯ್ಯ)

ರೈತರಿಗೆ ಅನುಕೂಲ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು. ಇನ್ನಾದರೂ ಸರ್ಕಾರದವರು ಈ ವಿಷಯದಲ್ಲಿ ತಮ್ಮ ಮಂದ ಧೋರಣೆಯನ್ನು ಬಿಡಲಿ ಎಂದು ಹೇಳುತ್ತಿದ್ದೇನೆ. ಏಕೆಂದರೆ ಮಳೆಯ ನೀರಿನಿಂದ ಆಲೂಗಡ್ಡೆಯನ್ನು ಬೆಳೆಯುವ ಅನುಕೂಲ ಪಡೆದಿರುವ ಒಂದೇ ಒಂದು ಜಿಲ್ಲೆ ಎಂದರೆ ಅದು ಹಾಸನ ಜಿಲ್ಲೆ. ಹೇಮಾವತಿ ಅಣೆಕಟ್ಟು ಆದ ನಂತರ ಮತ್ತು ಲಿಫ್ಟ್ ಇರಿಗೇಷನ್ ಮೂಲಕ ಬೇಸಿಗೆ ಬೆಳೆಯನ್ನು ಕೂಡ ತೆಗೆಯುವುದಕ್ಕೆ ಅವಕಾಶವಿದೆ. ಇದನ್ನು ಕೂಡ ಮಾನ್ಯ ಮಂತ್ರಿಗಳು ಗಮನದಲ್ಲಿಟ್ಟುಕೊಳ್ಳಬೇಕು.

ಆಲೂಗಡ್ಡೆಯನ್ನು ಹೊರಗಡೆಗೆ ಕಳಿಸುವುದಕ್ಕಿಂತ ನಮ್ಮ ರಾಜ್ಯದಲ್ಲಿಯೇ ಅದನ್ನು ಬಳಕೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ರಷ್ಯಾ, ಅಮೆರಿಕಾ, ಇಂಗ್ಲೆಂಡ್ ಮುಂತಾದ ದೇಶಗಳಲ್ಲಿ ಬೆಳಗಿನ ಹೊತ್ತು ಆಲೂಗಡ್ಡೆಯನ್ನು ಬೇಯಿಸಿ ತಿನ್ನುತ್ತಾರೆ. ಇದು ಬಹುಮುಖ್ಯವಾದ ಪೌಷ್ಟಿಕವಾದ ಆಹಾರ. ಆಸ್ಪ್ರೊ ಮೂರು ಪೈಸೆಗೆ ಒಂದು ಮಾತ್ರೆಯಂತೆ ವಿಪರೀತವಾಗಿ ಮಾರಾಟವಾಗುತ್ತಿದೆ. ಆದರೂ ಈ ಹೊತ್ತು ಕೂಡ ಅವರು ಅಡ್ವರ್ಟೈಸ್ ಮಾಡುತ್ತಾರೆ. ಲಿವರ್ ಬ್ರದರ್ಸ್ ಅವರ ಪ್ರಾಡಕ್ಟ್ಸ್ ಬಗ್ಗೆ ಹೆಚ್ಚು ಅಡ್ವರ್ಟೈಸ್ ಮಾಡುತ್ತಿದ್ದಾರೆ. ಕೋಕಾ ಕೋಲಾ ಪಾನೀಯದ ಬಗ್ಗೆ ಕೂಡ ಹೆಚ್ಚಾಗಿ ಅಡ್ವರ್ಟೈಸ್ ಮಾಡುತ್ತಿದ್ದಾರೆ. ಅದೇ ರೀತಿಯಲ್ಲಿ ಆಲೂಗಡ್ಡೆಯನ್ನು ಯಾವ ಯಾವ ರೀತಿಯಲ್ಲಿ ಉಪಯೋಗಿಸಬಹುದು ಎನ್ನುವುದರ ಬಗ್ಗೆ ಪ್ರಚಾರ ಮಾಡಬೇಕು ಮತ್ತು ಇದನ್ನು ಬಳಸುವುದರಿಂದ ಪೌಷ್ಟಿಕವಾದ ಆಹಾರ ಕೂಡ ಸಿಕ್ಕುತ್ತದೆ ಎಂದು ಪ್ರಚಾರ ಮಾಡಬೇಕು. ಈ ಒಂದು ಹೊಸ ವ್ಯವಸ್ಥೆಯನ್ನು ನಮ್ಮ ರಾಜ್ಯದಲ್ಲೂ ಮಾಡಿ ಆಲೂಗಡ್ಡೆ ಕೆಡದಂತೆ ಇಟ್ಟು ಹೊರಕ್ಕೆ ಕಳಿಸಲು ಅವಕಾಶ ಕೊಡಬೇಕು. ಕೊಳೆಯದಂತೆ ಸ್ಟೋರೇಜ್ ಮಾಡಲೂ ಅವಕಾಶವಾಗುವುದು. ನಮ್ಮ ಇಂಡಿಯಾ ದೇಶ ಟೆಕ್ಸ್‌ಟೈಲ್ ಇಂಡಸ್ಟ್ರಿಯಲ್ಲಿ ಮೊದಲನೆಸ್ಥಾನ ಪಡೆದಿದೆ. ಆದರಂತೆ ಆಲೂಗಡ್ಡೆ ಸ್ಟೋರೇಜ್ ಮಾಡಲು ಸರಿಯಾದ ಅವಕಾಶ ಮಾಡಿಕೊಟ್ಟರೆ ನಷ್ಟವಾಗುವುದನ್ನು ತಡೆಗಟ್ಟಿ ಇತರ ಕಡೆಗಳಿಗೆ ಕಳಿಸಲು ಅವಕಾಶವಾಗುವುದು. ಒಳ್ಳೆಯ ಧಾರಣೆ ಬಂದಾಗ ಮಾರಲೂ ಅವಕಾಶವಾಗುವುದು. ಇದರಿಂದ 6 ರಿಂದ 8 ಕೋಟಿ ರೂಪಾಯಿಗಳ ಉತ್ಪತ್ತಿ ಬರುವುದು. ಆಲೂಗಡ್ಡೆಯನ್ನು ಸಣ್ಣ ಸಣ್ಣ ರೈತರು ಮಾತ್ರ ಬೆಳೆಯುತ್ತಿದ್ದಾರೆ, ಅವರಿಗೆ ಸಬ್ಸಿಡೈಸ್ಡ್ ದರದಲ್ಲಿ ಫರ್ಟಿಲೈಜರ್ಸ್, ಬೀಜ ಒದಗಿಸಬೇಕು. ಹಾಗೆ ಮಾಡಿದರೆ ಅವರಿಗೆ ಪ್ರೋತ್ಸಾಹ ದೊರೆತು ಸುಭಿಕ್ಷವಾದ ಬೆಳೆಯಾಗುವುದು. ಇಂದು ಹೇಮಾವತಿ ಪ್ರಾಜೆಕ್ಟ್ ಮುಂತಾದ್ದು ಆಗುತ್ತಿವೆ, ನೀರಿನ ಅವಕಾಶ ದೊರೆಯುವಾಗ ಉತ್ತಮವಾದ ಬೀಜ ಮುಂತಾದುದನ್ನು ಒದಗಿಸಿ ಹೆಚ್ಚು ಉತ್ಪತ್ತಿ ಮಾಡಲು ಅವಕಾಶಮಾಡುವುದು ಸೂಕ್ತ. ಚಿಕ್ಕಮಗಳೂರು ಬಾಬಾಬುಡನ್‌ಗಿರಿ ಮುಂತಾದ ಕಡೆ ಸಾವಿರಾರು ಎಕರೆಯಲ್ಲಿ ಸೀಡ್ ಫಾರಂ ಡೆವಲಪ್ ಮಾಡಲು ಅವಕಾಶವಿದೆ. ಸಿಮ್ಲಾ ಮುಂತಾದ ಕಡೆಗಳಿಂದ 25 ಕೋಟಿ ರೂಪಾಯಿಗಳವರೆಗೆ ಖರ್ಚುಮಾಡಿ ತರಿಸುವುದನ್ನು ನಿಲ್ಲಿಸಬೇಕು. ಹಾಗೆ ಮಾಡಿದರೆ ಇಲ್ಲಿನ ರೈತರೂ ಬದುಕುವರು. ಈ ವಿಚಾರದಲ್ಲಿ ತೀವ್ರ ಕ್ರಮ ಕೈಕೊಂಡು ಮೊದಲು ಹಾಸನದಲ್ಲಿ ನಾನು ಹೇಳಿರುವ ಕೆಲವು ಕ್ರಮಗಳನ್ನು ಕೈಕೊಳ್ಳಬೇಕು. ಮೊದಲನೆಯದಾಗಿ ಒಳ್ಳೆಯ ಬೀಜವನ್ನು ರೋಗವಿಲ್ಲದಿರುವುದನ್ನು ಕೊಡಬೇಕು, ಎರಡನೆಯದಾಗಿ ಅದಕ್ಕೆ ಸ್ಪೆಷಲೈಜ್ಡ್ ಏಜೆನ್ಸಿ ಇರಬೇಕು. ಹಾಸನದಲ್ಲಿ ವಿಷಕಂಠ ಎಂಬ ಆಫೀಸರಿದ್ದರು, ಆತ ಬಹಳ ಒರಟ. ಆದರೆ 24 ಗಂಟೆಗಳ ಕಾಲವೂ ದುಡಿಯುತ್ತಿದ್ದ, ಅದರಿಂದ ಅವನ ಜೊತೆಯಲ್ಲಿದ್ದವರೂ ದುಡಿಯುತ್ತಿದ್ದರು. ಅಂಥವರು ಹೊರಟು ಹೋದರು, ಅವರಿಗೆ ಪ್ರೋತ್ಸಾಹ ಕೊಡಬೇಕಾಗಿತ್ತು, ಅವರನ್ನು ಬಿಜಾಪುರದ ಸೈನಿಕ ಶಾಲೆಗೆ ಹಾಕಿದ್ದಾರೆ, ಶ್ರೀ ರಾಚಯ್ಯನವರು ಹಾಗೆ ಮಾಡಬಾರದು. ಆಲೂಗಡ್ಡೆಗೆ ಸಂಬಂಧಪಟ್ಟಂತೆ ಸ್ಪೆಷಲಿಸ್ಟ್ ಆಗಿದ್ದ ಅವರನ್ನು ಬೇರೆ ಕಡೆಗೆ ಕಳಿಸಿದ್ದು ಸರಿಯಲ್ಲ, ಅವರನ್ನು ವಾಪಸು ಕರೆಸಬೇಕು, ಆತ ಬಹಳ ಶ್ರದ್ಧೆಯಿಂದ ಕೆಲಸಮಾಡುತ್ತಿದ್ದರು. ಅವರನ್ನು ಮತ್ತೆ ಸೋಮನಹಳ್ಳಿಗೆ ಕರೆಸಬೇಕು. ಅಲ್ಲಿ ಆಫೀಸರು ಇರಲು ಸರಿಯಾದ ವಾಸ ಸ್ಥಳವಿಲ್ಲ, ಮೊನ್ನೆ ಮಳೆ ಬಂದಾಗ ಅಡಿಗೆ ಮನೆಗೆ ಮಂಚವನ್ನು ಸಾಗಿಸಿದರು, ಇದರಿಂದ ವಾಸಕ್ಕೆ ಬಹಳ ಕಷ್ಟವಾಗಿದೆ. ರೈತರಿಗೆ ಟೆಕ್ನಿಕಲ್ ಅಡ್ವೈಜ್ ಸಕಾಲದಲ್ಲಿ ಸಿಕ್ಕುವಂತೆ ಮಾಡಬೇಕು. ಬ್ಲೈಟ್ ರೋಗ ಮುಂತಾದ ರೋಗಗಳನ್ನು ಸಕಾಲದಲ್ಲಿ ಕಂಟ್ರೋಲ್ ಮಾಡಬೇಕು. ಜೊತೆಗೆ ಸ್ಟೋರೇಜ್—ಕೋಲ್ಡ್ ಸ್ಟೋರೇಜ್ ಎರಡು ಮೂರು ಇರಲು ವ್ಯವಸ್ಥೆ ಮಾಡಬೇಕು. ಅದರಿಂದ ಹೆಚ್ಚು ಖರ್ಚಾಗುವುದಿಲ್ಲ, ಬೆಳೆಯುವ ಪ್ರದೇಶದಲ್ಲಿ ಬಾಡಿಗೆ ತೆಗೆದುಕೊಂಡಾದರೂ ಸ್ಟೋರ್ ಮಾಡಲು ಅವಕಾಶ ಮಾಡಬೇಕು. ಜೊತೆಗೆ ಮಾರ್ಕೆಟ್ ರೇಟನ್ನು ರೈತರಿಗೆ ತಿಳಿಯುವಂತೆ ಆಕಾಶವಾಣಿಯಲ್ಲಿ ಪ್ರಸಾರ ಮಾಡಬೇಕು. ಮತ್ತು ಈ ಬಗ್ಗೆ ಒಂದು ಮಾಸ್ಟರ್ ಪ್ಲಾನ್ ಮಾಡಬೇಕು, ಮಂಡ್ಯದಲ್ಲಿ ಪ್ಯಾಕೇಜ್ ಸ್ಕೀಂ ಮಾಡಿರುವಂತೆ ಹಾಸನದಲ್ಲಿ

ಮಾಡಬೇಕು, ಟ್ರೈನಿಂಗ್ ಸೆಂಟರಿನ ಅವಶ್ಯಕತೆ ಸಹ ಇದೆ. ಇದನ್ನೆಲ್ಲಾ ಗಮನಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಎಂ. ಎಸ್. ಶಾಸ್ತ್ರಿ (ಚಿಕ್ಕಮಗಳೂರು).—ಸ್ವಾಮಿ, ಈಗತಾನೆ ನಮ್ಮ ಪಕ್ಕದ ಜಿಲ್ಲೆಯವರಾದ ಶ್ರೀ ಜ್ವಾಲನಯ್ಯನವರು ಮಾತನಾಡಿದ್ದಾರೆ. ನಮ್ಮ ಜಿಲ್ಲೆ ವಿಚಾರ ಹೇಳುವುದಾದರೆ ಹಾಸನ ಜಿಲ್ಲೆಯಲ್ಲಿ ಯಾವ ರೀತಿ ಅಲುಗೆಡ್ಡೆಯನ್ನು ಬೆಳೆಯುತ್ತಿದ್ದಾರೋ ಅದೇ ರೀತಿಯಲ್ಲಿ ಸುಮಾರು 25 ಸಾವಿರ ಟನ್ನಿಗೂ ಮಿಗಿಲಾಗಿ ಅಲ್ಲಿ ರೈತರು ಬೆಳೆಯುತ್ತಿದ್ದಾರೆ. ಅದರಿಂದ ಕೋಟ್ಯಾಂತರ ರೂಪಾಯಿ ಆದಾಯ ಬರುತ್ತಿದೆ. ಆದರೆ ರೈತರಿಗೇನು ಸೌಲತ್ತು ಬೇಕೋ ಅದನ್ನು ಸರಕಾರ ಮಾಡಿಕೊಡುತ್ತಿಲ್ಲ, ಸುಧಾರಿಸಿದ ಬೀಜ ಕೊಡಬೇಕು. ಚಿಕ್ಕಮಗಳೂರು ಜಿಲ್ಲೆಯಲ್ಲಿ, ಬಾಬಾಬುಡನ್‌ಗಿರಿಯಲ್ಲಿ, ಸಿಮ್ಲಾದಲ್ಲಿ ಆಲುಗೆಡ್ಡೆ ಬೆಳೆಯಬಹುದು, ಅಲ್ಲಿ ಸುಮಾರು 10 ಸಾವಿರ ಎಕರೆಯಲ್ಲಿ ಬೆಳೆಯಲು ಅವಕಾಶವಿದೆ. ನೀಲಗಿರಿಯಲ್ಲಿ ಬೆಳೆಯುವುದೂ ಕಡಮೆಯಾಗಿ ಸಿಮ್ಲಾದಿಂದ ತರಿಸುತ್ತಿದ್ದೇವೆ. ಈಗ ನಮ್ಮಲ್ಲಿರುವ ಪ್ರದೇಶದಲ್ಲಿ ಹೆಚ್ಚು ಬೆಳೆಯಲು ಅವಕಾಶ ಮಾಡಿಕೊಡಬೇಕು. ನಮ್ಮ ಜಿಲ್ಲೆಯಲ್ಲಿ ಬೆಳೆಯುವವರೂ ದೊಡ್ಡ ರೈತರಲ್ಲ, ಸಣ್ಣ ರೈತರೇ ಬೆಳೆಯುತ್ತಿದ್ದಾರೆ. ಹಾರ್ಟಿಕಲ್ಚರ್ ಇಲಾಖೆಯವರು ಕೆಮ್ಮಣ್ಣುಗುಂಡಿಯಲ್ಲಿ ಒಂದು ಸಣ್ಣ ಸೀಡ್ ಫಾರಂ ಮಾಡಿದ್ದಾರೆ, 8-10 ಎಕರೆ ಪ್ರದೇಶದಲ್ಲಿ ಮಾಡಿದ್ದಾರೆ. ನಮ್ಮ ಜಿಲ್ಲೆಯಲ್ಲೂ ಒಂದು ಸೀಡ್ ಫಾರಂ ಮಾಡಬೇಕು. ಹಾಸನ ಜಿಲ್ಲೆಯಲ್ಲಿ ಜಾಸ್ತಿ ಬೆಳೆ ಆಗುವುದು, ನಮ್ಮ ಜಿಲ್ಲೆಯಲ್ಲಿ ಅದರ ಅರ್ಧ ಆಗುವುದು. ಅದರಲ್ಲಿ ಹೆಚ್ಚು ಭಾಗ ಬೊಂಬಾಯಿಗೆ ಹೋಗುವುದು. ರೈತರು ಬೆಳೆಯುವ ಆಲೂಗಡ್ಡೆ ದಾಸ್ತಾನಿಡಲು ಹಾಸನದಲ್ಲಿರುವ ಕೋಲ್ಡ್ ಸ್ಟೋರೇಜ್ ಪ್ಲಾಂಟ್ ಕಡಮೆ ಕೆಪ್ಯಾಸಿಟಿ ಉಳ್ಳದ್ದು, ನಮ್ಮ ಜಿಲ್ಲೆಯಲ್ಲಿ ಅದಿಲ್ಲ. ಆದುದರಿಂದ ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳಿಗೆ ಅನುಕೂಲವಾಗುವಂತೆ ಎರಡು ದೊಡ್ಡ ಕೋಲ್ಡ್ ಸ್ಟೋರೇಜ್ ಪ್ಲಾಂಟ್‌ಗಳನ್ನು ಏರ್ಪಾಡು ಮಾಡಿದರೆ ಆಲೂಗಡ್ಡೆ ಕೊಳೆಯದಂತೆ ಶೇಖರಿಸಲು ಅನುಕೂಲವಾಗುವುದು. ಹಾಗೆ ಮಾಡಿ ಸರಿಯಾದ ಬೆಲೆ ಬಂದಾಗ ಮಾರಾಟ ಮಾಡಬಹುದು. ಇದರ ಜೊತೆಗೆ ಸುಧಾರಿಸಿದ ಬೀಜದ ವಿಚಾರ ಹೇಳುವುದಾದರೆ ನಮ್ಮಲ್ಲಿ ವ್ಯವಸಾಯದ ಇಲಾಖೆಯಾಗಲಿ ಅಥವ ಸಹಕಾರ ಇಲಾಖೆಯಾಗಲಿ ಇದರ ಬಗ್ಗೆ ಸರಿಯಾದ ರಕ್ಷಣೆ ಕೊಡುತ್ತಿಲ್ಲ. ಅದನ್ನು ಮೊದಲು ಕೊಡಬೇಕು. ಸುಧಾರಿಸಿದ ಬೀಜ ದೊರೆತರೆ ಹೆಚ್ಚು ಬೆಳೆಯಬಹುದು.

ಇನ್ನೊಂದು ದೊಡ್ಡ ತೊಂದರೆ ಏನೆಂದರೆ, ಬೆಳೆದುದನ್ನು ಸಾಗಿಸಲು ಟ್ರಾನ್ಸ್‌ಪೋರ್ಟ್ ಫೆಸಿಲಿಟೀಸ್ ಬೇಕು, ರೈಲ್ವೆ ಅನುಕೂಲ ಬೇಕು. ಇದಕ್ಕಾಗಿ ಕೇಂದ್ರ ಸರಕಾರದೊಡನೆ ವ್ಯವಹರಿಸಿ ಆಲೂಗಡ್ಡೆ ಸೀಜನ್‌ನಲ್ಲಿ ರೈಲ್ವೆ ಸೌಕರ್ಯ ದೊರೆಯುವಂತೆ ನಮ್ಮ ಸರ್ಕಾರದವರು ತಕ್ಕ ಏರ್ಪಾಡು ಮಾಡಬೇಕು. ಇಷ್ಟು ರೈಲ್ವೆ ವ್ಯಾಗನ್‌ಗಳನ್ನು ಕಡೂರು ರೈಲ್ವೆ ಸ್ಟೇಷನ್‌ಗೆ ಒದಗಿಸಿಕೊಡಬೇಕೆಂದು ಅನುಮತಿ ತೆಗೆದುಕೊಂಡು ಇದಕ್ಕೆ ಏರ್ಪಾಡು ಮಾಡಬೇಕು. ಈಗ ಟ್ರಾನ್ಸ್‌ಪೋರ್ಟ್ ಚಾರ್ಜಸ್ ಬಹಳ ಹೆಚ್ಚಾಗುತ್ತಾ ಇದೆ. ಇದರಿಂದ ಕೊಳ್ಳತಕ್ಕವರಿಗೆ ಬೆಲೆ ಜಾಸ್ತಿ ಬೀಳುತ್ತಾ ಇದೆ. ರೈತನಿಗೂ ಕೂಡ ಸರಿಯಾದ ಬೆಲೆ ದೊರೆಯುತ್ತಿಲ್ಲ. ವ್ಯಾಗನ್‌ಗಳ ಮುಖಾಂತರ ಸಾಗಿಸಿದ್ದೇ ಆದರೆ ರೈತನಿಗೂ ಕೂಡ ಹೆಚ್ಚು ಬೆಲೆ ಸಿಕ್ಕುತ್ತದೆ, ಕೊಂಡುಕೊಳ್ಳತಕ್ಕವರಿಗೂ ಕಡಿಮೆ ಬೆಲೆಯಲ್ಲಿ ಸಿಕ್ಕುತ್ತದೆ ಎಂಬ ಮಾತನ್ನು ಹೇಳುತ್ತಾ ಇದ್ದೇನೆ. ಆಲೂಗಡ್ಡೆ ಬೆಳೆಯತಕ್ಕ ರೈತನಿಗೆ ಸುಧಾರಿಸಿದ ಬೀಜಗಳು, ಗೊಬ್ಬರ ಮತ್ತು ಔಷಧಗಳನ್ನು ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟಿನವರು ಒಂದು ಸ್ಕ್ವಾಡ್ ನೇಮಕ ಮಾಡಿ ಕಾಲಕ್ಕೆ ಸರಿಯಾಗಿ ಒದಗಿಸಿದರೆ ನಿಜವಾಗಿಯೂ ಬಡ ರೈತನಿಗೆ ಅನುಕೂಲ ಮಾಡಿದಂತಾಗುತ್ತದೆ ಎಂಬ ಮಾತನ್ನು ಹೇಳಲು ಇಚ್ಛಿಸುತ್ತೇನೆ.

ಮತ್ತು ಜಮೀನನ್ನು ರೈತರಿಗೆ ಹಂಗಾಮಿ ಸಾಗುವಳಿಗೆ ಕೊಡಬೇಕು, ಆಲೂಗಡ್ಡೆ 90 ದಿವಸದಲ್ಲಿ ಬರುತ್ತದೆ, ಅಷ್ಟರಲ್ಲಿ ಅವನು ಲಾಭ ಮಾಡಿಕೊಳ್ಳಬಹುದು, ಆದೇ ಬತ್ತ ಬೆಳೆದರೆ ಅಷ್ಟು ಲಾಭ ಬರುವುದಿಲ್ಲ. ಈಗ ನಿರುದ್ಯೋಗಿ ರೈತರು ಎಷ್ಟೋ ಜನ ಇದ್ದಾರೆ, ಅವರ ಸಮಸ್ಯೆಯನ್ನು ಬಗೆಹರಿಸುವುದನ್ನೂ ಕೂಡ ಗಮನದಲ್ಲಿಟ್ಟುಕೊಂಡು ಈ ಒಂದು ಸ್ಕೀಮನ್ನು ಮಾಡಬೇಕು. ಇಷ್ಟು ಹೇಳಿ ನನಗೆ 5 ನಿಮಿಷ ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸಿ ಕುಳಿತುಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀ ಜ್ವಾಲನಯ್ಯನವರು ಸರ್ಕಾರದ ಗಮನ ಸೆಳೆಯತಕ್ಕ ಸೂಚನೆಯನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಹಾಸನ, ಕೋಲಾರ ಬೆಂಗಳೂರು, ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಬೆಳೆದಿರತಕ್ಕ ಆಲೂಗಡ್ಡೆ ಬೆಳೆಗೆ ಬಿದ್ದಿರತಕ್ಕ ರೋಗವನ್ನು ನಿವಾರಣೆ ಮಾಡುವುದರಲ್ಲಿ ಸರ್ಕಾರದವರು ಸಾಕಾದಷ್ಟು ಆಸಕ್ತಿ ವಹಿಸಲಿಲ್ಲ ಎಂದು ಹೇಳಿದ್ದಾರೆ. ಈ ವರ್ಷ ಹಾಸನ ಜಿಲ್ಲೆಯಲ್ಲಿ 20 ಸಾವಿರ ಎಕರೆ ಆಲೂಗಡ್ಡೆ ಬೆಳೆದಿರ

(ಶ್ರೀ ಬಿ. ರಾಚಯ್ಯ)

ತಕ್ಕ ಪ್ರದೇಶದಲ್ಲಿ ಹೆಚ್ಚು ಭಾಗ ಅವರು ಹೇಳಿರುವಂತೆ ಈ ಒಂದು ರೋಗಕ್ಕೆ ಒಳಗಾಗಿ ಬಹಳ ಜನ ರೈತರಿಗೆ ತೊಂದರೆಯಾಗಿದೆ ಎಂಬ ವಿಷಯವನ್ನು ಒಪ್ಪಿಕೊಳ್ಳುತ್ತೇನೆ. ಈ ವರ್ಷ ಹೆಚ್ಚಿನ ಪ್ರಮಾಣದಲ್ಲಿ ಈ ಒಂದು ರೋಗ ತಗಲಿ ರೈತರಿಗೆ ಅಪಾರವಾದ ನಷ್ಟವಾಗಿದೆ. ಎಂಬುದನ್ನು ನಾನು ಮನಗಂಡಿದ್ದೇನೆ. ಆದರೆ ಈ ರೋಗಕ್ಕೆ ಕಾರಣವನ್ನು ನಾವು ತಿಳಿದುಕೊಳ್ಳಬೇಕಾಗಿದೆ. ಅವರು ಹೇಳಿದ ಹಾಗೆ ಮೂಲಭೂತವಾಗಿ ರೋಗ ರಹಿತವಾಗಿರತಕ್ಕ ಆಲೂಗಡ್ಡೆಯನ್ನು ಪಡೆಯುಲಿಕ್ಕೆ ಇನ್ನೂ ನಮ್ಮಿಂದ ಸಂಪೂರ್ಣವಾಗಿ ಸಾಧ್ಯವಾಗಿಲ್ಲ. ಸಿಮ್ಲಾದಲ್ಲಿರತಕ್ಕ ಸ್ಟೇಷನ್‌ನಿಂದ ಹೆಚ್ಚು ಇಳುವರಿ ಬರತಕ್ಕ ಒಳ್ಳೆಯ ತಳಿಯ ಆಲೂಗಡ್ಡೆಯನ್ನು ತರಿಸಿ ಇಲ್ಲಿನ ರೈತರಿಗೆ ಕೊಟ್ಟರು. ರೈತರು ಅದನ್ನು ಚಿಕ್ಕಬಳ್ಳಾಪುರ ಮತ್ತು ಬೆಂಗಳೂರಿನ ಕೆಲವು ಭಾಗಗಳಿಗೆ ತೆಗೆದು ಕೊಂಡು ಬಂದು ಅಲ್ಲಿ ಬೆಳೆಸಿದರು. ಅಲ್ಲಿ ಬೆಳೆದಂತಹ ಆಲೂಗಡ್ಡೆಯನ್ನು ಹಾಸನ ಜಿಲ್ಲೆಯ ರೈತರು ಮಳೆಯ ಆಶ್ರಯ ಇರತಕ್ಕ ಭೂಮಿಯಲ್ಲಿ ಬೆಳೆಯುತ್ತಾ ಇದ್ದಾರೆ. ಇತ್ತೀಚೆಗೆ ಹಾಸನದ ಸೋಮನ ಹಳ್ಳಿ ಮತ್ತು ಬಿಳಿಗಿರಿರಂಗನ ಬೆಟ್ಟದ ಫಾರಂ ಮತ್ತು ಕೆಮ್ಮಣ್ಣಗುಂಡಿ ಫಾರಂನಲ್ಲಿ ಸಣ್ಣ ಪ್ರಮಾಣದ ಸಂಶೋಧನೆ ಮಾಡುತ್ತಾ ಇದ್ದೇವೆ. ಆದರೆ ಪೂರ್ಣವಾಗಿ ನಾವು ಈ ಒಂದು ಅವಶ್ಯಕತೆಯನ್ನು ಪೂರೈಸುವುದಕ್ಕೆ ಸಾಧ್ಯವಾಗುತ್ತಿಲ್ಲ. ರಂಗೂನ್ ಮತ್ತು ಹಾಲೆಂಡ್‌ನಿಂದ 6-7 ವರ್ಷಗಳ ಹಿಂದೆ ಕೇಂದ್ರ ಸರ್ಕಾರದವರು ಈ ರೀತಿ ಬೀಜದ ಆಲೂಗಡ್ಡೆಯನ್ನು ತರಿಸುತ್ತಾ ಇದ್ದರು. ಈಗ ಅದನ್ನು ನಿಲ್ಲಿಸಿದ್ದಾರೆ. ಇದು ಕಳೆದ ವರ್ಷ ನನ್ನ ಗಮನಕ್ಕೆ ಬಂದಾಗ ಕೇಂದ್ರ ಸರ್ಕಾರದವರ ಜೊತೆಯಲ್ಲಿ ವ್ಯವಹರಿಸಿ ಮಾತನಾಡಿದಾಗ ಇದು ಕೇಂದ್ರ ಸರ್ಕಾರದ ತೀರ್ಮಾನ ಎಂದು ತಿಳಿದು ಬಂತು.

ಶ್ರೀ ಎಲ್. ಶ್ರೀಕಂಠಯ್ಯ.—ಸರ್ಕಾರದವರು ಈ ಬಗ್ಗೆ ಯೋಜಿತವಾದ ಒಂದು ಯೋಜನೆ ಹಾಕಿಕೊಂಡು ಒಳ್ಳೆಯ ತಳಿ ಒದಗಿಸುವುದಕ್ಕೆ ಏನು ಕಾರ್ಯಕ್ರಮ ಕೈಕೊಂಡಿದ್ದೀರಿ ?

ಶ್ರೀ ಬಿ. ರಾಚಯ್ಯ.—ಈ ಒಂದು ಸಂಶೋಧನಾ ವಿಭಾಗವನ್ನು ಐ.ಸಿ.ಎ. ಆರ್. ಅವರು ವಹಿಸಿಕೊಂಡಿದ್ದಾರೆ ಮತ್ತು ಉಳಿದಿರತಕ್ಕ ಕೆಲವು ಎರಡನೇ ಮಟ್ಟದ ಸಂಶೋಧನೆಯನ್ನು ನಾವು ಒದಗಿಸಿಕೊಟ್ಟಿದ್ದೇವೆ. ಆದ್ದರಿಂದ ಇಲಾಖೆಯಲ್ಲಿ ಬೇಸಿಕ್ ರಿಸರ್ಚ್ ಮಾಡುವುದಕ್ಕೆ ಇವತ್ತು ಅವಕಾಶವಿಲ್ಲ. ಹಾರ್ಟಿಕಲ್ಚರಲ್ ಡಿಪಾರ್ಟ್‌ಮೆಂಟಿನವರು ಈ ಒಂದು ಸಂಶೋಧನೆಯಿಂದ ಆಗ ತಕ್ಕ ರಿಸಲ್ಟ್ ಏನಿವೆ ಆ ಬಗ್ಗೆ ರೈತರಿಗೆ ತಿಳಿವಳಿಕೆ ಕೊಟ್ಟು ಅದರ ಮುಖಾಂತರ ಈ ಕಾರ್ಯ ಮಾಡುತ್ತಾ ಇದ್ದಾರೆ.

ಕೇಂದ್ರ ಸರ್ಕಾರದ ರಿಸರ್ಚ್ ಇನ್‌ಸ್ಟಿಟ್ಯೂಟ್ ಏನಿದೆ ಅಲ್ಲಿ ಇದರ ಉತ್ಪಾದನೆಯನ್ನು ಹೆಚ್ಚು ಮಾಡಿ, ಎರಡನೇ ಸ್ಟೇಜ್‌ನಲ್ಲಿ ನಮ್ಮ ಸಂಸ್ಥಾನದಲ್ಲಿ ಇನ್ನೂ ಕೆಲವು ಫಾರಂಗಳನ್ನು ಹೆಚ್ಚಾಗಿ ತೆಗೆದು ಆಯಾಯಾ ಹವಾ ಗುಣಕ್ಕೆ ತಕ್ಕ ಹಾಗೆ ಎಲಿವೇಷನ್‌ಗೆ ತಕ್ಕ ಹಾಗೆ ಎರಡನೇ ಸ್ಟೇಜ್‌ನ ಫಾರಂಗಳನ್ನು ವಿಸ್ತರಿಸಬೇಕಾಗಿದೆ. ಒಂದೆರಡು ವರ್ಷದಲ್ಲಿ ಸಂಶೋಧನೆ ನಡೆಸಿ ಇದನ್ನು ಪೂರೈಸುವುದಕ್ಕೆ ಆಗುವುದಿಲ್ಲ. ರೋಗ ರಹಿತವಾದ ಬೀಜವನ್ನು ಪಡೆಯಬೇಕಾಗಿದ್ದ ಪಕ್ಷದಲ್ಲಿ ಸ್ವಲ್ಪ ಕಾಲ ಹಿಡಿಯುತ್ತದೆ. ಮೈಸೂರು ಸಂಸ್ಥಾನಕ್ಕೆ ಒಂದು ಒಂದೂವರೆ ಲಕ್ಷ ಚೀಲಗಳಷ್ಟು ಆಲೂಗಡ್ಡೆಯ ಬೀಜ ಬೇಕಾಗಿದೆ. ಅದನ್ನು ಇವತ್ತಿನ ದಿವಸ ನಾವು ವ್ಯವಸ್ಥಿತವಾಗಿ ಇಲಾಖೆಯ ಮುಖಾಂತರ ತರಿಸಿ ಕೊಡುತ್ತಾ ಇಲ್ಲ. ಮಾರ್ಕೆಟಿಂಗ್ ಸೊಸೈಟಿಗಳವರು ತರಿಸಿ ಕೊಡುತ್ತಾ ಇದ್ದಾರೆ. ಈ ವ್ಯವಸ್ಥೆ ನಿಜವಾಗಿಯೂ ಕೂಡ ರೈತರಿಗೆ ಹೆಚ್ಚು ಪ್ರಯೋಜನಕಾರಿಯಾಗಿಲ್ಲ ಎಂಬುದನ್ನು ನಾನು ಮನಗಂಡಿದ್ದೇನೆ. ಅದಕ್ಕೇ ಮೊನ್ನೆ 13ನೇ ತಾರೀಖಿನ ದಿವಸ ಹಾಸನ ಜಿಲ್ಲೆಯ ಕೆಲವು ಪ್ರತಿನಿಧಿಗಳನ್ನು ಮತ್ತು ಕೋಲಾರ ಜಿಲ್ಲೆಯ ರೈತರನ್ನು ಕರೆಸಿ ಈ ವಿಷಯದಲ್ಲಿ ನಾವೇನು ಮಾಡಬೇಕು ಮತ್ತು ಏನೇನು ಆಗಿದೆ ಎಂಬ ಬಗ್ಗೆ ಚರ್ಚೆ ಮಾಡಿದ್ದೇನೆ. ಮತ್ತು ಸಕಾಲದಲ್ಲಿ ರೈತರಿಗೆ ರೋಗರಹಿತವಾದ ಸರ್ಟಿಫೈಡ್ ಸೀಡ್ಸ್ ಕೊಡುವ ವ್ಯವಸ್ಥೆ ಮಾಡಬೇಕೆಂಬ ತೀರ್ಮಾನವನ್ನು ಈಗಾಗಲೇ ತೆಗೆದುಕೊಂಡಿದ್ದೇವೆ.

4-00. P.M.

ಶ್ರೀ ಎ. ಮುನಿಯಪ್ಪ.—ರಂಗೂನ್ ಆಲೂಗಡ್ಡೆ ವಿಚಾರ ಏನಾಗಿದೆ ?

ಶ್ರೀ ಬಿ. ರಾಚಯ್ಯ.—ರಂಗೂನ್ ಆಲೂಗಡ್ಡೆಯನ್ನು ತರಿಸುವುದಕ್ಕೆ ಕೇಂದ್ರ ಸರ್ಕಾರದವರು ಒಪ್ಪಿಗೆಯನ್ನು ಕೊಡಲಿಲ್ಲ. ಆದುದರಿಂದ ಏನಿದ್ದರೂ ನಮ್ಮ ಸಂಶೋಧನೆಯಲ್ಲಿ ಸಿಕ್ಕುತ್ತಾ ಇರುವುದನ್ನು ಉಪಯೋಗಿಸಬೇಕಾಗಿದೆ.

ಶ್ರೀ ಎ. ಮುನಿಯಪ್ಪ.—ಸಿವಾಸ್ಲಾದಲ್ಲಿ ಒಂದು ಸೊಸೈಟಿ ಮಾಡಿಕೊಂಡು ರಂಗೂನ್ ಆಲೂಗಡ್ಡೆ ಸಿಕ್ಕುವುದಕ್ಕೆ ಅವಕಾಶ ಇಲ್ಲದಂತೆ ಮಾಡಿದ್ದಾರೆ. ತಮ್ಮದೇ ಆಲೂಗಡ್ಡೆ ಖರ್ಚಾಗಬೇಕು ಎನ್ನುವ ದೃಷ್ಟಿಯಿಂದ ಈ ರೀತಿ ಮಾಡುತ್ತಾ ಇದ್ದಾರೆ ಎಂದು ತಿಳಿಯುತ್ತದೆ. ಆದರೆ ಇವರದ್ದು ಮೂರು ಗಾಡಿ ಬೆಳೆ ಆಗುವ ಬದಲು ರಂಗೂನ್ ಆಲೂಗಡ್ಡೆಯಿಂದ ಐದು ಗಾಡಿ ಬೆಳೆ ಬರುತ್ತದೆ. ಆದುದರಿಂದ ಇದನ್ನು ತಮಗೆ ಮನವರಿಕೆ ಮಾಡಿದ್ದೇನೆ.

ಶ್ರೀ ಬಿ. ರಾಚಯ್ಯ.—ನಾನು ಚಿಕ್ಕಬಳ್ಳಾಪುರಕ್ಕೆ ಹೋಗಿದ್ದೆ. ಅವರು ನನ್ನ ಜೊತೆಯಲ್ಲಿ ಡೆಲ್ಲಿಗೆ ಬಂದಿದ್ದರು. ಕೇಂದ್ರ ಸರ್ಕಾರದವರ ಜೊತೆಯಲ್ಲಿ ಮಾತನಾಡಿದೆ. ಆದರೆ ಅವರು ಒಪ್ಪಲಿಲ್ಲ. ನಮ್ಮಲ್ಲಿಯೇ ಹೆಚ್ಚಿನ ರೀತಿಯಲ್ಲಿ ಉತ್ಪತ್ತಿ ಆಗುತ್ತಾ ಇರುವುದರಿಂದ ಆ ದೇಶದ ಆಲೂಗಡ್ಡೆಯನ್ನು ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಬಹುಶಃ ಮುನಿಯಪ್ಪನವರು ಹೇಳಿದಹಾಗೆ ಮಾನ್ಯ ಜಗಜೀವನರಾಂ ಹತ್ತಿರ ಕೂಡ ಮಾತನಾಡಿ ಪ್ರಯತ್ನ ಮಾಡಿದೆ. ಆದರೆ ಅದು ಸಾಧ್ಯವಾಗಲಿಲ್ಲ. ಪುನಃ ಪ್ರಯತ್ನವನ್ನು ಮಾಡುತ್ತಾ ಇದ್ದೇನೆ. ಅದು ಎಷ್ಟುಮಟ್ಟಿಗೆ ಫಲಕಾರಿಯಾಗುತ್ತದೋ ಹೇಳುವುದಕ್ಕಾಗುವುದಿಲ್ಲ. ಒಟ್ಟಿನಲ್ಲಿ ರೋಗ ರಹಿತ ಬೀಜ ಸಿಕ್ಕದೆ ಇರುವುದರಿಂದ ಈ ರೋಗಕ್ಕೆ ಮೂಲಕಾರಣವಾಗಿದೆ. ಅದಕ್ಕೋಸ್ಕರ ಒಳ್ಳೆಯ ಬೀಜವನ್ನು ತರಲು ಟೆಕ್ನಿಕಲ್ ಆಫೀಸರನ್ನು ಕರೆದುಕೊಂಡು ಹೋಗಿ ತೆಗೆದುಕೊಂಡು ಬರಬೇಕು. ಆದುದರಿಂದ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನವರು ಈ ವರ್ಷ 1,000 ಟನ್ನುಗಳಷ್ಟು ಒಳ್ಳೆಯ ಉತ್ತಮ ಬೀಜವನ್ನು ಕೊಡುವ ಏರ್ಪಾಡು ಮಾಡಬೇಕೆಂದು ಆಗಲೇ ಅಧ್ಯಕ್ಷರಿಗೆ ಕೇಳಿಕೊಂಡಿದ್ದೇವೆ. ಮತ್ತು ಅವರ ಜೊತೆಯಲ್ಲಿ ನಮ್ಮ ಇಲಾಖೆಯ ತಜ್ಞರೂ ಹೋಗುತ್ತಾರೆ. ಎಲ್ಲಿ ಚೆನ್ನಾಗಿ ಬೆಳೆಯಾಗಿದೆಯೋ ಅಂಥ ಕಡೆ ಹೋಗಿ ಬೀಜಗಳನ್ನು ತೆಗೆದುಕೊಂಡು ಬಂದು ರೈತರಿಗೆ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ರೈತರಿಗೆ ಬೇಕಾಗಿರುವಂಥ ಗೊಬ್ಬರ ಮತ್ತು ಕ್ರಿಮಿನಾಶಕ ಔಷಧಿಗಳನ್ನು ಉಪಯೋಗಿಸುವುದಕ್ಕೆ ಎಷ್ಟು ಎಕರೆ ಭೂಮಿಗೆ ಎಷ್ಟು ಬೇಕಾಗುತ್ತದೆ, ಎಷ್ಟು ಮುಂದಿನ ಸಾಲಿಗೆ ತೆಗೆದುಕೊಳ್ಳಬೇಕು, ಅದಕ್ಕೆ ಬೇಕಾಗಿರುವಂಥ ಸಿಬ್ಬಂದಿ ಮತ್ತು ಎಲ್ಲಾ ಸೌಕರ್ಯಗಳನ್ನೂ ಕೂಡ ಒದಗಿಸಬೇಕೆಂದು ಈಗಾಗಲೇ ಸರಕಾರದವರು ತೀರ್ಮಾನ ಮಾಡಿದ್ದಾರೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಚಿಕ್ಕಮಗಳೂರು ಜಿಲ್ಲೆಯನ್ನು ಇದರಲ್ಲಿ ಸೇರಿಸಿದ್ದೀರಾ ?

ಶ್ರೀ ಬಿ. ರಾಚಯ್ಯ.—ಚಿಕ್ಕಮಗಳೂರು ಜಿಲ್ಲೆ ಒಂದೇ ಅಲ್ಲ, ಆಲೂಗಡ್ಡೆ ಬೆಳೆಯತಕ್ಕ ಎಲ್ಲಾ ರೈತರಿಗೂ ಈ ಸೌಲಭ್ಯಗಳನ್ನು ಕೊಡಲು ಏರ್ಪಾಡುಮಾಡಿದ್ದೇವೆ. ರೋಗ ಬಂದಂಥ ಕಾಲದಲ್ಲಿ ಅನೇಕ ಜಿಲ್ಲೆಗಳಲ್ಲಿ ಒಟ್ಟಿಗೇ ಬರುತ್ತದೆ. ಜೋಳಕ್ಕೆ ಬರುತ್ತದೆ, ಭತ್ತಕ್ಕೆ ಬರುತ್ತದೆ. ಕೆಲವು ಕಡೆ ರೈತರು ಸಾಮೂಹಿಕವಾಗಿ ರೋಗ ನಿರೋಧಕ ಔಷಧಿಗಳನ್ನು ತೆಗೆದುಕೊಳ್ಳಬೇಕು. ಆದರೆ ಅನೇಕ ರೈತರುಗಳು ತೆಗೆದುಕೊಳ್ಳುವುದಿಲ್ಲ. ಯಾಕಂದರೆ ಇದರ ಬೆಲೆ ಹೆಚ್ಚಾಗಿರುವುದರಿಂದ ಮತ್ತು ಖರ್ಚು ಜಾಸ್ತಿಯಾಗುವುದರಿಂದ ಈ ಒಂದು ಕಾರಣದಿಂದ ಅನೇಕ ರೈತರು ಒಪ್ಪಿಗೆಯನ್ನು ಕೊಡುವುದಿಲ್ಲ. ಎಪಿಡಮಿಕ್ಸ್ ತಡೆಗಟ್ಟುವ ರೀತಿಯಲ್ಲಿ ಇದನ್ನು ತಡೆಗಟ್ಟಬೇಕೆಂದು ಯೋಚನೆ ಮಾಡುತ್ತಾ ಇದ್ದೇವೆ. ಯಾಕಂದರೆ ಪ್ರತಿಯೊಬ್ಬ ರೈತನೂ ಕೂಡ ಔಷಧಿ ಹೊಡೆಯಲು ಒಪ್ಪಿದರೆ ನಮ್ಮ ಇಲಾಖೆಯ ಮುಖಾಂತರ ಹೊಡೆಸಿ ಅದಕ್ಕೆ ಏನು ಖರ್ಚು ಬೀಳುತ್ತದೆಯೋ ಅದನ್ನು ವಸೂಲು ಮಾಡತಕ್ಕ ವ್ಯವಸ್ಥೆಯನ್ನು ಮಾಡಿಕೊಂಡರೆ ಈ ರೋಗಗಳನ್ನು ಅತಿ ಶೀಘ್ರವಾಗಿ ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತದೆ. ರೈತರಿಗೆ ಔಷಧಿ ಕೊಡುತ್ತೇವೆ, ಸ್ಪ್ರೇ ಕೊಡುತ್ತೇವೆ. ಆದರೂ ಇದನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಅತಿ ಶೀಘ್ರವಾಗಿ ಈ ರೋಗಗಳು ಹರಡುತ್ತಾ ಇರುತ್ತವೆ. ಆ ದೃಷ್ಟಿಯಿಂದ ಈ ಸಾರಿ ಏನು ಅನಾಹುತವಾಗಿದೆ ಮತ್ತು ರೈತರಿಗೆ ಕೆಡಕು ಆಗಿದೆ ಅದರ ಬಗ್ಗೆ ನಾನು ಸಾಕಷ್ಟು ಮಟ್ಟಿಗೆ ವ್ಯಥೆ ಪಡುತ್ತೇನೆ ಎಂದು ಈ ಸಂದರ್ಭದಲ್ಲಿ ಮಾನ್ಯ ಸಭೆಯಲ್ಲಿ ನಿವೇದನೆ ಮಾಡಿಕೊಳ್ಳುತ್ತೇನೆ. ಸಂಬಂಧಪಟ್ಟ ಇಲಾಖೆ ತಜ್ಞರು ಮುಂಜಾಗ್ರತೆಯಾಗಿ ಇಂಥಿಂಥ ಕೆಲಸಗಳು ಆಗಬೇಕಾಗಿವೆ ಎಂದು ಹಾವೇರಿಯಲ್ಲಿ ಕಾಟನ್ನಿಗೆ ಏರಿಯಲ್ ಸ್ಪ್ರೇ ಮಾಡುತ್ತಾ ಔಷಧಿಗಳನ್ನು ಹಾಕುತ್ತಾ ಇದ್ದಾರೆ. ಆ ರೀತಿ ಇಲ್ಲಿಯೂ ಮಾಡಬೇಕೆಂಬ ಯೋಚನೆ ಸರಕಾರಕ್ಕೆ ಬರಲಿಲ್ಲ. ಸರಕಾರಕ್ಕೆ ಈ ಯೋಚನೆ ಬಂದಿದ್ದ ಪಕ್ಷದಲ್ಲಿ ಈ ರೀತಿ ಕೆಡಲಿಕ್ಕೆ ಅವಕಾಶವಾಗುತ್ತಾ ಇರಲಿಲ್ಲ. ಒಟ್ಟಿನಲ್ಲಿ ಈ ಒಂದು ಆಲೂಗಡ್ಡೆ ವಿಚಾರದಲ್ಲಿ ಹಾಸನ ಜಿಲ್ಲೆಯ ಮತ್ತು ಮಲೆನಾಡಿನ ಕೆಲವು ಜಿಲ್ಲೆಗಳ ರೈತರ ಆರ್ಥಿಕ ಉತ್ಪಾದನೆಗೆ ಸಹಾಯಕವಾಗಿದೆ. ಇದು ಶೀಘ್ರವಾಗಿ ಬೆಳೆ ಬರತಕ್ಕದ್ದು ಆಗಿರುವುದರಿಂದ ಹೆಚ್ಚಿನ ರೀತಿಯಲ್ಲಿ ವಿಸ್ತಾರಗೊಳ್ಳುವುದಕ್ಕೆ ರೈತರಿಗೆ ಪ್ರೋತ್ಸಾಹ ಕೊಡುವ ರೀತಿಯಲ್ಲಿ ಒಂದು ಸಮಗ್ರವಾದ ಪ್ಯಾಕೇಜ್ ಪ್ರೋಗ್ರಾಂ ಅನ್ನು ತಯಾರು ಮಾಡಿ ಎಂದು ಕೇಳಿದ್ದಾರೆ. ಇದು ಬಹಳ ಸೂಕ್ತವಾದ ಸಲಹೆ ಎಂದು ನಾನಾದರೂ ಕೂಡ ಒಪ್ಪಿಕೊಳ್ಳುತ್ತೇನೆ. ಸಹಾಯವನ್ನು ಮಾಡತಕ್ಕ ಕಾಲದಲ್ಲಿ, ಚಿಕ್ಕಮಗಳೂರು, ಚಿತ್ರದುರ್ಗ,

(ಶ್ರೀ ಬಿ. ರಾಚಯ್ಯ)

ಕೋಲಾರ, ಹಾಸನ ಅಂತ ಹೇಳುವುದಕ್ಕೆ ಬದಲಾಗಿ ಆಲೂಗಡ್ಡೆ ಬೆಳೆಗೆ ಇಲಾಖೆಯಿಂದ ಏನು ಸಹಾಯವನ್ನು ಒದಗಿಸುತ್ತಾರೋ ಅದಕ್ಕೆ ಒಂದು ಸಮಗ್ರವಾದ ಯೋಜನೆಯನ್ನು ಮಾಡುವುದಕ್ಕೆ ಸರಕಾರ ಪ್ರಯತ್ನವನ್ನು ಮಾಡುತ್ತದೆ ಎಂದು ತಿಳಿಸುತ್ತೇನೆ. ಈ ಒಂದು ವಿಷಯದಲ್ಲಿ ಪ್ರಸ್ತಾಪ ಮಾಡುತ್ತಾ ಸೋಮನಹಳ್ಳಿಯಲ್ಲಿ ಒಬ್ಬ ಅಧಿಕಾರಿ ಇದ್ದರು. ಅವರು ಏನು ಕೆಲಸ ಮಾಡ ಬೇಕಾಗಿತ್ತೋ ಆ ಕೆಲಸವನ್ನು ಮಾಡಿದ್ದಾರೆ. ಅವರು ಕೆಲಸ ಚೆನ್ನಾಗಿ ಮಾಡುತ್ತಾ ಇದ್ದರು ಎನ್ನುವುದು ನಿರ್ವಿವಾದವಾದ ಮಾತು. ಅವರು ಅಂಡರ್ ಗ್ರ್ಯಾಜುಯೇಟ್ ಆಗಿದ್ದರು. ಆದುದ ರಿಂದ ಅವರನ್ನು ಬೇರೆ ಕಡೆಗೆ ಹಾಕಿ ಅವರು ಇರುವ ಕಡೆ ಎಂ. ಎಸ್. ಸಿ. ಪಾಸು ಮಾಡಿರುವ ಒಬ್ಬ ಗ್ರ್ಯಾಜುಯೇಟ್‌ನ್ನು ಹಾಕಿದ್ದಾರೆ. ರಿಸರ್ಚ್ ಸೈಡ್ ಕೆಲಸ ಮಾಡುವವರಿಗೆ ಬೇಸಿಕ್ ನಾಲೆಜ್ ಬೇಕಾಗುತ್ತದೆ. ಅದರ ಜೊತೆಯಲ್ಲಿ ಐ. ಸಿ. ಆರ್. ಮೀಟಿಂಗುಗಳಿಗೆ ಹೋದಾಗ ವಿಶ್ವವಿದ್ಯಾ ನಿಲಯದ ಎಂ.ಎಸ್.ಸಿ., ಪಿ.ಹೆಚ್. ಡಿ. ಪದವೀಧರರಾದ ಅಧಿಕಾರಿಗಳು ಇದ್ದರೆ, ಇಂಟರ್ ಕೋ ಆರ್ಡಿನೇಷನ್ ಚರ್ಚೆ ಆದ ಕಾಲದಲ್ಲಿ ಹೆಚ್ಚು ಅನುಕೂಲವಾಗುತ್ತದೆ.

ಶ್ರೀ ಹೆಚ್. ಬಿ. ಜ್ವಾಲನಯ್ಯ.—ಮೈಸೂರು ದೇಶದಲ್ಲಿ ಆಲೂಗಡ್ಡೆ ಬೆಳೆಯನ್ನು ಅಗಾಧ ವಾದ ಪ್ರಮಾಣದಲ್ಲಿ ಬೆಳೆಯುತ್ತಿದ್ದಾರೆ. ಇದಕ್ಕೆ ಬೇಕಾದಷ್ಟು ಸಹಾಯ ಮಾಡಬೇಕೆಂದು ಹೇಳಿ ನ್ಯಾಷನಲ್ ಪೊಟಾಟೋ ರಿಸರ್ಚ್ ಇನ್‌ಸ್ಟಿಟ್ಯೂಟ್ ಅಧಿಕಾರಿಗಳ ಗಮನಕ್ಕೆ ತಂದವನು ಆತ. ಭಕ್ರಾ ನಂಗಲ್ ಪ್ರಾಜೆಕ್ಟಿನ ಡಿಸೈನ್ ತಯಾರು ಮಾಡಿದವನು ಒಬ್ಬ ಸಾಮಾನ್ಯ ಮನುಷ್ಯ. ಆದ್ದರಿಂದ ಡಿಗ್ರಿ ಕ್ವಾಲಿಫಿಕೇಷನ್ ಒಂದನ್ನೇ ಗಮನಕ್ಕೆ ತೆಗೆದುಕೊಳ್ಳಬಾರದು ಸೀಡ್ ಮಲ್ಟಿಪ್ಲಿಕೇಷನ್ ಮತ್ತು ರಿಸರ್ಚ್ ಅವುಗಳನ್ನು ಬೇರೆ ಬೇರೆಯಾಗಿ ತೆಗೆದುಕೊಳ್ಳಬೇಕು.

ಶ್ರೀ ಬಿ. ರಾಚಯ್ಯ.—9 ವರ್ಷಗಳಿಂದ ಒಂದೇ ಜಾಗದಲ್ಲಿ ಇರುವುದರಿಂದ ಜ್ವಾಲನಯ್ಯ ನವರಿಗೆ ಒಂದು ಕಡೆ ವಿಷಯ ಮಾತ್ರ ತಿಳಿದಿರಬಹುದು. ನನಗೆ ಯಾರಮೇಲೂ ವೈಯುಕ್ತಿಕವಾಗಿ ದ್ವೇಷ ಇಲ್ಲ. ಹಾಸನ ಜಿಲ್ಲೆಯಲ್ಲಿ ಎಷ್ಟರಮಟ್ಟಿಗೆ ವಿವಾದಾತ್ಮಕವಾಗಿತ್ತು ಎನ್ನುವುದು ಸರಕಾರಕ್ಕೆ ಅರ್ಜಿಗಳು ಬಂದಿದ್ದುವು. ಆ ರೀತಿ ಅರ್ಜಿಗಳು ಬಂದದ್ದರಿಂದ ಒಂದು ರಿಪೋರ್ಟನ್ನು ತರಿಸಿಕೊಳ್ಳಬೇಕು ಎನ್ನುವ ದೃಷ್ಟಿಯಿಂದ ತರಿಸಿಕೊಂಡೆವು. ಈ ಇಲಾಖೆಯು ಒಂದು ಜವಾಬ್ದಾರಿ ಯನ್ನು ಹೊತ್ತಮೇಲೆ, ಅಲ್ಲಿ ಕಂಪ್ಲೆಂಟ್ಸ್ ಬಂದಾಗ ಅಲ್ಲಿ ಏನಾದರೂ ದುರುಪಯೋಗವಾಗುವ ಅವಕಾಶ ಇದ್ದಂಥ ಕಾಲದಲ್ಲಿ ಅದು ಎಷ್ಟರಮಟ್ಟಿಗೆ ನಿಜ ಅಥವಾ ಇಲ್ಲವೇ ಎಂಬುದನ್ನು ತಿಳಿದುಕೊಳ್ಳಲು ರಿಪೋರ್ಟನ್ನು ತರಿಸಿಕೊಂಡಿದ್ದೇನೆ. 9 ವರ್ಷಗಳು ಒಂದು ಕಡೆ ಇರುವುದರಿಂದ ಇನ್ನೊಂದು ಕಡೆ ಹೋಗಲಿ, ಅಲ್ಲಿಗೆ ಟ್ರೇನಿಂಗ್ ಆಗಿರುವ ಗ್ರಾಜುವೇಟ ಹಾಕಬೇಕು ಎನ್ನುವ ಉದ್ದೇಶದಿಂದ ಮಾಡಿದ್ದೇವೆ, ಆದರೆ ಜನಗಳಿಗೆ ನನ್ನ ಮೇಲೆ ಅಪನಂಬಿಕೆ ಬರಬಾರದು ಇಷ್ಟು ವರ್ಷ ಗಳಾದರೂ ಇಲ್ಲೇ ಇಟ್ಟುಕೊಂಡಿದ್ದಾರೆ ಎನ್ನುವ ಭಾವನೆ ಜನಗಳಿಗೆ ಬರುತ್ತದೆಂದು ಬದಲಾವಣೆ ಮಾಡಿದ್ದೇವೆ. ಡೈರೆಕ್ಟರವರ ಬದಲಾವಣೆ ಆಗಿಲ್ಲ. ಅವರಿಗೆ ಪ್ರೋತ್ಸಾಹ ಕೊಡುತ್ತಾರೆ. ಈಗಲೂ ಅವರು ಕೊಡಬಹುದು.

ಶ್ರೀ ಹೆಚ್. ಬಿ. ಜ್ವಾಲನಯ್ಯ.—ಮನೆಮನೆಗೂ ಹೋಗಿ ಸಹಾಯ ಮಾಡುತ್ತಿದ್ದ ವ್ಯಕ್ತಿಯನ್ನು ತೆಗೆದು ಆತನನ್ನು ಬಿಜಾಪುರ ಸೈನಿಕ ಶಾಲೆಗೆ ಹಾಕಿದರೆ ಅಲ್ಲಿ ಏನು ಮಾಡುತ್ತಾರೆ?

ಶ್ರೀ ಬಿ. ರಾಚಯ್ಯ.—ಅಲ್ಲಿಯೂ ಡೆವಲಪ್ ಆಗಬೇಕಾಗಿದೆ. ಮೂರು ವರ್ಷಗಳು ಒಂದು ಕಡೆ ಕೆಲಸ ಮಾಡಿದರೆ ಇನ್ನೊಬ್ಬರನ್ನು ಯಾಕೆ ಅಲ್ಲಿಗೆ ಹಾಕಲಿಲ್ಲ ಎಂದು ಕೇಳುವವರೂ ನೀವೇ. ಅಲ್ಲಿ ಏನು ಕೆಲಸ ಇದೆ ಎಂದು ಕೇಳಿದರೆ ಅದೇ ಉತ್ತರ ಹೇಳಬೇಕಾಗಿದೆ. ಒಟ್ಟಿನಲ್ಲಿ ಒಂದು ಕಡೆ ನೋಡುವುದಕ್ಕಾಗುವುದಿಲ್ಲ. ಇನ್ನೊಂದು ಕಡೆಯೂ ನೋಡಬೇಕಾಗುತ್ತದೆ. ಆತ ರಿಸರ್ಚ್ ಆಫೀಸರು ಏನೂ ಅಲ್ಲ. ಹೊಸದಾಗಿ ಏನನ್ನೂ ಕಂಡುಹಿಡಿಯಲಿಲ್ಲ. ಫೀಲ್ಡ್ ಅಸಿಸ್ಟೆಂಟ್ ಆಗಿ ಕೆಲಸ ಮಾಡುತ್ತಿದ್ದರು. ಉನ್ನತ ಅಧಿಕಾರಿಗಳಿಗೆ ಅಧಿಕಾರವಿಲ್ಲದ ರೀತಿಯಲ್ಲಿ ನಡೆದುಕೊಂಡರು. ಕಟ್ಟಡಗಳನ್ನು ಕಟ್ಟಿಸುವುದಾಗಲಿ, ಬಾವಿಗಳನ್ನು ತೋಡಿಸುವುದಾಗಲಿ, ಕೆರೆ ಕಟ್ಟುವುದನ್ನಾಗಲಿ ಪಿ. ಡಬ್ಲ್ಯೂ. ಡಿ. ರೂಲ್ ಪ್ರಕಾರ ಟೆಂಡರ್ ಕರೆಯದೆ ಅಮಾನಿಯಾಗಿ ಕೆಲಸ ಮಾಡಿದರೆ ಅದು ಅಪರಾಧವಾಗುತ್ತದೆ.

ಶ್ರೀ ಹೆಚ್. ಬಿ. ಜ್ವಾಲನಯ್ಯ.—ದಿನಗೂಲಿ ಕೆಲಸಗಾರರಿಂದ ಬಾವಿ ತೆಗೆಸಿದ್ದು ದೊಡ್ಡ ಅಪರಾಧವಾಯಿತೇ?

ಶ್ರೀ ಬಿ. ರಾಚಯ್ಯ.—ಅವರು ಅಪ್ರಮಾಣಿಕರು ಎಂಬ ತೀರ್ಮಾನಕ್ಕೆ ಬರಲಿಲ್ಲ. ಪರೀಕ್ಷೆ ಮಾಡಿ ನೋಡಬೇಕು. ಏನು ಖರ್ಚು ಮಾಡಬೇಕಾದರೂ ಒಂದು ವಿಧೇಯಕದ ರೀತಿಯಲ್ಲಿ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಅಕೌಂಟೆಂಟ್ ಜನರಲ್ಲಾಗಲೀ, ಫೈನಾನ್ಸ್ ಡಿಪಾರ್ಟ್‌ಮೆಂಟಾಗಲೀ ಒಪ್ಪಿಗೆ ಕೊಡುವುದಿಲ್ಲ. ಕೆಲವು ಕಾಯಿದೆಗಳನ್ನು ಅನುಸರಿಸಿ ಅದನ್ನು ಮಾಡಬೇಕಾಗಿತ್ತು. ಮಾಡಿಲ್ಲ ಯಾವುದರಲ್ಲಿ ಎಕ್ಸ್‌ಪರ್ಟ್ ಆಗಿದ್ದರೋ ಅದರಲ್ಲಿ ಅವರಿಗೆ ಟ್ರೈನಿಂಗ್ ಕೊಡಬೇಕೆಂಬ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಹೊರಗಡೆಗೆ ಯಾರು ಟ್ರೈನಿಂಗಿಗೆ ಹೋಗಿದ್ದಾರೋ, ಐ. ಸಿ. ಆರ್. ನಲ್ಲಿ ಯಾರು ಟ್ರೈನಿಂಗ್ ಪಡೆದಿದ್ದಾರೋ ಅವರನ್ನು ಆ ಕಡೆಗೆ ಹಾಕಬೇಕೆಂಬ ಉದ್ದೇಶದಿಂದ ಈಗ ಈ ಡಿಪಾರ್ಟ್‌ಮೆಂಟನ್ನು ರೀಆರ್ಗನೈಸ್ ಮಾಡುತ್ತಿದ್ದೇವೆ. ಅವರು ಫೀಲ್ಡ್ ವರ್ಕರ್ಸ್ ಎಂದು ಹೇಳಿದ ಮೇಲೆ, ಅವರನ್ನು ಬಿಜಾಪುರ ಸೈನಿಕ ಶಾಲೆಗೆ ಹಾಕುತ್ತಿದ್ದೇವೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಒಂದು ಹುದ್ದೆಯನ್ನು ಕ್ರಿಯೇಟ್ ಮಾಡಿ ಅವರನ್ನು ಹಾಕಿ. ಅದರಿಂದೇನೂ ತಪ್ಪಾಗುವುದಿಲ್ಲ. ಆ ರೀತಿ ಕೆಲಸಮಾಡುವ ಜನರಿದ್ದರೆ ಏಕೆ ಆರೀತಿ ಮಾಡಬಾರದು ?

ಶ್ರೀ ಬಿ. ರಾಚಯ್ಯ.—ಅವರು ಚೆನ್ನಾಗಿ ಕೆಲಸಮಾಡಿದ್ದಾರೆಯೇ ಇಲ್ಲವೇ ಎಂಬುದನ್ನು ನೋಡಲು ಕೆಲವಾರು ಕ್ರಿಟೀರಿಯಾ ಇರುತ್ತದೆ. ಅದರ ಪ್ರಕಾರ ನೋಡಿದಾಗ ನನ್ನ ಮಟ್ಟಿಗೆ ಅದರಲ್ಲಿ ಮೆಚ್ಚಿಗೆ ಆಗಲಿಕ್ಕಾಗುವುದಿಲ್ಲ. ಈ ವರ್ಷ ಮಾತ್ರ ಈ ಬೆಳೆ ಕೆಟ್ಟುಹೋಗಿದೆ ಎಂದು ಹೇಳುವ ಹಾಗೆ ಇಲ್ಲ. ಹತ್ತಾರು ವರ್ಷಗಳಿಂದ ಈ ಬೆಳೆಯನ್ನು ಬೆಳೆಯುತ್ತಿರುವಾಗ ಒಂದೇ ವರ್ಷದಲ್ಲಿ ಅದಕ್ಕೆ ಬೇಕಾದ ರಿಸರ್ಚ್ ಎಲ್ಲಾ ಮಾಡುವುದಕ್ಕಾಗುವುದಿಲ್ಲ. ಇದು ಬಹಳ ಮುಖ್ಯವಾದ ಬೆಳೆ. ಇದಕ್ಕೆ ಎಷ್ಟು ಗಮನವನ್ನು ಕೊಡಬೇಕೋ ಅಷ್ಟು ಗಮನವನ್ನು ನಾವು ಕೊಟ್ಟಿಲ್ಲವೆಂಬುದನ್ನು ನಾನು ಒಪ್ಪುತ್ತೇನೆ. ಇದನ್ನು ಇನ್ನೂ ಬಹಳ ಹೆಚ್ಚಿನ ರೀತಿಯಲ್ಲಿ ಸಂಶೋಧನೆ ಮಾಡಿ ಬೀಜ ಒದಗಿಸುವ ಕಡೆಗೂ ಮತ್ತು ಔಷಧಿಯನ್ನು ಸಿಂಪಡಿಸುವ ಕಡೆಗೂ ಗಮನಕೊಟ್ಟು ರೈತರು ಬೆಳೆದಂಥಾದ್ದನ್ನು ಹಾಸನದಲ್ಲಿ ಕೆಡದ ರೀತಿಯಲ್ಲಿ ಕೋಲ್ಡ್ ಸ್ಟೋರೇಜುಗಳನ್ನು ಇಡಬೇಕು. ಈಗ ಎರಡು ಸಾವಿರ ಟನ್ನುಗಳಷ್ಟು ಒಂದು ಕೋಲ್ಡ್ ಸ್ಟೋರೇಜನ್ನು ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನವರು ಮಾಡಬೇಕೆಂದು ಮುಂದೆ ಬಂದಿದ್ದಾರೆ. ಇದಕ್ಕೆ ಎಲ್ಲೆಲ್ಲಿ ಸಾಧ್ಯವಾಗುತ್ತದೋ ಅಲ್ಲಲ್ಲಿ ಸಾಧ್ಯವಾಗುವಂತಹ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ಈಗಾಗಲೇ ಒಂದನ್ನು ಚಿಕ್ಕಬಳ್ಳಾಪುರದಲ್ಲಿ ಬೆಂಗಳೂರಿನ ಫಾರ್ಮರ್ಸ್ ಫೋರಂನಲ್ಲಿ ತೆಗೆಯುತ್ತಿದ್ದೇವೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—80ಸಾವಿರ ಟನ್ನುಗಳಷ್ಟು ಆಲೂಗಡ್ಡೆ ಬೆಳೆಯುವಾಗ ಹಾಸನದಲ್ಲಿ ಒಂದು ದೊಡ್ಡ ಕೋಲ್ಡ್ ಸ್ಟೋರೇಜನ್ನು ಮಾಡಬೇಡವೇ ?

ಶ್ರೀ ಬಿ. ರಾಚಯ್ಯ.—ಅದನ್ನು ದೊಡ್ಡದು ಮಾಡಬೇಕೆಂದು ಒಪ್ಪಿದ್ದೇವೆ. ಅದಕ್ಕೋಸ್ಕರ ಸರ್ಕಾರದವರು ಸಾಕಷ್ಟು ಹಣ ಒದಗಿಸುವುದಕ್ಕೆ ಪ್ರಯತ್ನಮಾಡುತ್ತಿದ್ದಾರೆ. ರೈಲ್ವೆ ಅತಾರಿಟೀಸ್‌ನವರು ಕಡೂರು ಹಾಸನ, ಮತ್ತು ಬೆಂಗಳೂರಿನಿಂದ ಬೊಂಬಾಯಿ, ಕಲ್ಕತ್ತ ಮತ್ತು ಇತರೇ ಭಾಗಗಳಿಗೆ ಆಲೂಗಡ್ಡೆಯನ್ನು ರವಾನಿಸುವುದಕ್ಕೆ ಸಹಾಯ ಮಾಡುತ್ತಿದ್ದಾರೆ. ಈಗಿರತಕ್ಕ ಗುಡ್ಸ್ ಟ್ರೈನಿನಲ್ಲಿ ಅದು ಹೋಗುವುದರಿಂದ, ಅದು ಪೆರಿಷಬಲ್ ಆರ್ಟಿಕಲ್ ಆದುದರಿಂದ, ಅದು ಪೂರ್ತಿಯಾಗಿ ಕೆಟ್ಟುಹೋಗುತ್ತದೆಂದು ಮುಂಜಾಗರೂಕತೆಯ ಕ್ರಮಗಳನ್ನು ತೆಗೆದುಕೊಂಡು ರೈಲ್ವೆ ಡಿಪಾರ್ಟ್‌ಮೆಂಟಿನ ಕಮಿಷನರ್ ಅವರಲ್ಲಿ ಮತ್ತು ಸದರನ್ ರೈಲ್ವೆ ಜನರಲ್ ಮ್ಯಾನೇಜರ್ ಅವರ ಹತ್ತಿರ ಈ ವಿಷಯವಾಗಿ ಮಾತನಾಡುತ್ತಿದ್ದೇವೆ. ಸ್ಪೆಷಲ್ಲಾಗಿ ಏರ್ ಕಂಡೀಷನ್ ಇರುವ ಹಾಗೆ ಮಾಡಿ ಕೊಡಬೇಕೆಂದು ಕೇಳುತ್ತಿದ್ದೇವೆ. ಸಿಮ್ಲಾಕ್ಕೆ ಹೋಗಿ ಬೀಜವನ್ನು ತರುವ ಪ್ರಯತ್ನವನ್ನು ಮಾಡುತ್ತಿದ್ದೇವೆ. ಬಹುಶಃ ಈ ಹೆಚ್ಚಿಗೆ ರೋಗಕ್ಕೆ ಅವಕಾಶ ಕೊಡದೇ ಇರುವ ಹಾಗೆ ನೋಡಿಕೊಳ್ಳುವ ಪ್ರಯತ್ನವನ್ನು ಮಾಡುತ್ತಿದ್ದೇವೆ. ಅದಕ್ಕೆ ತಮ್ಮ ಸಹಕಾರ ಕೊಡಬೇಕಾಗಿದೆ. ರೈತರ ಸಹಕಾರವೂ ಸಹ ಬೇಕಾಗಿದೆ. ಈಗಾಗಲೇ ಹಾರ್ಟಿಕಲ್‌ಚರಲ್ ಕ್ರಾಪ್‌ಗಳಿಗೆ ಪ್ರತಿಯೊಂದು ಜಿಲ್ಲೆಯಲ್ಲಿಯೂ ಒಂದು ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಇರಬೇಕೆಂದು ಮಂಜೂರು ಮಾಡಿದ್ದೇವೆ. ಆಲೂಗಡ್ಡೆ ಬೆಳೆಯನ್ನು ಸೋಮನಹಳ್ಳಿ ಫಾರಂನಲ್ಲಿಯೂ ಮತ್ತು ಹಾಸನದಲ್ಲಿಯೂ ಮಾನ್ಯ ಸದಸ್ಯರು ಹೇಳಿದಂತೆ ಬೆಳೆದು ಅಲ್ಲಿ ಅವಿದ್ಯಾವಂತರಾದ ನಿರುದ್ಯೋಗಿಗಳಿಗೆ ಟ್ರೈನಿಂಗ್ ಕೊಡುವ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಆದರೆ ಇಲ್ಲಿನ ಆಲೂಗಡ್ಡೆ ಬೆಳೆಗೆ ರೋಗ ತಗುಲಿ ರೈತರಿಗೆ ಆಗಿರುವ ನಷ್ಟಕ್ಕೆ ಬಹಳ ವ್ಯಥೆಯಾಗುತ್ತದೆ. ಆ ನಷ್ಟವನ್ನು ನಾವು ಯಾವ ರೀತಿ ಅವರಿಗೆ ಕೊಡಿಸಿಕೊಡಬೇಕೋ ಅದರ ಬಗ್ಗೆ ಹೆಚ್ಚಿಗೆ ಕ್ರಮಗಳನ್ನು ತೆಗೆದುಕೊಳ್ಳುವ ಹಾಗೆ ಪ್ರಯತ್ನಮಾಡುತ್ತೇವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Discussion on the Report of the Mysore P. S. C.

(*Debate Continued*).

Mr. SPEAKER.—Now the discussion on the Report of the Public Service Commission will be resumed. Probably this extension of time was only for that purpose. We should be able to close the discussion on the report by 5-30 P.M. Probably reply would be given by the Government if they so desire.

(Mr. DEPUTY SPEAKER in the Chair)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಸ್ವಾಮಿ, ಮೊನ್ನೆ ನಾನು ಇಲ್ಲದಾಗ ನನ್ನ ಭಾಷಣದಲ್ಲಿ ಏನು ಅಪಾದನೆಗಳನ್ನು ಮಾಡಿದ್ದೇನೆ, ಅದನ್ನು ಎಕ್ಸ್‌ಪಂಜ್ ಮಾಡಲು ಆಜ್ಞೆ ಮಾಡಿದ್ದಾರೆ. ಅದನ್ನು ಏಕೆ ಮಾಡಿದ್ದಾರೆಂಬುದನ್ನು ಹೇಳಿಲ್ಲ. ಆರೋಗ್ಯ ಇಲಾಖೆಯ ಮಂತ್ರಿಯವರು ಇಡೀ ದಿವಸ ಇವತ್ತು ಇಲ್ಲಿದ್ದರು, ಅದರ ಬಗ್ಗೆ ಏನೂ ಪ್ರಸ್ತಾಪ ಮಾಡಿಲ್ಲ. ಇದುವರೆಗೂ ಅದಕ್ಕೆ ಉತ್ತರವೂ ಕೊಟ್ಟಿಲ್ಲ. ನಾನೇನು ಇಲ್ಲಿ ನಾಮಿನೇಟ್ ಆಗಿ ಬಂದಿಲ್ಲ. ಜನರಿಂದ ಚುನಾಯಿತಳಾಗಿ ಇಲ್ಲಿಗೆ ಬಂದಿದ್ದೇನೆ. ಆದ್ದರಿಂದ ನನ್ನನ್ನು ಅಷ್ಟು ಸಣ್ಣತನದಿಂದ ಕಾಣಬಾರದು. ನಾವೇನು ಇಲ್ಲಿ ಹುಡುಗಾಟಿಕೆ ಮಾಡಲು ಬಂದಿಲ್ಲ. ನಾನು ಇಲ್ಲಿ ಹೇಳಿದ್ದಕ್ಕೆ ಏನೂ ಮನ್ನಣೆ ಇಲ್ಲವೇ? ನಮ್ಮನ್ನು ಸದಸ್ಯರಾಗಿ ಟ್ರೀಟ್ ಮಾಡುವುದಿಲ್ಲವಾದರೆ, ನಾವು ಇಲ್ಲಿ ಏಕೆ ಇರಬೇಕು!

ಶ್ರೀ ಎಚ್. ಎನ್. ನಂಜೇಗೌಡ.—ಅವರು ಮಾತನಾಡಿಲ್ಲ ಎಂದರೆ, ಅವರು ಒಪ್ಪಿಕೊಂಡ ಹಾಗೆ ಆಯಿತು.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ನಿನ್ನೆಯ ದಿವಸ ಒಂದು ನೋಟೀಸ್ ಕಳಿಸಿದ್ದೆ. ಅದರಲ್ಲಿ ಮುಖ್ಯಮಂತ್ರಿಯವರು ಒಂದು ಸ್ಟೇಟ್‌ಮೆಂಟ್ ಮಾಡಬೇಕೆಂದು ಕೇಳಿಕೊಂಡಿದ್ದೆ. ಸಭಾಧ್ಯಕ್ಷರು ಅದನ್ನು ನೋಡುತ್ತೇನೆಂದು ಹೇಳಿದ್ದಾರೆ. ಇವತ್ತು ಮಿನರ್ವ ಮತ್ತು ರಾಜಾ ಮಿಲ್ಲಿನ ಕೆಲಸಗಾರರು ಕೆಲಸ ಇಲ್ಲದೆ ನರಳುತ್ತಿದ್ದಾರೆ. ಇದರ ಬಗ್ಗೆ ಮಾನ್ಯ ಮಂತ್ರಿಯವರು ಒಂದು ಸ್ಟೇಟ್‌ಮೆಂಟಾದರೂ ಮಾಡಿದರೆ, ಕೆಲಸಗಾರರಿಗೆ ಅವರ ಬಗ್ಗೆ ಸ್ವಲ್ಪ ತಿಳುವಳಿಕೆಯಾದರೂ ಆಗುತ್ತದೆ. ಆ ಕೆಲಸಗಾರರ ಬಗ್ಗೆ ಸರ್ಕಾರದವರು ಏನಾದರೂ ಮಾಡಿದ್ದಾರೆಯೇ ಎಂದು ಹೇಳಬೇಕು. ಇಲ್ಲಾ, ಪೋಲೀಸರಿಗೆ ಮತ್ತು ಕಾರ್ಮಿಕರಿಗೆ ಘರ್ಷಣೆ ನಡೆಯಬೇಕೆಂದು ಅವರಿಗೆ ಮನಸ್ಸಿದ್ದರೆ, ಅದೂ ನಡೆಯಲಿ.

ಉಪಾಧ್ಯಕ್ಷರು.—ಏನು ನೋಟೀಸ್ ಕೊಟ್ಟಿದ್ದೀರೆಂದು ನೋಡುತ್ತೇನೆ.

†ಶ್ರೀ ಎಲ್. ಶ್ರೀಕಂಠಯ್ಯ (ನಂಜನಗೂಡು).—ಮಾನ್ಯ ಅಧ್ಯಕ್ಷರೇ, ಇಷ್ಟು ಪ್ರಾಮುಖ್ಯವಾದ ವಿಷಯದ ಮೇಲೆ ಹೆಚ್ಚು ಕಾಲ ಮಾತನಾಡಲು ಅವಕಾಶ ಸಿಗದಿರುವುದಕ್ಕೆ ತುಂಬಾ ಪಶ್ಚಾತ್ತಾಪ ಪಡುತ್ತೇನೆ. ನಾನು ಒಂದು ಧಾಟಿಯಲ್ಲಿ ಮಾತನಾಡುತ್ತಾ ಹೋಗುತ್ತಿರುವಾಗ ಮಧ್ಯದಲ್ಲಿ ನಿಂತುಹೋಯಿತು. ಆದರೂ ಕೆಲವು ವಿಷಯಗಳನ್ನು ಹೇಳುತ್ತೇನೆ.

ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ಕೆಲವು ಸಂಗತಿಗಳನ್ನು ತರುವುದಕ್ಕೆ ಇಷ್ಟಪಡುತ್ತೇನೆ. ಅದು ಸಹ ಈ ವರದಿಯಲ್ಲಿ ಅಡಕವಾಗಿದೆ. ಪುಟ 20, ಕಲಮು (ಸಿ)ಯಲ್ಲಿ "ರಿಕ್ರೂಟ್‌ಮೆಂಟ್ ಬೈ ಕಾಂಪಿಟಿಟಿವ್ ಎಗ್ಸಾಮಿನೇಷನ್" ಎಂದು ಹೀಗೆ ಹೇಳಿದ್ದಾರೆ.

> "As stated at item 9 (a) above, six studentships were advertised by the Commission for the Diploma Course in Forestry at the Indian Forest College, Dehra Dun, and the only candidate who was successful in the competitive examination was selected and recommended to the Government."

These instances clearly prove my allegation that the Government is not prepared to heed the advice of the Commission.

Para (4) page 19

In a departmental enquiry held against a Block Development Officer (the Government, agreeing with the Enquiry Officer, found the accused Government Officer guilty of the five charges levelled against him and proposed to terminate his services by way of punishment. The Commission, after a detailed consideration of the various issues involved in the case, observed that the Enquiry Officer had interpreted the evidence in a manner prejudicial to the delinquent in case where he should have rather given him the benefit of doubt. In several instances the oral evidence seemed to contradict the documentary evidence. Taking all these factors into consideration, the commission found that only 2 out of 5 charges framed against the delinquent were proved and as such they were of the opinion that the proposed termination of his services would be too harsh a punishment. Instead the Commission recommended to the Government that the Block Development Officer be reverted to the next lower grade for a period of two years. However, this advice was not accepted by the Government, who reduced the delinquent to the next lower grade of Social Education Organiser for a period of 5 years.

The officer in question then preferred a review petition to the Governor of Mysore against the punishment imposed by the Government. In this connection. the Government proposed to accept the review petition in......"

This is another instance wherein the Governor is used as a rubber stamp.

ನಮ್ಮ ರಾಜ್ಯಾಂಗದಲ್ಲಿ ರಾಜ್ಯಪಾಲರ ಸ್ಥಾನಮಾನ ಏನೆಂಬುದು ನಮಗೆ ಗೊತ್ತಿದೆ. ಅವರು ತಮ್ಮ ಕಾನ್‌ಸ್ಟಿಟ್ಯೂಶನಲ್ ಅಪ್ಲಿಕೇಶನ್ ಡಿಸ್‌ಚಾರ್ಜ್ ಮಾಡುವಾಗ ಮಿನಿಸ್ಟ್ರಿಯಿಂದ ಏನು ಬರುತ್ತದೋ, ಅದಕ್ಕೆ ಅಪ್ರೂವಲ್ ಕೊಡುತ್ತಿದ್ದಾರೆ. ಈ ಘಟನೆಯನ್ನು ನೋಡುವಾಗ, ಯಾವ ರಾಜ್ಯಪಾಲರ ಸ್ಥಾನಮಾನ ಇದೆಯೋ ಅದನ್ನು ಸರ್ಕಾರದವರು ಕೇವಲ ರಬ್ಬರ್ ಸ್ಟ್ಯಾಂಪ್ ಆಗಿ ಉಪಯೋಗಿಸಿದ್ದಾರೆಂಬುದು ಕಂಡು ಬರುತ್ತದೆ. ಅದನ್ನು ನಾವು ಮೇಲೆ ಹೇಳಿದಂತೆ ಪುಟ 19ರಲ್ಲಿ ಪ್ಯಾರಾ 4 ರಲ್ಲಿ ನೋಡಿದ್ದೇವೆ.

4-30 P. M.

ಒಟ್ಟಿನಲ್ಲಿ ಕತ್ತಲಲ್ಲಿ ರಾಜ್ಯಭಾರ ಸಾಗುತ್ತಿದೆ. ಈಗ ಮುಖ್ಯವಾಗಿ ಇನ್ನೊಂದು ಅಂಶವನ್ನು ಸ್ಪಷ್ಟ ಮಾಡಬೇಕಾಗುತ್ತದೆ, ಸಿವಿರ್ ಸರ್ವೀಸ್ ರೂಲ್ ಬಗ್ಗೆ ಶ್ರೀಮಾನ್ ಸಿದ್ಧವೀರಪ್ಪನವರು ಸ್ಪಷ್ಟವಾಗಿ ಹೇಳಿದ್ದಾರೆ. ಸಿವಿರ್ ಸರ್ವೀಸ್ ಬಗ್ಗೆ ಹೈಕೋರ್ಟಿನಲ್ಲಿ ಎಷ್ಟು ರಿಟ್ ಪಿಟಿಷನ್ ಬಿದ್ದಿವೆ ಎನ್ನುವ ಬಗ್ಗೆ ದಾಕಲಾತಿ ಬೇಕಾಗುತ್ತದೆ. ಅಪಲೇಟ್ ಪಿಟಿಷನ್‌ರ್ ಆಗಿರತಕ್ಕವರು ಅನ್ಯಾಯ ಯಾವ ಯಾವ ರೀತಿಯಲ್ಲಿ ಆಗಿದೆ ಎಂಬುದನ್ನು ಹೇಳಿಕೊಂಡಿದ್ದಾರೆ. ಇದು ಬಹಳ ಸ್ವಾರಸ್ಯವಾಗಿದೆ. ರೆಸ್‌ಪಾಂಡೆಂಟ್—ಗೌರ್ನಮೆಂಟ್ ಇರುವುದರಿಂದ ಒಬ್ಬ ಸಿವಿಲ್ ಸರ್ವಂಟ್ ನನಗೆ ಅನ್ಯಾಯವಾಗಿದೆ ಎಂದು ಕೋರ್ಟಿಗೆ ಹೋದಾಗ ರಿಟ್ ಪಿಟಿಷನ್ ಬಗ್ಗೆ ಕೂಡಲೇ ಸರ್ಕಾರದವರು ಕ್ರಮವನ್ನು ಕೈಗೊಂಡು ಸಕಾಲದಲ್ಲಿ ಕೌಂಟರ್ ಅಫಿಡವಿಟ್ ಸಲ್ಲಿಸಲ್ಪಡದೇ ಇರುವುದರಿಂದ ಹಲವಾರು ಮಂದಿ ಏಕಪಕ್ಷೀಯವಾಗಿ ಕೇಸುಗಳನ್ನು ಗೆದ್ದು ಉನ್ನತ ಅಧಿಕಾರಗಳಿಗೆ ಏರಿದ್ದಾರೆ. ಸರ್ಕಾರದಲ್ಲಿ ಲಾ ಡಿಪಾರ್ಟ್‌ಮೆಂಟ್ ಇದೆಯೇ ಎನ್ನುವ ಸಂಶಯ ಬರುತ್ತದೆ. ಸುಮಾರು ಶೇಕಡಾ 60—70 ರಷ್ಟು ಕೌಂಟರ್ ಅಫಿಡವಿಟ್ ಫೈಲ್ ಆಗುವುದಿಲ್ಲ. ನಾನು ಹೈಕೋರ್ಟಿನಲ್ಲಿ

(ಶ್ರೀ ಎಲ್. ಶ್ರೀಕಂಠಯ್ಯ)

ಇದನ್ನು ವಾಚ್ ಮಾಡುತ್ತಿರುತ್ತೇನೆ. ಯಾವಾಗ ಸರ್ಕಾರದವರು ಕೌಂಟರ್ ಅಫಿಡವಿಟ್ ಹಾಕುವದಿಲ್ಲ, ಆಗ ಕೇಸು ಏಕಪಕ್ಷೀಯವಾಗಿ ತೀರ್ಮಾನವಾಗಿ ಕೇಸನ್ನು ಗೆದ್ದವರು ಉನ್ನತ ಅಧಿಕಾರಗಳಿಗೆ ಹೋಗುತ್ತಾರೆ. ಇಂಥಾ ನಿದರ್ಶನಗಳು ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ಬೇಕಾದಷ್ಟು ಇವೆ. ಏತಕ್ಕೆಂದರೆ ಕೌಂಟರ್ ಅಫಿಡವಿಟ್ ಹಾಕುವುದಕ್ಕೆ ರೆಕ್ರೂಟ್‌ಮೆಂಟ್ ರೂಲ್ಸ್ ಇಲ್ಲ. ಅನೇಕವೇಳೆ ಜೂನಿಯರ್ ಆಗಿರತಕ್ಕ ಆಫೀಸರಿಗೆ ಪ್ರಮೋಷನ್ ಕೊಟ್ಟಿರುತ್ತಾರೆ ಆಗ ಸೀನಿಯರ್ ಆಫೀಸರು ಕೋರ್ಟಿಗೆ ರಿಟ್ ಹಾಕಿದಾಗ ಸರ್ಕಾರದವರು ಕೌಂಟರ್ ಅಫಿಡವಿಟ್ ಫೈಲ್ ಮಾಡುವುದಿಲ್ಲ, ಫೈಲು ಸಿಕ್ಕಲಿಲ್ಲವೆಂತಲೋ ಅಥವಾ ಮತ್ತೆಯಾವುದೋ ಕಾರಣದಿಂದ ಸರ್ಕಾರದವರು ಸುಮ್ಮನೆ ಕುಳಿತುಕೊಂಡಿರುತ್ತಾರೆ. ಆಗ ಜೂನಿಯರ್ ಆಗಿದ್ದು ಪ್ರಮೋಷನ್ ಆಗಿದ್ದ ವ್ಯಕ್ತಿ ಉನ್ನತ ಹುದ್ದೆಯಲ್ಲಿ ಮುಂದುವರಿದುಕೊಂಡು ವರ್ಷಾನುಗಟ್ಟಲೇ ಕಾಲವನ್ನು ಕಳೆಯುತ್ತಿರುತ್ತಾನೆ. ಕೆಲವು ಸಂದರ್ಭದಲ್ಲಿ ರಿಟ್ ಪಿಟಿಷನ್ ಹಾಕಿದ ಮೇಲೆ ಕೋರ್ಟಿನವರು ಸ್ಟೇ ಆರ್ಡರ್ ಕೊಟ್ಟಾಗ ಕೊಡಲೇ ಕೌಂಟರ್ ಅಫಿಡವಿಟ್ ಫೈಲ್ ಮಾಡಿ ಸ್ಟೇ ವೆಕೇಟ್ ಮಾಡಿಸುತ್ತಾರೆ. ಕಾಂಗ್ರೆಸ್ ವಸ್ತು ಪ್ರದರ್ಶನಕ್ಕೆ ಸಂಬಂಧಪಟ್ಟ ಕೇಸಿಗೆ ಸರ್ಕಾರದವರು ಕೊಡಲೇ ಕೌಂಟರ್ ಅಫಿಡಿವಿಟ್ ಫೈಲ್ ಮಾಡಿದರು ಇದರಿಂದ ತಕ್ಷಣ ಸ್ಟೇ ವೆಕೇಟ್ ಆಗಿ ಕೇಸು ಡಿಸ್ಪೈಡ್ ಆಯಿತು, ಯಾವ ಯಾವ ಸಂದರ್ಭದಲ್ಲಿ ಗುಮ್ಮ ಬರುತ್ತದೆ, ಸರ್ಕಾರದ ಸಂಬಂಧ ಫೇವರ್ ಇರುತ್ತದೆ. ಅಂಥಾ ಕಡೆಗಳಲ್ಲಿ ಸರ್ಕಾರದವರು ಬೇಗ ಕೌಂಟರ್ ಅಫಿಡವಿಟ್ ಫೈಲ್ ಮಾಡುತ್ತಾರೆ. ಸ್ಟೇ ವೆಕೇಟ್ ಆಗುತ್ತದೆ. ಕೇಸು ತೀರ್ಮಾನವಾಗುತ್ತದೆ. ಎಲ್ಲಿ ಸರ್ಕಾರದವರಿಗೆ ಇಂಟರೆಷ್ಟು ಇರುವುದಿಲ್ಲ ಅಂಥಾ ಕಡೆ ಸರ್ಕಾರದವರು ಕೌಂಟರ್ ಅಫಿಡವಿಟ್ ಫೈಲ್ ಮಾಡುವುದಿಲ್ಲ. ಸ್ಟೇ ವೆಕೇಟ್ ಆಗುವುದಿಲ್ಲ, ಸಿವಿಲ್ ಸರ್ವೀಸಿನಲ್ಲಿ ಅದಕ್ಷತೆ ತಾಂಡವವಾಡುತ್ತಿದೆ. ಇದಕ್ಕೆ ಕಾರಣವೇನೆಂದರೆ ಪಬ್ಲಿಕ್ ಸರ್ವೀಸ್ ಕಮಿಷನ್ನಿನವರಿಗೂ ಸರ್ಕಾರಕ್ಕೂ ಯಾವ ವಿಧವಾದ ಹೊಂದಾಣಿಕೆ ಇಲ್ಲ. ಅದಕ್ಕೆ ಕಾರಣಗಳು ಈ ವರದಿಯಲ್ಲಿ ಮೊದಲಿನಿಂದ ಕೊನೆಯುವರೆಗೂ ಇವೆ. ಕಗ್ಗತ್ತಲಲ್ಲಿ ಕೊಳೆ ಸೇರಿದ ಹಾಗೆ ಆಗಿದೆ. ಸಿವಿಲ್ ಸರ್ವೀಸಿನಲ್ಲಿಯ ಆಡಳಿತ ನೋಡಿದರೆ ದುರ್ವಾಸನೆ ಬರುತ್ತಿದೆ. ಇನ್ನೂ ಅನೇಕ ಸೀನಿಯಾರಿಟಿ ಲಿಸ್ಟು ಫೈನಲೈಜ್ ಆಗಿಲ್ಲ. ಗ್ರೆಡೇಷನ್ ಲಿಸ್ಟು ಫೈನಲೈಜ್ ಆಗಿಲ್ಲ. ಇಂಟಿಗ್ರೇಷನ್ ಆಗಿ 14 ವರ್ಷಗಳಾದುವು. ಇನ್ನೂ ಸೀನಿಯಾರಿಟಿ ಲಿಸ್ಟು ಪ್ರಿಪೇರ್ ಮಾಡಿಲ್ಲ, ಗ್ರೆಡೇಷನ್ ಲಿಸ್ಟು ತಯಾರು ಮಾಡಿಲ್ಲ. ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಇಲ್ಲದೆ ರಾಜ್ಯ ಸರ್ಕಾರ ಸಿವಿಲ್ ಸರ್ವೀಸ್ ಏತಕ್ಕೆ ಇಟ್ಟು ಕೊಳ್ಳಬೇಕು. ಮಾನ್ಯ ಮುಖ್ಯ ಮಂತ್ರಿಗಳು 3 ಸಾವಿರ ಜನ ಲೋಕಲ್ ಕ್ಯಾಂಡಿಡೇಟ್ಸ್ ಇದ್ದಾರೆ ಎಂದು ಹೇಳಿದರು. ರೆಕ್ರೂಟ್‌ಮೆಂಟ್ ರೂಲ್ಸ್ ಇಲ್ಲದೆ ಇರುವಾಗ ಅಡ್‌ಹಾಕ್ ಬೇಸಿಸ್ ಮೇಲೆ ತಮಗೆ ಯಾರು ಯಾರು ಬೇಕೋ ಅವರನ್ನು ತುಂಬಿಕೊಂಡಿದ್ದಾರೆ. ಇದರಿಂದ ಆಡಳಿತದಲ್ಲಿ ಅದಕ್ಷತೆ ತಾಂಡವವಾಡುತ್ತಿದೆ. ಯಾವ ನೀತಿ ನಿಯಮವೂ ಇಲ್ಲದೆ ಲೋಕಲ್ ಕ್ಯಾಂಡಿಡೇಟ್‌ಗಳನ್ನು ತೆಗೆದುಕೊಳ್ಳುವುದರಿಂದ ವೆಸ್ಟೆಡ್ ಇಂಟರೆಸ್ಟು ಕ್ರಿಯೇಟಾಗುತ್ತದೆ. ಶ್ರೀಮಾನ್ ವಾಟಾಳ್ ನಾಗರಾಜ್ ಅವರು ಹೇಳಿದ ಹಾಗೆ ಈಗ ಲೋಕಲ್ ಕ್ಯಾಂಡಿಡೇಟ್‌ಗಳನ್ನು ಸರ್ಕಾರದವರು ಏನು ಕೆಲಸಕ್ಕೆ ತೆಗೆದುಕೊಂಡಿದ್ದಾರೆ ಅವರಿಗೆ 5, 6, 8, ವರ್ಷಗಳ ಸರ್ವೀಸ್ ಆಗಿದೆ. ಮದುವೆ ಆಗಿದೆ, ಕೆಲವರಿಗೆ ಮಕ್ಕಳೂ ಕೂಡ ಆಗಿವೆ. ಅಂಥವರನ್ನು ಕೆಲಸದಿಂದ ತೆಗೆದರೆ ಅವರಿಗೆ ಮತ್ತೆ ಕೆಲಸ ಸಿಕ್ಕುತ್ತದೆಯೇ? ಆದ್ದರಿಂದ ಅಂಥವರನ್ನು ಕೆಲಸದಿಂದ ತೆಗೆಯುವುದಕ್ಕೆ ಆಗುವುದಿಲ್ಲ. ಸರ್ಕಾರದವರು ಅದಕ್ಷರಾದ ಲೋಕಲ್ ಕ್ಯಾಂಡಿಡೇಟ್‌ಗಳನ್ನು ಕೆಲಸಕ್ಕೆ ತೆಗೆದುಕೊಂಡು ಅವರಿಗೆ ಗೆಜಿಟೆಟ್ ರ್‍ಯಾಂಕಿಗೆ ಪ್ರಮೋಷನ್ ಕೊಟ್ಟು ಮುಂದೆ ಸರ್ಕಾರದವರು ಕೆಟ್ಟ ಹೆಸರನ್ನು ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಈ ಬಗ್ಗೆ ಸರ್ಕಾರದವರು ಯೋಚನೆ ಮಾಡಬೇಕು. ನಾವು ಹೇಳುವುದು ನಮ್ಮ ಕರ್ತವ್ಯ. ಇದನ್ನು ಸರ್ಕಾರದವರು ಕೇಳಿದರೆ ಕೇಳಲಿ, ಬಿಟ್ಟರೆ ಬಿಡಲಿ.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ ತಾವು ಹೇಳತಕ್ಕದ್ದನ್ನು ಕೇಳುವುದಕ್ಕೆ ಯಾವ ಮಂತ್ರಿಗಳೂ ಇಲ್ಲ. ಸುಮ್ಮನೆ ಕಂಠಶೋಷಣೆ ಮಾಡಿಕೊಂಡಿ ಮಾತನಾಡಿದರೆ ಏನು ಪ್ರಯೋಜನ !

ಉಪಾಧ್ಯಕ್ಷರು.—ಈ ಚರ್ಚೆ ಐದೂವರೆ ಗಂಟೆಗೆ ಮುಗಿಯಬೇಕಾಗಿದೆ.. ಇನ್ನೂ 9 ಜನ ಮಾತನಾಡುವವರು ಇದ್ದಾರೆ. ಆದ್ದರಿಂದ ತಾವು ಜಾಗ್ರತೆ ಮುಗಿಸಿ.

ಶ್ರೀ ಎಲ್. ಶ್ರೀಕಂಠಯ್ಯ.—ನಾನು ಯಾರಿಗೆ ಹೇಳಲಿ ?

Mr. DEPUTY SPEAKER,—The Minister of State is there. He is taking down notes. The concerned Minister will reply at the end.

ಶ್ರೀ ಕೆ. ಎನ್. ವೀರಪ್ಪಗೌಡ.—ಎಲ್ಲರೂ 10 ನಿಮಿಷ ಕಾಲ ಇದರ ಬಗ್ಗೆ ಮಾತನಾಡ ಬೇಕೆಂದು ತೀರ್ಮಾನವಾಗಿತ್ತು. ಆದ್ದರಿಂದ ನಮಗೂ ಸಹ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಉಪಾಧ್ಯಕ್ಷರು.—ಈಗ ಮುಗಿಸಿಬಿಡುತ್ತಾರೆ.

ಶ್ರೀ ಎಲ್. ಶ್ರೀಕಂಠಯ್ಯ.—ಕೊನೆಯದಾಗಿ ಒಂದು ವಿಷಯವನ್ನು ಹೇಳುತ್ತೇನೆ. ಸರ್ಕಾರ ದವರು ಆಡಳಿತವನ್ನು ಯಾವ ರೀತಿ ನಡೆಸುತ್ತಿದ್ದಾರೆಂಬುದು ಸಾರ್ವಜನಿಕರಿಗೆ ಬಹಳ ಕಾಲ ದಿಂದಲೂ ಕೂಡ ಸರಿಯಾಗಿ ಗೊತ್ತಿಲ್ಲ. ಇದು ಅನುಭವದ ಮಾತು. ಹರಿಜನರಿಗೆ ರಾಜ್ಯಾಂಗ ದತ್ತವಾಗಿ ಶೇಕಡ ಇಷ್ಟು ಹುದ್ದೆಗಳನ್ನು ಕೊಡಬೇಕೆಂದು ನಿಯಮ ಮಾಡಿದ್ದಾರೆ. ಅದನ್ನು ಸರ್ಕಾರದವರು ಎಷ್ಟರಮಟ್ಟಿಗೆ ಅನುಷ್ಠಾನದಲ್ಲಿ ತರುತ್ತಿದ್ದಾರೆಂಬ ವಿಷಯಕ್ಕೆ ನಾನು ಹೋಗುವು ದಿಲ್ಲ. ಇದೇ ವಿಷಯದ ಬಗ್ಗೆ ಈ ಸಮಯದಲ್ಲಿ ನಾನು ಏನಾದರೂ ಹೇಳಿದರೆ ಅಲ್ಪಸಂಖ್ಯಾತರ ಪರವಾಗಿ ಮಾತನಾಡುತ್ತಿದ್ದೇನೆಂದು ಯಾರೂ ತಿಳಿದುಕೊಳ್ಳಬಾರದು. ಹರಿಜನರು ಎಷ್ಟು ಹಿಂದುಳಿದಿದ್ದಾರೋ ಅದರಂತೆ ಮುಸಲ್ಮಾನರು, ಭೌದ್ಧರು, ಜೈನರು ಮತ್ತು ಹಿಂದುಗಳು ಕೂಡ ಹಿಂದುಳಿದ ಪಂಗಡಕ್ಕೆ ಸೇರುತ್ತಾರೆ. ಆದರೆ ಇವರಿಗೆ ಯಾವ ರಕ್ಷಣೆಯೂ ಸಿಗುತ್ತಿಲ್ಲ. ಆರ್ಥಿಕ ವಾಗಿ ಯಾರು ಹಿಂದುಳಿದಿದ್ದಾರೋ ಅಂಥವರಿಗೆ ಮಾತ್ರ ಕೆಲವೊಂದು ಸೌಲಭ್ಯಗಳು ಸಿಗುತ್ತಿವೆ. ವಾಸ್ತವವಾಗಿ ನೋಡುವದಾದರೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ರೈತರು ಚೆನ್ನಾಗಿ ಅನುಕೂಲ ಸ್ಥಿತಿಯಲ್ಲಿ ಇದ್ದಾರೆ. ನೂರಾರು ಪಲ್ಲ ರಾಗಿ, ಜೋಳ ಬತ್ತವನ್ನು ಬೆಳೆಯುತ್ತಾರೆ, ಆದರೆ ಇವರ ಮಕ್ಕಳು ಸಾಂಸ್ಕೃತಿಕ ದೃಷ್ಟಿಯಿಂದ ಬಹಳ ಹಿಂದುಳಿದಿದ್ದಾರೆ. ಇಂತಹವರು ಪಟ್ಟಣಕ್ಕೆ ಬಂದು ಕಾಲೇಜ್‌ನಲ್ಲಿ ಓದುವುದಕ್ಕೆ ತಮ್ಮ ಹಕ್ಕಿನ ಸೀಟ್ ಕೇಳಿದರೆ ವಾರ್ಷಿಕ ಆದಾಯ 3,600 ರೂಪಾಯಿಗಳಿಗಿಂತ ಜಾಸ್ತಿ ಇರುವುದರಿಂದ ರಿಜರ್ವೇಷನ್ ಸೀಟ್ ಕೊಡುವುದಕ್ಕಾಗುವು ದಿಲ್ಲವೆಂದು ಹೇಳುತ್ತಾರೆ. ಅಂದರೆ ಇವೊತ್ತು ಯಾರಿಗೆ ವಾರ್ಷಿಕವಾಗಿ 3,600 ರೂಪಾಯಿಗಳ ಆದಾಯವಿದೆಯೋ ಅಂತಹವರ ಮಕ್ಕಳಿಗೆ ವಿಶ್ವವಿದ್ಯಾನಿಲಯದಲ್ಲಿ ಸೀಟ್ ಸಿಗುವುದಿಲ್ಲ, ಸರ್ಕಾರಿ ಹುದ್ದೆಗಳು ಸಿಗುವುದಿಲ್ಲ. ಅಂತಹ ಒಂದು ಪರಿಸ್ಥಿತಿ ಬಂದಿದೆ.

ಶ್ರೀ ಟಿ. ಆರ್. ಶಾಮಣ್ಣ.—ನಮಗೂ ಕೂಡ ಮಾತನಾಡುವುದಕ್ಕೆ ಅವಕಾಶ ಕೊಡು ತ್ತೀರೋ ಅಥವಾ ಐದೂವರೆಗಂಟೆಯವರೆಗೆ ಒಬ್ಬರೇ ಮಾತನಾಡುವುದಕ್ಕೆ ಅವಕಾಶ ಕೊಡು ತ್ತೀರೋ ?

ಉಪಾಧ್ಯಕ್ಷರು.—ಇನ್ನೂ ಮಾತನಾಡತಕ್ಕಂಥ ಸದಸ್ಯರು 9 ಜನ ಇರುವುದರಿಂದ ಮಾನ್ಯ ಶ್ರೀಕಂಠಯ್ಯನವರು ಬೇಗನೇ ಅವರ ಭಾಷಣವನ್ನು ಮುಗಿಸಬೇಕು.

ಶ್ರೀ ಎಲ್. ಶ್ರೀಕಂಠಯ್ಯ.—ಬಹಳ ಮುಖ್ಯವಾದಂಥ ವಿಷಯಗಳ ಬಗ್ಗೆ ಹೇಳುವುದಿತ್ತು ಕಾಲವಕಾಶ ಇಲ್ಲ ಎಂದರೆ ಇಲ್ಲಿಗೇ ಮುಗಿಸಿಬಿಡುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಮಾನ್ಯ, ಉಪಾಧ್ಯಕ್ಷರೇ, ಇದುವರೆಗೆ ಈ ವರದಿಯ ಬಗ್ಗೆ ಮಾನ್ಯ ಸಿದ್ಧವೀರಪ್ಪನವರು ಮತ್ತು ಮಾನ್ಯ ಶ್ರೀಕಂಠಯ್ಯನವರು ಮಾತನಾಡಿದ್ದಾರೆ. ಇವರು ಬಹಳ ಬಗ್ಗೆ ಅರಿತು ನುರಿತವರಾಗಿದ್ದಾರೆ. ಇವರ ವಿದ್ವತ್ ಬಗ್ಗೆ ನನಗೆ ಅಪಾರ ಗೌರವವಿದೆ. ಎಲ್ಲವನ್ನೂ ತಿಳಿದಿರತಕ್ಕಂಥ ವ್ಯಕ್ತಿಗಳಾಗಿದ್ದಾರೆ. ಆದರೆ ಇವರು ನಮಗೂ ಕೂಡ ಮಾತನಾಡುವುದಕ್ಕೆ ಸ್ವಲ್ಪ ಅವಕಾಶ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳು ತ್ತಿದ್ದೇನೆ. ಸರ್ಕಾರದ ಆಡಳಿತ ಚೆನ್ನಾಗಿ ನಡೆಯುವುದಕ್ಕೆ ಅರ್ಹತೆ ಉಳ್ಳವಂತಹವರನ್ನು ಆರಿಸುವುದಕ್ಕಾಗಿ ಈ ಪಬ್ಲಿಕ್ ಸರ್ವಿಸ್ ಕಮಿಷನ್ ಏರ್ಪಾಡಾಗಿದೆ. ಈಗ ನಮ್ಮ ಮುಂದೆ ಇರತಕ್ಕಂಥ 1966-67 ನೇ ಪಬ್ಲಿಕ್ ಸರ್ವಿಸ್ ಕಮಿಷನ್ ರಿಪೋರ್ಟಿನಲ್ಲಿ ಅನೇಕ ನ್ಯೂನತೆಗಳನ್ನು ತೋರಿಸಿದ್ದಾರೆ. ಸರ್ಕಾರದವರು ಅನೇಕ ಸಂದರ್ಭಗಳಲ್ಲಿ ಕ್ರಮ ಬದ್ಧವಲ್ಲದ ಪ್ರಮೋಷನ್ ಕೊಟ್ಟಿದ್ದಾರೆ, ಪಬ್ಲಿಕ್ ಸರ್ವಿಸ್ ಕಮಿಷನ್ ಅವರು ಶಿಫಾರಸ್ ಮಾಡಿದ್ದನ್ನು ಒಪ್ಪಿಕೊಂಡಿಲ್ಲ, ತಪ್ಪು ಮಾಡಿದವರ ಬಗ್ಗೆ ಡಿಸಿಪ್ಲಿನರಿ ಆಕ್ಷನ್ ತೆಗೆದುಕೊಂಡಿಲ್ಲ, ಸೆಲೆಕ್ಷನ್ ಮಾಡುವುದರಲ್ಲಿ ಸರಿಯಾದಂಥ ಕ್ರಮಬದ್ಧತೆಯನ್ನು ಅನುಸರಿಸಿಲ್ಲ, ಎಲಿಜಿಬಿಲಿಟಿ ಲಿಸ್ಟನ್ನು ಪಬ್ಲಿಷ್ ಮಾಡಿಲ್ಲ, ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸನ್ನು ತಯಾರು ಮಾಡಿಲ್ಲ, ಅನೇಕ ಸಂದರ್ಭಗಳಲ್ಲಿ ರೀ—ಎಂಪ್ಲಾಯ್‌ಮೆಂಟ್ ಮಾಡುವಾಗ ಮತ್ತು ಸರ್ವಿಸ್ ಕಂಟಿನ್ಯೂ ಮಾಡುವಾಗ ಅನೇಕ ನ್ಯೂನತೆಗಳಿವೆ ಎಂಬುದನ್ನು ಇದುವರೆಗೆ ಮಾತನಾಡಿದಂಥ ಸದಸ್ಯರು ಎತ್ತಿ ತೋರಿಸಿದ್ದಾರೆ. ಇಂತಹ ಅನೇಕ ನ್ಯೂನತೆಗಳನ್ನು ಹಿಂದೆ ಅನೇಕ ಸಲ ಎತ್ತಿ ತೋರಿಸಿದ್ದರೂ ಕೂಡ ಅದನ್ನು ಸರ್ಕಾರದವರು ತಿದ್ದಿಕೊಳ್ಳುವುದಕ್ಕೆ ಹೋಗದೆ ತಮಗೆ ಇಷ್ಟ ಬಂದಂತೆ ನಡೆದುಕೊಳ್ಳುತ್ತಿರುವುದು

(ಶ್ರೀ ಟಿ. ಆರ್. ಶಾಮಣ್ಣ)

ನ್ಯಾಯವಾದುದು ಅಲ್ಲ. ಸಾಮಾನ್ಯವಾಗಿ ನಮ್ಮ ದೇಶದ ಆರ್ಥಿಕ ಪರಿಸ್ಥಿತಿ ಕೆಡಲು ಕಾರಣ ವೇನೆಂದರೆ, ಮಿತಿ ಇಲ್ಲದೆ ಬೆಳೆಯುತ್ತಿರತಕ್ಕಂಥ ಅಧಿಕಾರಿಗಳವರ್ಗ ಮತ್ತು ಇವರ ಸಂಬಳಸಾರಿಗೆಗೆ ಆಗುತ್ತಿರುವ ಖರ್ಚುಗಳು. ಎರಡನೆಯದಾಗಿ ಪಬ್ಲಿಕ್‌ನಿಂದ ಎತ್ತಿರತಕ್ಕಂಥ ಸಾಲಕ್ಕೆ ಕೊಡುತ್ತಿರುವ ಬಡ್ಡಿ ಮತ್ತು ದೇಶದಲ್ಲಿ ಬೆಳೆಯುತ್ತಿರುವ ನೆಪೋಟಿಸಮ್; ಫೇವರಿಟೀಸಮ್ ಮತ್ತು ಕರಪ್ಷನ್ ಜೊತೆಗೆ ಕಂಟ್ರಾಕ್ಟರುಗಳ ಪ್ರಭಾವ ಬೇರೆ ಇರುತ್ತದೆ. ಈ ಕಾರಣ ಗಳಿಂದಾಗಿ ನಮ್ಮ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ತೆಗೆದುಕೊಳ್ಳುವುದಕ್ಕೆ ಸಾಕಾದಷ್ಟು ಅವಕಾಶ ಸಿಗುತ್ತಿಲ್ಲ. ಈ ಸರಕಾರದಲ್ಲಿ ಕೆಲಸ ಮಾಡುತ್ತಿರುವ ಆಫೀಸರುಗಳು ಅದರಲ್ಲೂ ಕೆಳ ದರ್ಜೆಯ ನೌಕರರುಗಳ ವಿಚಾರವಾಗಿ ಹೇಳುವುದಾದರೆ ಅವರನ್ನು ತೃಪ್ತಿಯಿಂದ ಇಡಬೇಕಾದುದು ನಮ್ಮ ಮುಖ್ಯ ಕರ್ತವ್ಯ. ಅವರಿಗೆ ಕೊಡುವ ಸಂಬಳಸಾರಿಗೆಗಳನ್ನು ತೃಪ್ತಿಕರವಾಗಿ ಕೊಡಬೇ ಕಾದುದು ಸರಕಾರದ ಕರ್ತವ್ಯ. ಅದೇ ರೀತಿ ಸರಕಾರದಿಂದ ಎಷ್ಟುಮಟ್ಟಿಗೆ ಸಂಬಳವನ್ನು ಪಡೆಯುತ್ತಿರುವ ಅಧಿಕಾರಿಗಳು ಹಾಗೂ ನೌಕರರುಗಳು ಸರಕಾರದಲ್ಲಿ ಮಾಡುವ ಕೆಲಸಗಳನ್ನು ಸಾಕಾದಷ್ಟು ಕರ್ತವ್ಯ ಶ್ರದ್ಧೆಯಿಂದ ಮಾಡಬೇಕು. ಇದು ಅವರು ತೆಗೆದುಕೊಳ್ಳುತ್ತಿರುವ ಸಂಬಳ ಸಾರಿಗೆಗಳ ಪ್ರತಿಫಲವಾಗಿ ಮಾಡಬೇಕಾದದು ಅವಶ್ಯಕ. ಯಾರಿಗೆ ಗಾಡ್ ಫಾದರುಗಳ ಬೆಂಬಲ ಇರುತ್ತದೋ ಅಂತವರಿಗೆ ಪ್ರಮೋಷನ್ ಬೇಗ ಸಿಗುತ್ತದೆ. ಯಾರಿಗೆ ಇಂತಹ ಬೆಂಬಲ ಇಲ್ಲವೋ ಅಂತವರಿಗೇನೂ ಸಿಗುವುದಿಲ್ಲ. ಯಾರಿಗೆ ಸರಕಾರದ ಬೆಂಬಲ ಇರುತ್ತದೋ ಅಂತವರಿಗೆ ಬೇಕಾದ ಬಡತಿಗಳು ಸಿಗುತ್ತವೆ. ಗಾಡ್ ಫಾದರ್‌ಗಳ ಬೆಂಬಲ ಕೆಲವರಿಗೆ ಸುಲಭವಾಗಿ ಸಿಗಬಹುದು. ಎಲ್ಲರಿಗೂ ಸಿಗುವುದು ಕಷ್ಟ. ಬೆಂಗಳೂರಿನಲ್ಲೇ ಎಷ್ಟೋ ಜನರು ಕೆಲಸ ಮಾಡುತ್ತಾ ಒಂದೇ ಸ್ಥಳ ದಲ್ಲಿ ತಮ್ಮ ಸ್ಥಾನ ಮಾನಗಳನ್ನುಳಿಸಿಕೊಳ್ಳುವುದಕ್ಕಾಗಿ ಹೆಚ್ಚು ಪ್ರಭಾವವನ್ನುಪಯೋಗಿಸಿಕೊಂಡು ಒಂದೆ ಕಡೆಯಿರುವುದರಿಂದಾಗಿ ಅನೇಕ ದೂರುಗಳು ಇಲ್ಲಿ ಕೇಳಿ ಬರುತ್ತಿವೆ. ಇದಕ್ಕೆ ಕಾರಣ ಸರಕಾರ ಕೂಡ ಪ್ರಭಾವಕ್ಕೆ ಒಳಗಾಗಿ ತಮಗೆ ಬೇಕಾದವರಿಗೆ ಬೇಕಾದ ಸ್ಥಾನಗಳನ್ನು ಕೊಡುವು ದಕ್ಕೆ ಎಂದು ಕೆಲವು ಕಡೆ ಉದ್ಯೋಗಗಳನ್ನು ಸೃಷ್ಟಿ ಮಾಡಿ ಇವನ್ನು ಸೆಲೆಕ್ಷನ್ ಪೋಸ್ಟುಗಳೆಂದು ಹೇಳಿ ಅಲ್ಲಿ ತಮಗೆ ಬೇಕಾದವರನ್ನು ನೇಮಕ ಮಾಡಿಕೊಳ್ಳುತ್ತಾರೆ. ಪೋಸ್ಟು ಅನಾವಶ್ಯಕವಾಗಿ ದರೂ ಅಂತಹ ಕಡೆಗಳಲ್ಲಿ ಹೊಸಹುದ್ದೆಗಳನ್ನು ಸೃಷ್ಟಿ ಮಾಡುತ್ತಾರೆ ಇದರಿಂದ ತಮಗೆ ಬೇಕಾದ ಅಧಿಕಾರಿಗಳನ್ನು ಹಾಗೂ ಅವರ ಬಂಧುಬಳಗದವರನ್ನು ಅಲ್ಲಿಗೆ ನೇಮಕ ಮಾಡುತ್ತಾರೆ. ಸರಕಾರದ ಆಡಳಿತ ಯಂತ್ರ ಚೆನ್ನಾಗಿ ಕೆಲಸ ಮಾಡಬೇಕಾದರೆ ಇಲ್ಲಿ ಕೆಲಸ ಮಾಡುವ ಅಧಿಕಾರಿ ಗಳು ಯಾವ ಪ್ರಭಾವಕ್ಕೂ ಒಳಗಾಗದೆ ಕೆಲಸ ಮಾಡಬೇಕು. ಆದರೆ ಇಂದು ಸರಕಾರದಲ್ಲಿ ಅಲ್ಲಲ್ಲಿ ಕೆಲಸಗಳು ಸರಿಯಾಗಿ ನಡೆಯುತ್ತಿಲ್ಲ ಎನ್ನುವ ದೂರುಗಳು ಬರುತ್ತಿವೆ. ಈ ಸಂದರ್ಭದಲ್ಲಿ ಇಲ್ಲಿ ಒಂದು ವಿಚಾರ ಹೇಳಿದರೆ ಅದನ್ನು ನಮ್ಮ ಮಾನ್ಯ ಸದಸ್ಯರು ತಪ್ಪು ತಿಳಿದುಕೊಳ್ಳಲಾರದು ಎಂದು ಭಾವಿಸುತ್ತೇನೆ. ಸರಕಾರದವರು ಎಷ್ಟುಮಟ್ಟಿಗೆ ಅಕ್ರಮವಾಗಿ ಅಪಾಯಿಂಟುಮೆಂಟುಗಳನ್ನು ಹಾಗೂ ಟ್ರಾನ್ಸ್‌ಫರುಗಳನ್ನು ಮಾಡುತ್ತಾರೋ ಅದಕ್ಕೆ ಸ್ವಲ್ಪಮಟ್ಟಿಗೆ ಎಂ ಎಲ್. ಎ. ಗಳ ಹಾಗೂ ಎಂ. ಎಲ್. ಸಿ. ಗಳೂ ಕಾರಣರು ಎಂದು ಹೇಳಬಹುದು. ಕೆಲವರು ಎಂ. ಎಲ್. ಎ. ಗಳ ಹಾಗೂ ಎಂ. ಎಲ್. ಸಿ. ಗಳನ್ನು ಒಂದು ವೆಪನ್ ತರಹ ಮಾಡಿಕೊಂಡು ಸರಕಾರದಲ್ಲಿ ಅನೇಕರು ಇವರ ಮೂಲಕ ತಮ್ಮ ಕೆಲಸಗಳನ್ನು ಮಾಡಿಕೊಳ್ಳುತ್ತಾರೆ. ಆದರೆ ಸರಕಾರ ತಪ್ಪುಗಳನ್ನು ಏನಾದರೂ ಮಾಡಿದ್ದರೆ ಅದನ್ನು ಇವರ ಮೂಲಕ ಸರಕಾರದ ಗಮನಕ್ಕೆ ತಂದು ಸರಿ ಮಾಡಬಹುದು ಆದರೆ ತಮ್ಮ ಸ್ವಾರ್ಥಕ್ಕೆ ಇವರನ್ನುಪಯೋಗಿಸಿಕೊಂಡು ಸರಕಾರದಲ್ಲಿ ಕೆಲಸ ಮಾಡಲು ಹೊರಟರೆ ಇದು ಸರಿಯಾಗುವದಿಲ್ಲ. ಇವರ ಸಹಾಯವನ್ನು ಬಳಸಿಕೊಂಡು ಅನೇಕರು ಹೆಚ್ಚಿನ ಸೌಲಭ್ಯ ಗಳನ್ನು ಪಡೆಯುತ್ತಿದ್ದಾರೆಂದು ಹೇಳಿದರೆ ಅದು ತಪ್ಪಾಗಲಾರದು. ಸರಕಾರ ಎಲ್ಲಿ ಅನ್ಯಾಯ ಹಾಗೂ ಅಕ್ರಮಗಳನ್ನು ಮಾಡುತ್ತದೋ ಅದನ್ನು ಸರಿಮಾಡಲು ತಕ್ಕ ಎಚ್ಚರಿಕೆ ಕೊಡಬೇಕು. ಆದರೆ ಇದರಲ್ಲಿ ಸ್ವಲ್ಪ ಜನ ಖದೀಮರು ಇದ್ದಾರೆ, ಇವರೂ ಕೂಡ ಇದರಲ್ಲಿ ಭಾಗಿಗಳು ಎಂದು ಹೇಳಿದರೆ ಅದು ತಪ್ಪಾಗಲಾರದು. ನಾವು ಯಾವಾಗಲೂ ಒಂದು ದೇಶಕ್ಕೆ ಮಾದರಿಯಾಗಿರಬೇಕು ಎಲ್ಲಿ ಅನ್ಯಾಯಗಳು ಆಗುತ್ತವೋ ಅವನ್ನು ಸರಕಾರಕ್ಕೆ ಎತ್ತಿ ತೋರಿಸಬೇಕು ಮತ್ತು ಎಲ್ಲಿ ಅನಾವಶ್ಯಕವಾಗಿ ಸರಕಾರ ಖರ್ಚುಮಾಡುತ್ತದೊ ಅದನ್ನು ಸರಕಾರಕ್ಕೆ ಎತ್ತಿ ತೋರಿಸಬೇಕು ಮತ್ತು ಇಂತಹ ಖರ್ಚುಗಳನ್ನು ಮಾಡುವುದು ಸಾಧುವಲ್ಲ ಎಂದು ಎಚ್ಚರಿಕೆ ಕೊಡಬೇಕು.

ಇನ್ನು ಬೆಂಗಳೂರು ನಗರದ ಕಾರ್ಪೊರೇಷನ್‌ನಲ್ಲಿ ಎಂಪ್ಲಾಯಿಮೆಂಟು ವಿಚಾರಗಳನ್ನು ತೆಗೆದುಕೊಂಡರೆ ಇಲ್ಲಿ ಲಂಚ ಎನ್ನುವುದು ಬಹಳ ಹೆಚ್ಚಾಗಿದೆ. ಇಲ್ಲಿರುವ ಮೂರು ನಾಲ್ಕು ಸಬ್

ಓವರ್‌ಸೀರುಗಳು ಹಾಗೂ ಅಸಿಸ್ಟೆಂಟು ಇಂಜಿನಿಯರುಗಳು ಹತ್ತು ಇಪ್ಪತ್ತು ಸಾವಿರ ರೂಪಾಯಿಗಳಷ್ಟು ಸಂಪಾದನೆ ಮಾಡಿಕೊಂಡು ತಮಗೆ ಬೇಕಾದ ಎಂ. ಎಲ್. ಎ. ಗಳಿಂದ ತಮ್ಮ ಕೆಲಸಗಳನ್ನು ಸುಲಭವಾಗಿ ಮಾಡಿಸಿಕೊಂಡು ಹೋಗುತ್ತಿರುತ್ತಾರೆ. ಒಂದೇ ಕಡೆಯಲ್ಲಿ ಮೂರು ವರ್ಷಗಳ ಮೇಲೆ ಅಧಿಕಾರಿಗಳನ್ನು ಇಡಬಾರದು, ಇವರನ್ನು ವರ್ಗ ಮಾಡಬೇಕೆಂದು ನಿಯಮ ಇದ್ದರೂ, ಇವರನ್ನು ಬೇರೆ ಊರಿಗೆ ಟ್ರಾನ್ಸ್‌ಫರು ಮಾಡಿದಾಗ ಇವರು ಹೇಗಾದರೂ ಬೆಂಗಳೂರಿನಲ್ಲೇ ಉಳಿಯಬೇಕೆಂದು ಪ್ರಭಾವ ಉಪಯೋಗಿಸಿಕೊಂಡು ವರ್ಗವನ್ನು ಕ್ಯಾನ್ಸಲ್ ಮಾಡಿಸಿಕೊಳ್ಳುತ್ತಾರೆ. ಸಾಧ್ಯವಾದಷ್ಟು ಅನ್ಯಾಯಗಳಾಗದೇ ಇರುವ ರೀತಿ ಅಧಿಕಾರಿಗಳಿಗೆ ಸರಕಾರ ಸಹಾಯ ಮಾಡಬೇಕೇ ಹೊರತು, ಇತರರ ಒಂದು ಸ್ಥಾನಮಾನದ ಪ್ರಭಾವಕ್ಕೆ ಒಳಗಾಗಿ ಸರಕಾರದ ಕೆಲಸಗಳನ್ನು ಮಾಡುವುದರಿಂದ ಸರಕಾರಕ್ಕೆ ಗೌರವ ಬರುವುದಿಲ್ಲ. ಯಾರ ಪ್ರಭಾವಕ್ಕೂ ಒಳಗಾಗದೆ ಸರಕಾರದವರು ನ್ಯಾಯವಾದ ಕೆಲಸಗಳನ್ನು ಮಾಡಲು ಹಿಂದೆ ಹೋಗಬಾರದು. ಇಂತಹ ಪ್ರಭಾವಗಳನ್ನೂ ಆದಷ್ಟೂ ತಡೆಗಟ್ಟಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಪಬ್ಲಿಕ್ ಸರ್ವಿಸ್ ಕಮಿಷನ್‌ನವರು ಅನೇಕ ಸಂದರ್ಭಗಳಲ್ಲಿ ಪರೀಕ್ಷೆಗಳನ್ನು ನಡೆಸುತ್ತಾರೆ ಮತ್ತು ಇದಕ್ಕಾಗಿ ಫೀಸನ್ನು ಕೂಡ ವಸೂಲು ಮಾಡುತ್ತಾರೆ. ಇದರಿಂದ ಸರಕಾರಕ್ಕೆ ಲಕ್ಷಾಂತರ ರೂಪಾಯಿಗಳು ಬರುತ್ತದೆ. ಆದರೆ ಕೆಲವು ಪರೀಕ್ಷೆಗಳನ್ನು ಮಾಡಿ ಎಷ್ಟೋ ದಿನಗಳಾದರೂ ಇದರ ರಿಸಲ್ಟೇ ಇನ್ನೂ ಬರಲಿಲ್ಲ. ಒಂದು ಕಡೆ ಸರಿಯಾಗಿ ಕೆಲಸ ಮಾಡಬೇಕೆಂದು ಹೇಳಿ ಇಂತಹ ಪರೀಕ್ಷೆಗಳನ್ನೂ ಮಾಡಿದರೂ ಇದರ ರಿಸಲ್ಟೇ ಬಾರದೇ ಹೋದರೆ ಜನರಿಗೆ ತೊಂದರೆಯಾಗುತ್ತದೆ. ಇದರ ಬಗ್ಗೆ ಸರಿಯಾದ ಕ್ರಮ ತೆಗೆದುಕೊಳ್ಳಬೇಕು. ಇದರಿಂದಾಗಿ ಪರೀಕ್ಷೆಗೆ ಕುಳಿತ ಅನೇಕ ನೌಕರರುಗಳು ಬಹಳ ತೊಂದರೆಪಡುತ್ತಿದ್ದಾರೆ. ಇದರ ಬಗ್ಗೆ ಸಾಕಾದಷ್ಟು ಸೂಚನೆಗಳನ್ನು ಸರಕಾರ ಏಕೆ ಕೊಡುತ್ತಿಲ್ಲ ಎಂದು ಕೇಳಬೇಕಾಗಿದೆ. ಮುಖ್ಯವಾಗಿ ನಾನು ಹೇಳುವುದು ಇಲ್ಲಿ ಒಂದು ವಿಚಾರ. ನಮ್ಮ ದೇಶದಲ್ಲಿರುವ ನೌಕರರುಗಳಲ್ಲಿ ಅತೃಪ್ತಿ ಎನ್ನುವುದು ದಿನೇ ದಿನೇ ಹೆಚ್ಚಾಗುತ್ತಿದೆ. ಇವರಿಗೆ ಕೊಡಬೇಕಾದ ಸಂಬಳ ಸಾರಿಗೆಗಳನ್ನು ನ್ಯಾಯವಾಗಿ ಕೊಡಬೇಕಾದುದನ್ನು ಕೊಡಬೇಕು. ಇದನ್ನು ಕೊಡಬಾರದು ಎಂದು ನಾನು ಹೇಳುತ್ತಿಲ್ಲ ಯಾವ ರೀತಿ ಇವರು ಸಂಬಳವನ್ನು ಕೇಳುತ್ತಾರೋ ಅದಕ್ಕೆ ತಕ್ಕಂತೆ ನ್ಯಾಯವಾಗಿ ಇವರು ಕೆಲಸ ಮಾಡಬೇಕಾದುದು ಇವರ ಕರ್ತವ್ಯ ಎಂದು ಈ ಸಂದರ್ಭದಲ್ಲಿ ಒತ್ತಿ ಹೇಳುತ್ತೇನೆ. ಏಕೆಂದರೆ ನಾವು ಬೆಳಗಾದರೆ ನೋಡುತ್ತಿರುತ್ತೇವೆ ಹೈಕೋರ್ಟಿನಲ್ಲಿ ಸೆಕ್ರೆಟೇರಿಯೇಟ್‌ನ ಅರ್ಧದಷ್ಟು ಜನರು ತಮ್ಮ ಸಂಬಳಸಾರಿಗೆ ವಿಚಾರಗಳಲ್ಲಿ ಅತೃಪ್ತಿ ಹೊಂದಿ ಓಡಾಡುತ್ತಿರುತ್ತಾರೆ. ಕೆಲವರು ಎಂ ಎಲ್ ಎ ಗಳ ಸ್ಥಾನ ಮಾನಗಳನ್ನುಪಯೋಗಿಸಿಕೊಂಡು ಕೆಲಸಗಳನ್ನು ಮಾಡಿಸಿಕೊಳ್ಳುತ್ತಾರೆ, ಇನ್ನು ಕೆಲವರು ಪ್ರಭಾವವುಳ್ಳ ಮುಖಂಡರುಗಳ ಮೂಲಕ ತಮ್ಮ ಕೆಲಸಗಳನ್ನು ಮಾಡಿಸಿಕೊಳ್ಳುತ್ತಾರೆ. ಇದರಿಂದಾಗಿ ಮುಖಂಡರುಗಳೂ ಕೂಡ ತಮ್ಮ ಸ್ಥಾನಮಾನಗಳನ್ನು ಉತ್ತಮಪಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ. ನಿಜವಾಗಿ ನ್ಯಾಯವಾಗಿ ಆಡಳಿತ ನಡೆಯಬೇಕಾದ ಪಕ್ಷದಲ್ಲಿ ನಿಷ್ಠೆಯಿಂದ ಪ್ರಾಮಾಣಿಕವಾಗಿ ಕೆಲಸ ಮಾಡಿ ತಮ್ಮ ಪ್ರತಿಭೆಯನ್ನು ಹೆಚ್ಚಿಸಿಕೊಂಡು ಕೆಲಸ ಮಾಡುವವರಿಗೆ ನ್ಯಾಯವಾದ ಪ್ರಮೋಷನ್‌ಗಳು ಏನು ಸಿಗಬೇಕೋ ಅವನ್ನು ಕೊಡಬೇಕು. ಇಲ್ಲದೇ ಯಾರದೋ ಪ್ರಭಾವಕ್ಕೆ ಒಳಗಾಗಿ ಅವರಿಂದ ಪ್ರತಿಫಲ ದೊರಕಿಸಿಕೊಳ್ಳುವುದರಿಂದ ಸರ್ಕಾರದ ಆಡಳಿತ ಡಿಮಾರಲೈಸ್ ಆಗುತ್ತದೆ. ಒಬ್ಬರಿಗೊಂದು ರೀತಿ ಇನ್ನೊಬ್ಬರಿಗೆ ಒಂದು ರೀತಿ ತಾರತಮ್ಯಗಳನ್ನು ಮಾಡಲು ಹೋಗಬಾರದು. ಯಾರ ಒತ್ತಾಯಕ್ಕೂ ಒಳಗಾಗದೆ ಸರಕಾರ ತನ್ನ ಕೆಲಸಗಳನ್ನು ಸರಿಯಾಗಿ ಮಾಡಲು ತಕ್ಕ ಕ್ರಮಗಳನ್ನು ಕೈಕೊಳ್ಳಬೇಕು. ಇದರಿಂದ ಪ್ರಜಾಪ್ರಭುತ್ವ ಉಳಿಯುತ್ತದೆ. ಸುಮ್ಮನೆ ಸರಕಾರಕ್ಕೆ ತಮಗೆ ಬೇಕಾದವರನ್ನು ನೇಮಕ ಮಾಡಬೇಕು ಎಂದು ಹೊಸ ಹುದ್ದೆಗಳನ್ನು ಸೃಷ್ಟಿ ಮಾಡಲು ಹೋಗಬಾರದು ಮತ್ತು ಅಧಿಕಾರಿಗಳನ್ನು ದುರುಪಯೋಗ ಮಾಡಬಾರದು ಎಂದು ಇಲ್ಲಿ ಹೇಳುತ್ತೇನೆ.

5–00 P.M.

ಶ್ರೀ ಬೋಳಾ ರಘುರಾಮ ಶೆಟ್ಟಿ (ಕಾರ್ಕಳ).—ಮಾನ್ಯ ಸಭಾಪತಿಗಳೇ........

ಶ್ರೀ ಡಿ. ದೇವರಾಜ ಅರಸ್.—ಸ್ವಾಮಿ, ಈ ದಿವಸ ಟ್ರೆಜರಿ ಬೆಂಚಿನವರು ಮತ್ತು ಆಡಳಿತ ಪಕ್ಷದವರು ಯಾರೂ ಸಭೆಯಲ್ಲಿ ಹಾಜರಿಲ್ಲ. ಎಲ್ಲೋ ಕೆಲವರು ಮಾತ್ರ ಕುಳಿತಿದ್ದಾರೆ. ಇವನ್ನು ನೋಡಿ ನಮ್ಮ ಮನಸ್ಸಿಗೆ ಬಹಳ ನೋವುಂಟಾಗಿದೆ. ಸರ್ಕಾರದವರು ಈ ಒಂದು ವರದಿಯನ್ನು ಸಭೆಯ ಮುಂದಿಟ್ಟಾಗ ಅವರು ಸಭೆಯಲ್ಲಿರಬೇಕಾದುದು ಅತ್ಯಗತ್ಯ. ಏಕೆಂದರೆ ಸಭೆಯಲ್ಲಿ ಚರ್ಚೆಯಾಗತಕ್ಕ ವಿಷಯಗಳಲ್ಲಿ ಏನೇನು ವಿಷಯಗಳನ್ನು ಮಾನ್ಯ ಸದಸ್ಯರು ತಿಳಿಸುತ್ತಾರೆ

(ಶ್ರೀ ಡಿ. ದೇವರಾಜ್ ಅರಸ್)

ಎಂಬುದನ್ನು ಸರ್ಕಾರದವರು ಎಚ್ಚರದಿಂದ ಗಮನಿಸಬೇಕಾದುದು ಅವರ ಕರ್ತವ್ಯ. ವಿರೋಧ ಪಕ್ಷದವರು ಕೊಡತಕ್ಕ ಸಲಹೆಗಳನ್ನು ತೆಗೆದುಕೊಂಡು ಅವರು ಏನು ಆಕ್ಷೇಪಣೆಗಳನ್ನು ಮಾಡಿರುತ್ತಾರೋ ಅವುಗಳನ್ನು ಪುನಃ ಮಾಡದಂತೆ ಎಚ್ಚರಿಕೆಯನ್ನು ತೆಗೆದುಕೊಂಡು ಕೆಲಸ ಮಾಡತಕ್ಕದ್ದು ಪ್ರಜಾಪ್ರಭುತ್ವದ ಲಕ್ಷಣ; ಹಾಗೂ ನ್ಯಾಯವಾದದ್ದು. ಈ ದಿವಸ ಬೆಳಿಗ್ಗೆ ಈ ಚರ್ಚೆಯನ್ನು ಮತ್ತೆ ಮೂರು ಗಂಟೆಗೆ ಪ್ರಾರಂಭಿಸಬೇಕೆಂದು ತೀರ್ಮಾನ ಮಾಡಲಾಗಿತ್ತು. ಹಾಗಿದ್ದರೂ ಅವರು ಇಷ್ಟು ಜವಾಬ್ದಾರಿರಹಿತವಾಗಿ ವರ್ತಿಸುವುದು ಸರಿಯಲ್ಲ ಎಂದು ಹೇಳದೆ ವಿಧಿಯಿಲ್ಲ. ಸಭಾಮರ್ಯಾದೆಗಾದರೂ ಆ ಮಂತ್ರಿಗಳೆಲ್ಲಾ ಇಲ್ಲಿ ಇರಬೇಕಾದ್ದು ಅವಶ್ಯಕ. ಈಗಲಾದರೂ ಅವರು ಹೆಚ್ಚಿನ ಶ್ರದ್ಧೆವಹಿಸಿ ಸಭೆಯಲ್ಲಿ ಇರುವುದು ಒಳ್ಳೆಯದೆಂದು ತಿಳಿಸುವುದಕ್ಕೆ ನಾನು ಇಷ್ಟಪಡುತ್ತೇನೆ.

ಶ್ರೀ ಕೆ. ಎಚ್. ಶ್ರೀನಿವಾಸ್ (ಸಾಗರ್).—ಸ್ವಾಮಿ, ಬೆಳಗ್ಗೆ ಈ ದಿವಸ ಮಧ್ಯಾಹ್ನ ಕೂಡ ಈ ಚರ್ಚೆಯನ್ನು ಮುಂದುವರಿಸಬೇಕೆಂದು ತೀರ್ಮಾನ ಮಾಡುವವೇಳೆಗೆ ಇಲ್ಲಿ ನಮ್ಮ ಪಕ್ಷದ ಸದಸ್ಯರು ಅನೇಕರು ತಮ್ಮ ತಮ್ಮ ರೂಮುಗಳಿಗೆ ಹೊರಟುಹೋಗಿದ್ದರು. ಆಗ ಸಭೆ ಇನ್ನೇನು ಮುಕ್ತಾಯವಾಗುವ ಸಮಯ. ಅಷ್ಟೇ ಹೊರತು ಅಶ್ರದ್ಧೆಯಿಂದ ಬಾರದೆ ನಿಂತಿದ್ದಾರೆಂಬುದನ್ನು ನಾನು ಒಪ್ಪುವುದಿಲ್ಲ. ಮತ್ತು ಈ ವಿಚಾರದಲ್ಲಿ ಸೂಕ್ತ ಕ್ರಮ ಕೈಗೊಳ್ಳುವುದಕ್ಕೆ ಶಾಸನ ಸಭೆಯ ಕಛೇರಿಗೂ ಕೂಡ ಸಾಧ್ಯವಾಗಿಲ್ಲ. ಮಧ್ಯಾಹ್ನ ಈ ಸಭೆ ಸೇರುತ್ತದೆಂಬುದು ಬಹಳ ಜನ ಸದಸ್ಯರಿಗೆ ಗೊತ್ತಿಲ್ಲ. ಆದ್ದರಿಂದ ಅವರ ಆಕ್ಷೇಪಣೆ ಸರಿಯಾದ್ದಲ್ಲ ಎಂದು ಹೇಳುತ್ತೇನೆ.

†ಶ್ರೀ ಬೋಳಾರಘುರಾಮಶೆಟ್ಟಿ.—ಸ್ವಾಮಿ, ಸಭೆಯ ಮುಂದೆ ಸರ್ಕಾರದವರು ಮಂಡಿಸಿರತಕ್ಕ 1966—67ನೇ ಸಾಲಿನ ಪಿ. ಎಸ್. ಸಿ. ವರದಿ ಮೇಲೆ ಈ ದಿವಸ ಚರ್ಚೆ ನಡೆಯುತ್ತಿದೆ. ಈ ಪಬ್ಲಿಕ್ ಸರ್ವೀಸ್ ಕಮಿಷನ್ ವರದಿಯನ್ನು ಪ್ರತಿ ವರ್ಷವೂ ಚರ್ಚೆಗೆ ಈ ಸಭೆಯ ಮುಂದೆ ಮಂಡಿಸಲೇಬೇಕೆಂದು ಘಟನಾತ್ಮಕವಾದ ನಿರ್ಬಂಧ ಇದೆ. ಈ ಜವಾಬ್ದಾರಿ ನಮ್ಮ ಗೌರ್ನರ ಮೇಲಿದೆ ಹಾಗಿದ್ದರೂ ಈ ವರದಿಯನ್ನು ಎರಡೂವರೆ ವರ್ಷಗಳ ನಂತರ ಚರ್ಚೆಗೆ ಸಭೆಯ ಮುಂದೆ ಇಡುತ್ತಿದ್ದಾರೆ. ಈ ವರದಿಯನ್ನು ಇಲ್ಲಿ ಚರ್ಚೆ ಮಾಡುವುದರಿಂದ ಏನು ಪ್ರಯೋಜನ ಇದೆ ಎಂದರೆ ಮಾನ್ಯ ಸದಸ್ಯರು ಸರ್ಕಾರದವರ ನಡವಳಿಕೆಯಲ್ಲಿ ಏನೇನು ದೋಷಗಳನ್ನು ತಪ್ಪುಗಳನ್ನು ತೋರಿಸುತ್ತಾರೋ ಅವುಗಳನ್ನು ನೋಟ್ ಮಾಡಿಕೊಂಡು ಮುಂದೆ ಅಂಥ ದೋಷಗಳಿಗೆ ಅವಕಾಶವಾಗದಂತೆ ಕೆಲಸ ಮಾಡಲು ಇದರಿಂದ ಅನುಕೂಲವಾಗುತ್ತದೆ. ಅಂಥ ಒಂದು ಅವಕಾಶ ಹಾಗೂ ಅನುಕೂಲ ಈ ಚರ್ಚೆಯಲ್ಲಿದೆ. ಈ ಚರ್ಚೆಯಲ್ಲಿ ಈ ಸಭೆಯ ಮಾನ್ಯ ಸದಸ್ಯರು ಕೊಡತಕ್ಕ ಸಲಹೆಯ ಪ್ರಕಾರ ಮತ್ತು ರಾಜ್ಯಾಂಗಬದ್ಧವಾದ ಮಾರ್ಗದಲ್ಲಿ ನಡೆಯಬೇಕಾದ್ದು ಸರ್ಕಾರದವರ ಕರ್ತವ್ಯ. ಈ ನಿಯಮಗಳನ್ನು ಸರ್ಕಾರದವರು ಸರಿಯಾಗಿ ಪಾಲಿಸಿಕೊಂಡು ಬಾರದಿರುವುದರಿಂದಲೇ ಅಲ್ಲದೆ ಸ್ಥಾನಗಳನ್ನು ಭರ್ತಿಮಾಡುವಾಗ ಪ್ರಮೋಷನ್ ಗಳನ್ನು ಕೊಡುವಾಗ ಸರ್ಕಾರದವರು ಪಕ್ಷಪಾತ ಭಾವನೆಯಿಂದ ನಡೆಯುತ್ತಿರುವುದರಿಂದ ಈ ದಿವಸ ಎಲ್ಲಾ ನೌಕರ ವರ್ಗದಲ್ಲೂ ಅಸಂತೋಷ ಅತೃಪ್ತಿಗಳು ಹೆಚ್ಚಿ ಜನರು ಸಾವಿರಗಟ್ಟಲೆ ಹೈಕೋರ್ಟಿನಲ್ಲಿ ರಿಟ್ ಅರ್ಜಿಗಳನ್ನು ಹಾಕಲು ಅವಕಾಶವಾಗಿದೆ. ಎಲ್ಲಾ ಇಲಾಖೆಗಳಲ್ಲೂ ಡೀಮಾರ್ಲೈಜ್ ಆಗಿರುವುದನ್ನು ನಾವು ಕಾಣುತ್ತಿದ್ದೇವೆ. ಅನೇಕ ಸಂದರ್ಭಗಳಲ್ಲಿ ಪ್ರಮೋಷನ್ನುಗಳನ್ನು ಕೊಡತಕ್ಕ ಕಾಲದಲ್ಲಿ ಪಿ. ಎಸ್. ಸಿ. ಅವರು ಆ ಪ್ರಮೋಷನ್ನಿಗೆ ಅರ್ಹರಾಗಿದ್ದವರ ಫೈಲು ಮತ್ತು ಅವರ ಕ್ಯಾರೆಕ್ಟರ್ ವಗೈರೆ ಮಾಹಿತಿಗಳನ್ನು ಕಳುಹಿಸಬೇಕೆಂದು ಸರ್ಕಾರಕ್ಕೆ ಕಾಗದ ಬರೆದರೆ ಸರ್ಕಾರದವರು ಅದನ್ನು ನಿಧಾನಮಾಡಿ ಅವರು ಕೇಳಿದ ದಾಖಲೆಗಳನ್ನು ಒದಗಿಸುತ್ತಿಲ್ಲ. ಸಾಕಷ್ಟು ವಿಳಂಬ ಮಾಡುತ್ತಿದ್ದಾರೆ, ಹಾಗೂ ಬಹಳ ಬೇಜವಾಬ್ದಾರಿಯುತವಾಗಿ ವರ್ತಿಸುತ್ತಿದ್ದಾರೆಂದು ಅವರು ತಮ್ಮ ವರದಿಯ ಪುಟ 8ರಲ್ಲಿ ಬರೆದಿದ್ದಾರೆ. ಅಷ್ಟೇ ಅಲ್ಲದೆ ತತ್ಸಂಬಂಧದಲ್ಲಿ ಸರ್ಕಾರಕ್ಕೆ ಪಿ. ಎಸ್. ಸಿ. ಅವರು ಕೊಡತಕ್ಕ ಸಲಹೆಗಳನ್ನು ತಮ್ಮ ಮನಸ್ಸಿಗೇ ತಂದುಕೊಳ್ಳುತ್ತಿಲ್ಲ ಎಂದು ಹೇಳಿರುವುದರ ಬಗ್ಗೆ ನಾನು ನನ್ನ ವಿಷಾದವನ್ನು ವ್ಯಕ್ತಪಡಿಸಬೇಕಾಗಿದೆ. ಕೆಳಗಿನ ಕ್ಲಾಸಿನಿಂದ ಮೇಲಿನ ಕ್ಲಾಸಿಗೆ ಪ್ರಮೋಷನ್ ಕೊಡತಕ್ಕ ಕಾಲದಲ್ಲಿ ಸರ್ಕಾರದವರು ತಮಗೆ ಯಾರು ಬೇಕೋ ಅವರಿಗೆ ಪ್ರಮೋಷನ್ ಕೊಡಬೇಕೆಂಬ ಉದ್ದೇಶದಿಂದಲೇ ಪಿ. ಎಸ್. ಸಿ. ಅವರಿಗೆ ಕೇಳತಕ್ಕ ಮಾಹಿತಿಗಳನ್ನು ಒದಗಿಸುತ್ತಿಲ್ಲ. ಇಂಥ ಕೆಲವು ವಿಚಾರಗಳನ್ನು ಪಿ. ಎಸ್. ಸಿ. ಅವರು ತಮ್ಮ 1965-66 ರ ವರದಿಯಲ್ಲಿ ಹೇಳಿದ್ದಾರೆ. ಅಲ್ಲದೆ ಸರ್ಕಾರದವರು ತಮಗೆ ಬೇಕಾದವರಿಗೆ ಅನುಕೂಲ ಮಾಡಲು ಅಲ್ಲಸಲ್ಲದ ಜನರಿಗೆ ನೌಕರಿಗಳನ್ನು ಲೋಕಲ್ಲಾಗಿ ಅಪಾಯಿಂಟ್ ಮಾಡಿಕೊಂಡು ಅವರನ್ನು 3-4 ವರ್ಷಗಳ ಕಾಲ ಕೆಲಸದಲ್ಲಿಟ್ಟುಕೊಂಡು ಅನಂತರ ಅವರನ್ನು ತೆಗೆಯುವುದಕ್ಕಾಗುವುದಿಲ್ಲ ಅವರನ್ನು

ಹೇಗಾದರೂ ಮಾಡಿ ರೆಗ್ಯುಲರೈಜ್ ಮಾಡಬೇಕೆಂದು ನೆಪ ಹೂಡಿ ಅವರಿಗೆ ನೌಕರಿಗಳನ್ನು ಖಾಯಂ ಮಾಡುತ್ತಿರುವುದರಿಂದ ಬೇರೆಯವರಿಗೆ ನೌಕರಿಗಳು ಸಿಕ್ಕುವುದು ಬಹಳ ಕಷ್ಟವಾಗಿದೆ. ಹಾರ್ಟಿಕಲ್ಚರಲ್ ಇಲಾಖೆಯಲ್ಲಿ ಮೂರನೆ ಕ್ಲಾಸಿನಲ್ಲಿದ್ದವರನ್ನು ಎರಡನೇ ಕ್ಲಾಸಿಗೆ ಪ್ರಮೋಟ್ ಮಾಡತಕ್ಕ ಕಾಲದಲ್ಲಿ ಪಿ. ಎಸ್. ಸಿ. ಅವರು ಕೇಳಿದ ದಾಖಲೆಗಳನ್ನು ಮತ್ತು ಮಾಹಿತಿಗಳನ್ನು ಒದಗಿಸದೆ ಕೆಲವರನ್ನು ಟೆಂಪರರಿಯಾಗಿ 2 ವರ್ಷಗಳ ಕಾಲ ಇಟ್ಟುಕೊಂಡು ಪಿ. ಎಸ್. ಸಿ. ಅವರ ಒಪ್ಪಿಗೆಯನ್ನೂ ಪಡೆಯದೆ, ಅನಂತರ ಅವರು ತಮ್ಮ ಒಪ್ಪಿಗೆ ಕೊಡುವುದಕ್ಕೆ ವಿರೋಧಿಸಿದಾಗ ಆ ಟೆಂಪರರಿ ಕ್ಯಾಂಡಿಡೇಟುಗಳನ್ನೇ ಮುಂದುವರಿಸಿ ಅವರನ್ನು ನೌಕರಿಯಲ್ಲಿ ಖಾಯಂ ಮಾಡಿದ ವಿಚಾರವನ್ನು ವರದಿಯಲ್ಲಿ ನಮೂದಿಸಿದ್ದಾರೆ. ಅಲ್ಲದೆ ಇನ್ನೂ ಕೆಲವು ಸಂದರ್ಭಗಳಲ್ಲಿ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್‌ಗಳನ್ನು ಮಾಡಿಲ್ಲ ಎಂಬ ನೆಪದ ಮೇಲೆ ಟೆಂಪರರಿ ನೌಕರರನ್ನು ಅಪಾಯಿಂಟ್ ಮಾಡಿಕೊಂಡು ಅವರನ್ನು ಕಡೆಗೆ ಖಾಯಂ ಮಾಡತಕ್ಕ ಪದ್ಧತಿ ನಮ್ಮ ಸರ್ಕಾರದಲ್ಲಿದೆ. ಸರ್ಕಾರದವರು ಪಿ. ಎಸ್. ಸಿ. ಅವರು ಮಾಡತಕ್ಕ ರಿಮಾರ್ಕ್ಸ್‌ಗೆ ಸ್ವಲ್ಪ ಮರ್ಯಾದೆಯನ್ನು ಕೊಡುತ್ತಿಲ್ಲ. ಇನ್ನು ಒಂದು ಇಲಾಖೆಯಲ್ಲಿ ಐರನ್ ಪೈಪುಗಳ ಕಳುವಿನ ಬಗ್ಗೆ ಇಲಾಖೆಯವರು ರಿಪೋರ್ಟ್ ಮಾಡಿದ್ದಾಗ ಪಿ. ಎಸ್. ಸಿ. ಅವರು ಕೆಲವರನ್ನು ಡಿಸ್‌ಮಿಸ್ ಮಾಡಬೇಕೆಂದು ರೆಕಮೆಂಡೇಷನ್ ಮಾಡಿದ್ದರೂ ಅದಕ್ಕೆ ಸರ್ಕಾರದವರು ಮಾನ್ಯತೆ ಕೊಡದೆ ಕೆಲವರನ್ನು 7 ವರ್ಷದ ವರೆಗೂ ಕೆಲಸದಲ್ಲೇ ಇಟ್ಟುಕೊಂಡು ಮತ್ತೆ ಆ ಸಂಬಂಧದಲ್ಲಿ ಪೋಲೀಸ್ ಇಲಾಖೆಯ ವಿಚಾರಣೆ ಸರಿಯಿಲ್ಲ ಎಂದು ಹೇಳಿ ಇಲಾಖೆಯಿಂದ ಬೇರೆ ವಿಚಾರಣೆ ಮಾಡಿಸಿ ಆ ತಪ್ಪಿತಸ್ಥರೆಂದು ಯಾರನ್ನು ಆ ಪಿ. ಎಸ್. ಸಿ. ಶಿಫಾರಸು ಮಾಡಿತ್ತೋ ಅದೇ ನೌಕರರನ್ನು ಸರ್ಕಾರದವರು ಪುನಃ ಕೆಲಸದಲ್ಲಿ ಉಳಿಸಿಕೊಂಡಿದ್ದಾರೆ. ಹೀಗಾಗಿ ಆಡಳಿತದಲ್ಲಿ ಡೀಮಾರಲೈಜ಼ಾಗಿದೆ. ರಾಜ್ಯಾಂಗದ 16ನೇ ವಿಧಿಯ ಪ್ರಕಾರ ದೇಶದಲ್ಲಿರತಕ್ಕ ಎಲ್ಲ ಜನರಿಗೂ ಸರ್ಕಾರದಲ್ಲಿ ನೌಕರಿಗಳನ್ನು ಪಡೆಯತಕ್ಕ ಒಂದು ಹಕ್ಕನ್ನು ಕೊಟ್ಟಿದೆ. ಅದಕ್ಕೆ ಈ ಸರ್ಕಾರದವರು ಅವಕಾಶ ಕೊಡುತ್ತಿಲ್ಲ. ಈ ಎಲ್ಲಾ ಕಾರಣಗಳಿಂದ ಆ ಪಿ. ಎಸ್. ಸಿ. ಅವರು ಸರ್ಕಾರದವರ ಮೇಲೆ ಮಾಡಿರತಕ್ಕ ಎಲ್ಲ ಸೆನ್‌ಸಾರುಗಳಿಗೂ ಇವರೇ ಜವಾಬ್ದಾರರು. ಇನ್ನಾದರೂ ಸರ್ಕಾರದವರು ಆ ಪಿ. ಎಸ್. ಸಿ. ಅವರು ಕೊಡತಕ್ಕ ಸಲಹೆಗಳನ್ನು ಗಮನಕ್ಕೆ ತೆಗೆದುಕೊಂಡು ಅಡಳಿತದಲ್ಲಿರತಕ್ಕ ಲಂಚ ರುಷುವತ್ತುಗಳನ್ನು ಕಮ್ಮಿ ಮಾಡಬೇಕೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† **Sri P. B. NANDIHALI** (Uchagaon).—Mr. Deputy Speaker Sir, I would like to quote from the report of the Public Service Commission placed before this House, certain examples which indicate that Government had neglected the recommendations of the Public Service Commission. Firstly, the Commission has stated in regard to irregular promotions :

> "In the year 1963-64, the Commission had declined to agree to the promotions of 8 Class III officials to Class II posts in the Department of Horticulture in the absence of any definite criteria with regard to the minimun qualifications required for each post as also in the absence of a seniority list for this class of officials. The details of this particular case have already been mentioned in our report for the year 1963-64 (*vide* item 11, page 8-10).
>
> It is a sad commentary on the administration of the Department to note that without determining the seniority of the officials concerned and without any regard to the qualifications and experience required for the performance of their duties in the higher posts, the Government in October 1966 regularised these promotions two years after the initial proposal was made without obtaining the concurrence of the Commission. The Commission were therefore constrained to treat these appointments as irregular. "

(SRI P. B. NANDIHALI)

Similarly, in regard to corruption the Commission has observed that:

> "For the illegal disposal of certain iron pipes involved in a theft committed during September 1956, a joint departmental enquiry was held against an Inspector and a District Superintendent of Police. The case relating to the Deputy Superintendent has been mentioned in the Commission's Report for 1958-59. As regards the Police Inspector, the Enquiry Officer held him fully guilty of the charge and recommended his dismissal from service.
>
> The Commission, after due consideration, were of the view that the charges against the Police Inspector were fully proved and also recommended his dismissal.
>
> No orders were however passed by the Government in respect of this case for over 7 years."

Then in regard to Recruitment by Competitive Examination, the Commission has observed that:

> "As stated at item 9 (a) above, six studentships were advertised by the Commission for the Diploma Course in Forestry at the Indian Forest College, Dehra Dun, and the only candidate who was successful in the competitive examination was selected and recommended to the Government.........
>
> However, the Government selected five more persons from the list of candidates furnished by the Commission and deputed them for the training, contrary to the selection made by the Commission."

Thus, the Government has neglected the recommendations of the Public Service Commission in so many cases. In fact the Commission should be treated as a judicial body and its recommendations should be final. But unfortunately the Government is doing injustice to the common man and employments are provided on the basis of mere influence and bribe. I even charge the members of the Public Service Commission that they are not giving equal opportunities to all in employment. They are yielding to the pressures and influences from the members of the Ruling party and the Ministers, and thereby they are completely neglecting the other genuine candidates. To quote an example, a Junior Engineer gold medalist who stood first in Mysore State was interviewed for two minutes and he was not selected merely because there was another candidate who had influence and money to bribe them. The merit-candidate was a poor candidate and he was not able to give bribe to the members of the Public Service Commission and Ministers etc., and therefore he was not selected. If at all the Government were to do justice to the common man they should reserve some seats for educationally, socially and economically backward persons. Unless this is done, the common man cannot have any chance of employ-

ment. The party in power by its influential and corruptive attitude in this respect is inviting revolution in the country. Everywhere there is discrimination in regard to seniority, promotions etc.

On this occasion I cannot forget to mention about the grievances of the Marathi people. Whenever a Marathi candidate appears before the Commission the first question asked is whether he knows 'Kannada' and if he says 'No' he will not be selected. To quote an instance, there was one diploma holder who stood first rank in Mysore State in Khanapur taluk. He has applied for appointment to the Taluka Board as per their advertisement. But the B.D.O. of that Taluk Board is bold enough to write to him that he cannot get employment since he does not know Kannada. Further, I may bring to the notice of the Government, that not even a single person to the Gazetted cadres is being selected from the border areas.

I conclude my speech with these words.

Sri H. SIDDAVEERAPPA.—Sir, hon. Members Sri Nagappa and Sri Nanje Gowda have given notice of a substitute motion. I request you to take that also along with the motion that is already before this House.

Sri K. H. SRINIVAS.—Sir, I rise on a point of order. So far as I have understood, under the Rules of Procedure, there is no scope for moving a substitue motion to the main motion. I want the Chair to consider this and then give a ruling.

Mr. DEPUTY SPEAKER.—I may tell the hon. Member Sri Nagappa that the debate is almost over; he could have given the notice of the motion earlier; now it is too late.

Sri M. NAGAPPA.—The Chair has the discretion to allow the motion at any time, even just before the voting commences.

Mr. DEPUTY SPEAKER.—It is too late.

Sri M. N. RAMANNA.—I rise on a point of order, Sir. The Chair has already called upon Sri Rajaiah Shetty to speak. So, I submit that this point may be considered after Sri Rajaiah Shetty has spoken.

†ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ (ಚಿಕ್ಕನಾಯಕನ ಹಳ್ಳಿ).—ಮಾನ್ಯ ಸಭಾಪತಿಗಳೇ, ಭಾರತ ರಾಜ್ಯಾಂಗದಲ್ಲಿ ಇಂದಿನ ದಿವಸ ಪಬ್ಲಿಕ ಸರ್ವಿಸ್ ಕಮಿಷನ್ನಿಗೆ ಇರುವ ಮಹತ್ವವನ್ನು ನೋಡಿದರೆ ಅದರ ಕೆಲಸಕಾರ್ಯಗಳು ಸುಲಲಿತವಾಗಿ ನಡೆಯಬೇಕಾದ್ದು ಎಷ್ಟು ಮುಖ್ಯ ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗಿದೆ. ಈ ಹೊತ್ತಿನ ರಾಜಕೀಯ ಪರಿಸ್ಥಿತಿಯನ್ನು ತೆಗೆದುಕೊಂಡರೆ, ಭಾರತ ದೇಶದಲ್ಲಿ ಮೂರು ಮೂರು ತಿಂಗಳಿಗೆ, ಆರಾರು ತಿಂಗಳಿಗೆ ಸರ್ಕಾರಗಳು ಉರುಳುತ್ತಿರುವ ಪರಿಸ್ಥಿತಿಯನ್ನು ನಾವೆಲ್ಲ ಪ್ರತ್ಯಕ್ಷವಾಗಿ ನೋಡುತ್ತಿದ್ದೇವೆ. ರಾಜ್ಯಾಂಗದಲ್ಲಿ ಮೂರು ಮುಖ್ಯವಾದ ಅಂಗಗಳನ್ನು ಕೊಟ್ಟಿದ್ದಾರೆ. ಶಾಸಕಾಂಗ, ಕಾರ್ಯಾಂಗ ಮತ್ತು ಆಡಳಿತಾಂಗ. ಇಂದಿನ ದಿವಸ ಆಡಳಿತದ ಅಂಗವನ್ನು ಸೃಷ್ಟಿ ಮಾಡುವ ಜವಾಬ್ದಾರಿ ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ಸೇರಿದೆ. ಎಲ್ಲಿಯವರೆಗೆ ಆಡಳಿತಾಂಗ ಚೆನ್ನಾಗಿರುವುದಿಲ್ಲ ಅಲ್ಲಿಯವರೆಗೆ ಪ್ರಜಾಪ್ರಭುತ್ವ ಸರಿಯಾಗಿ ನಡೆಯುವುದಿಲ್ಲ. ಮೂರು ದಿವಸಕ್ಕೆ ಒಂದು ಸಲ ಸರ್ಕಾರ ಬದಲಾವಣೆಯಾಗುತ್ತಿದ್ದರೆ ಆಡಳಿತ ಯಾವರೀತಿ ಸುವ್ಯವಸ್ಥಿತವಾಗಿ ನಡೆಯುತ್ತದೆ ಎಂದು ನೋಡಬಹುದು. ಆಡಳಿತ ಸುವ್ಯವಸ್ಥೆಯಿಂದ ಚೆನ್ನಾಗಿ ನಡೆಯಬೇಕಾಗಿದ್ದರೆ ಸಿವಿಲ್ ಸರ್ವಿಸಸ್ ಮತ್ತು ಆಡಳಿತ ಅಧಿಕಾರಿಗಳ ಯಂತ್ರ ಸರಿಯಾಗಿದ್ದರೆ ಆಡಳಿತ ಚೆನ್ನಾಗಿ ನಡೆಯುತ್ತದೆ. ನಮ್ಮ ದೃಷ್ಟಿಯಲ್ಲಿ ಈ ರಾಜ್ಯದಲ್ಲಿ ನೋಡಿದರೆ ರಾಜ್ಯಾಂಗದಲ್ಲಿ

(ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ)

ಏನು ಹೇಳಿದೆಯೋ ಆ ಪ್ರಕಾರವಿಲ್ಲದೆ, ಸರ್ಕಾರಗಳು ಹೇಗೆ ಬರುತ್ತಿವೆಯೋ ಅದಕ್ಕಿಂತ ಕೆಟ್ಟ ಪರಿಸ್ಥಿತಿಯನ್ನು ಅಧಿಕಾರಿಗಳಲ್ಲಿ ನೋಡುತ್ತಿದ್ದೇವೆ. ಸರ್ಕಾರ ತನ್ನ ಜವಾಬ್ದಾರಿಯನ್ನು ನಿರ್ವಹಿಸುತ್ತಿಲ್ಲ. ನ್ಯಾಯಾಂಗವನ್ನು ತೆಗೆದುಕೊಂಡರೆ ಅಧಿಕಾರಿಗಳನ್ನು ಚುನಾವಣೆ ಮಾಡುವುದು ಪಬ್ಲಿಕ್ ಸರ್ವಿಸ್ ಕಮಿಷನ್ ಜವಾಬ್ದಾರಿ. ಆಡಳಿತ ಯಂತ್ರವನ್ನು ಸೃಷ್ಟಿ ಮಾಡುವ ಜವಾಬ್ದಾರಿ ಕೂಡ ಪಬ್ಲಿಕ್ ಸರ್ವಿಸ್ ಕಮಿಷನ್ನಿಗೇ ಇದೆ. ಸರ್ಕಾರ ತನ್ನ ಕರ್ತವ್ಯ ಲೋಪದಿಂದ ಅಥವಾ ಶಾಸಕಾಂಗಕ್ಕೆ ಕೆಟ್ಟ ಹೆಸರು ಬರುವ ರೀತಿಯಲ್ಲಿ ವರ್ತಿಸಿ ತನ್ನ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸುತ್ತಿಲ್ಲ. ಪಬ್ಲಿಕ್ ಸರ್ವಿಸ್ ಕಮಿಷನ್ ಮತ್ತು ಸರ್ಕಾರಕ್ಕೆ ಇರುವ ಸಂಬಂಧವೇನು, ಸರ್ಕಾರ ಏನು ಕೆಲಸ ಮಾಡುತ್ತಿದೆ ಎನ್ನುವುದನ್ನು ಸ್ವಲ್ಪ ನೋಡಬೇಕಾಗಿದೆ.

1956ನೆ ಇಸವಿಯಲ್ಲಿ ರಾಜ್ಯ ಪುನರ್ವಿಂಗಡಣೆಯಾದ ನಂತರ ಇಂಟರ್ ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಹೇಗೆ ಮಾಡಬೇಕು ಎಂದು ರಾಜ್ಯಗಳ ಪುನರ್ನಿರ್ಮಾಣ ಕಾಲದಲ್ಲಿ ಶಾಸನದಲ್ಲಿ ಉಲ್ಲೇಖಿಸಿ ಹೇಳಿದ್ದಾರೆ. 1956 ರಿಂದ 1970ನೇ ಇಸವಿಯವರೆಗೂ ಕೂಡ ಇಂಟರ್‌ಸ್ಟೇಟ್ ಸೀನಿಯಾರಿಟಿ ಲಿಸ್ಟ್‌ಗಳು ಪೂರ್ತಿಯಾಗಿಲ್ಲ. ಪ್ರಮೋಷನ್ ಆಗಲೀ, ಬಡ್ತಿ ಆಗಲೀ ಹೇಗೆ ಆಗುತ್ತಿವೆ ಎಂದರೆ ಮಂತ್ರಿಗಳ ವೈಯಕ್ತಿಕ ಅಥವಾ ಪಿಪ್ನಿಕಲ್ ರೀತಿಯಲ್ಲಿ ನಡೆಯುತ್ತಿವೆ. ಹತ್ತು ವರ್ಷ ಸರ್ವಿಸ್ ಆಗಿ ಸೀನಿಯಾರಿಟಿ ಇರಬಹುದು. ಆದರೆ ನಾಲ್ಕು ಜನರನ್ನು ಅವರ ಮೇಲೆ ಹಾಕಿ ಟೆಂಪೊರರಿ ಎಂದು ಹೇಳಿಕೊಂಡು ಹತ್ತು ವರ್ಷ ಇಂಟರ್ ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಮಾಡದೆ ತಮಗೆ ಹೇಗೆ ಬೇಕೋ ಹಾಗೆ ನಿಧಾನ ಮಾಡುತ್ತಿದ್ದಾರೆ.

ಪಬ್ಲಿಕ್ ಸರ್ವಿಸ್ ಕಮಿಷನ್ ನೇಮಿಸಬೇಕಾದರೂ ಕೂಡ ಈ ಸರ್ಕಾರ ಸರಿಯಾದ ರೀತಿಯಲ್ಲಿ ಮಾಡುತ್ತಿಲ್ಲ. ಮಾನ್ಯ ಆರ್ ಚೆನ್ನಿಗರಾಮಯ್ಯನವರು ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಅಧ್ಯಕ್ಷರಾಗಿದ್ದರು ಅವರು ಮಂತ್ರಿಗಳೂ ಆಗಿದ್ದರು. ಪಬ್ಲಿಕ್ ಸರ್ವಿಸ್ ಕಮಿಷನ್‌ನವರು ಎಂ.ಸಿ. ಎಸ್. ಅಧಿಕಾರಿಗಳನ್ನು ಎಗ್ಸಾಮಿನ್ ಮಾಡಿ ಅವರನ್ನು ಆರಿಸುತ್ತಾರೆ. ಅದೇ ರೀತಿಯಲ್ಲಿ ಟೆಕ್ನಿಕಲ್ ಬಾಬುಗಳಲ್ಲಿ ಕೂಡ ಅಧಿಕಾರಿಗಳನ್ನು ಆರಿಸುವ ಅವಕಾಶವಿದೆ. ಪಬ್ಲಿಕ್ ಸರ್ವಿಸ್ ಕಮಿಷನ್ ಚೇರ್‌ಮನ್ ಆಗುವವರು ಯಾವ ದರ್ಜೆಯವರಿರಬೇಕು, ಅವರಿಗೆ ಏನು ವಿದ್ಯಾಭ್ಯಾಸವಿರಬೇಕು ಎಷ್ಟರಮಟ್ಟಿಗೆ ನ್ಯಾಯಾಂಗದಲ್ಲಿ ಪರಿಶ್ರಮ ಇರಬೇಕು ಎನ್ನುವುದನ್ನೆಲ್ಲ ಗಣನೆಗೆ ತೆಗೆದುಕೊಳ್ಳಬೇಕು. ಆದರೆ ಇದೊಂದನ್ನೂ ಗಮನಿಸದೆ ಕೇವಲ ರಾಜಕೀಯ ದೃಷ್ಟಿಯನ್ನು ಇಟ್ಟುಕೊಂಡು ಚೇರ್‌ಮನ್ ಸ್ಥಾನಕ್ಕೆ ನೇಮಕ ಮಾಡಿ, ಅವರು ಎಂ. ಎ. ಪಿ. ಎಚ್. ಡಿ. ಪಾಸ್ ಮಾಡಿರುವವರನ್ನು ಪರೀಕ್ಷೆ ಮಾಡಬೇಕು ಎಂದರೆ ಈ ಸರ್ಕಾರ ತನ್ನ ಕರ್ತವ್ಯದಲ್ಲಿ ಎಷ್ಟರಮಟ್ಟಿಗೆ ಲೋಪ ಮಾಡಿದೆ ಎನ್ನುವುದನ್ನು ನಾವು ನೋಡಬಹುದು.

ಇಂಟರ್ ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಮಾಡಿಲ್ಲ, ಎಲಿಜಿಬಿಲಿಟಿ ಲಿಸ್ಟ್ ತಯಾರು ಮಾಡಿಲ್ಲ, ಸೀನಿಯಾರಿಟಿ ಲಿಸ್ಟ್ ಮಾಡಿಲ್ಲ, ತಮ್ಮ ಕರ್ತವ್ಯದಲ್ಲಿ ಏನೂ ಮಾಡಿಲ್ಲ ಎಂದು ನಮ್ಮ ಮುಂದೆ ಇರುವ ವರದಿಯಿಂದ ಗೊತ್ತಾಗುತ್ತದೆ. ಇಂಟರ್ ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಮಾಡದೆ ಇರುವುದರಿಂದ ಇಲಾಖೆಯ ಮುಖ್ಯಾಧಿಕಾರಿಗಳು ತಮಗೆ ಬೇಕಾದವರನ್ನು ನೇಮಕ ಮಾಡಿಕೊಳ್ಳುವುದಕ್ಕೆ ಅವಕಾಶವಾಗಿದೆ. ಮುನಿಸಿಪಲ್ ಆಡ್ಮಿನಿಸ್ಟ್ರೇಷನ್ ಮಂತ್ರಿಗಳು ಬೆಂಗಳೂರು ವಾಟರ್ ಬೋರ್ಡಿನ ಟೆಂಡರ್ ವಿಚಾರವಾಗಿ ಹೇಳಿದರು, ಯಾರೋ ಒಬ್ಬ ಅಧಿಕಾರಿಯನ್ನು ನೇಮಿಸಿದ್ದೇವೆ, ಅವರು ಸಿಲೋನ್‌ನಿಂದ ಬಂದಿದ್ದಾರೆ, ಬಹಳ ಅನುಭವವಿದೆ ಅವರು ಚೀಫ್ ಇಂಜಿನಿಯರಾಗಿ ಏಕೆ ಆ ಕೆಲಸ ಮಾಡಬಾರದು ಎಂದು ಕೇಳಿದರು. ಆ ಮನುಷ್ಯ 1926ರಲ್ಲಿ ಬಿ.ಇ. ಪಾಸ್ ಮಾಡಿರುವುದು. ಆತನು ಓದಿದಾಗ ಪ್ರೀ ಸ್ಟ್ರೆಸ್ಡ್ ಸಿಮೆಂಟ್ ಕಾಂಕ್ರೀಟ್ ಕೆಲಸ, ಆರ್.ಸಿ.ಸಿ. ಕೆಲಸ ಇವೆಲ್ಲ ಇಂಜಿನಿಯರಿಂಗ್ ವಿದ್ಯಾಭ್ಯಾಸದಲ್ಲಿ ವಿಷಯಗಳಾಗಿರಲಿಲ್ಲ. ಅಂಥವರನ್ನು ಎಕ್ಸ್‌ಪರ್ಟ್ ಎಂದು ಹೇಳಿ, ಆ ಮನುಷ್ಯ ಬಹಳ ಸತ್ಯವಂತ, ಆತನಿಗೆ ಬಹಳ ಅನುಭವವಿದೆ ಎಂದು ಹೇಳಿದರೆ ಹೇಗೆ? ಸರ್ ಎಂ. ವಿಶ್ವೇಶ್ವರಯ್ಯನವರು ಪ್ರಪಂಚಕ್ಕೇ ದೊಡ್ಡ ಇಂಜಿನಿಯರಾಗಿದ್ದರು. ಆದರೆ ಅವರನ್ನು ಎಲೆಕ್ಟ್ರಾನಿಕ್ ಇಂಜಿನಿಯರ್ ಎಂದು ಯಾರೂ ಹೇಳುವುದಕ್ಕಾಗುವುದಿಲ್ಲ.

5-30 P.M.

ಅನುಭವ ಇಲ್ಲದವರನ್ನು ಅಲ್ಲಿ ಕೂಡಿಸಿ ಅವರು ಕೊಟ್ಟ ವರದಿಯನ್ನು ಸಭೆಯ ಮುಂದಿಟ್ಟರೆ ಅದಕ್ಕಿಂತ ಅನ್ಯಾಯ ಏನಿದೆ? ಇಂದು ವಿಜ್ಞಾನ ಬೆಳೆಯುತ್ತಿದೆ. ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ಎಂಥ ಜನರನ್ನು ಆರಿಸಬೇಕು ಎಂಬುದನ್ನು ಗಮನಿಸಬೇಕು. ಹಾಗಿಲ್ಲದಿದ್ದರೆ ಆಡಳಿತ ಚೆನ್ನಾಗಿ

ನಡೆಯುಲು ಹೇಗೆ ಸಾಧ್ಯ ? ರೆಕ್ರೂಟ್‌ಮೆಂಟ್ ರೂಲ್ಸ್ ಬೋರ್ಡ್ ಅಸ್ತಿತ್ವಕ್ಕೆ ಬಂದು ಮೂರು ನಾಲ್ಕು ವರ್ಷಗಳಾದರೂ ಮಾಡದಿದ್ದರೆ ಯಾರು ಯಾರನ್ನು ಬೇಕಾದರೂ ಆರಿಸಿಕೊಳ್ಳಬಹುದು. ಇಂದು ಹಾಗೆಯೇ ನಡೆಯುತ್ತಿದೆ. ಮೂರನೆಯ ದರ್ಜೆಯಲ್ಲಿ ಬಿ. ಎಸ್‌ಸಿ. ಪಾಸು ಮಾಡಿದವರಿಗೆ ಕೆಲಸ ಸಿಕ್ಕುತ್ತಿದೆ, ಮೊದಲನೆ ದರ್ಜೆಯಲ್ಲಿ ಪಾಸು ಮಾಡಿದವರಿಗೆ ಕೆಲಸ ಸಿಕ್ಕುತ್ತಿಲ್ಲ. ಇದು ಬಹಳ ದುಃಖದ ಸಂಗತಿ. ಮುಖ್ಯಮಂತ್ರಿಗಳು ಪೋಲೀಸು ಇಲಾಖೆ ವಿಚಾರದಲ್ಲಿ ಒಂದು ಮಾತು ಹೇಳಿದರು, ಅದೊಂದು ಸೊಸೈಟಿ, ಸೆಕ್ಷನ್ ಎಂದು ಹೇಳಿದರು. ಜವಾಬ್ದಾರಿ ಸ್ಥಾನಗಳಲ್ಲಿರುವವರು ಸರಿಯಾಗಿ ಕೆಲಸ ಮಾಡಬೇಕಾದರೆ ಅವರಿಗೆ ಸಾಕಷ್ಟು ಶಕ್ತಿ, ವಿದ್ಯೆ, ಆರೋಗ್ಯ ಮುಂತಾದ್ದೆಲ್ಲಾ ಬೇಕು. ಆದರೆ ಇಂದು ತಮಗೆ ಬೇಕಾದವರನ್ನು ಅವರಿಗೆ ಯೋಗ್ಯತೆ ಇರಲಿ, ಇಲ್ಲದಿರಲಿ ತೆಗೆದು ಕೊಳ್ಳುತ್ತಿದ್ದಾರೆ. ಹೀಗಾದರೆ, ಆಡಳಿತ ಸುವ್ಯವಸ್ಥಿತವಾಗಿ ನಡೆಯಲು ಹೇಗೆ ಸಾಧ್ಯ ? ಇಂದು ಆಯ್ಕೆ ನಡೆಯುವುದರಲ್ಲಿ ರಾಜಕೀಯವಿದೆ ಎಂಬ ದೂರು ಎಲ್ಲೆಲ್ಲೂ ಕೇಳಿಬರುತ್ತಿದೆ. ಅನುಭವ ವಿಲ್ಲದಿರುವವರನ್ನು ನಾಮಿನೇಟ್ ಮಾಡುತ್ತಿದ್ದಾರೆ. ಶ್ರೀ ಚನ್ನಿಗರಾಮಯ್ಯನವರು ಪಿ. ಎಸ್. ಸಿ. ಯಲ್ಲಿದ್ದಾಗ ಫಸ್ಟ್ ಕ್ಲಾಸನಲ್ಲಿ ಪಾಸು ಮಾಡಿರುವ ಹರಿಜನರ ಪೈಕಿಯು ಒಬ್ಬ ಉಮೇದುವಾರರು ಇಂಟರ್‌ವ್ಯೂಗೆ ಹೋದರೆ ಅವರನ್ನು ಯಾವ ಜಾತಿಗೆ ಸೇರಿದವರೆಂದು ಕೇಳಿದರಂತೆ. ಹೀಗಾದರೆ ಇಂಥವರಿಗೆ ಎಷ್ಟು ಬೆಲೆ ಕೊಡಬೇಕು? ಇಂಟರ್ ಸ್ಟೇಟ್ ಸೀನಿಯಾರಿಟಿ ಲಿಸ್ಟ್ ತಯಾರಿಸಿರುವುದರಲ್ಲಿ ಎಷ್ಟೋ ಅನ್ಯಾಯವಾಗಿದೆ, ಅದರಲ್ಲೂ ಹಳೆಯ ಮೈಸೂರಿನ ಜನರು ಮುಳುಗಿಹೋಗಿದ್ದಾರೆ. ಇಂಜಿನಿಯರಿಂಗ್ ಇಲಾಖೆಯಲ್ಲಿ 10–14 ವರ್ಷ ಸರ್ವಿಸ್ ಮಾಡಿರುವವರು ಎರಡುಮೂರು ವರ್ಷ ಸರ್ವಿಸ್ ಮಾಡಿ ಮೆರಿಟ್ ಇಲ್ಲದಿರುವವರ ಕೈಕೆಳಗೆ ಕೆಲಸಮಾಡಬೇಕಾಗಿದೆ, ರಾಜಕೀಯದಿಂದ ಅಥವ ಬೇರೆ ಕಾರಣಗಳಿಂದ ಹೀಗೆ ಹತ್ತಾರು ಜನರನ್ನು ಮೇಲ್ಪಟ್ಟ ಹುದ್ದೆಗಳಿಗೆ ನೇಮಕ ಮಾಡಿದ್ದಾರೆ. ಕಡಮೆ ಸರ್ವಿಸ್ ಮಾಡಿರುವವರು ಆಫೀಸರಾಗಿ ಹೆಚ್ಚು ಸರ್ವಿಸ್ ಮಾಡಿರುವವರಮೇಲೆ ಬಂದರೆ ಕೆಲಸ ಮಾಡುವವರಿಗೆಷ್ಟು ಆಸಕ್ತಿಯಿರುವುದು ? ಅವರು ಶ್ರದ್ಧೆಯಿಂದ ಕೆಲಸಮಾಡಲು ಹೇಗೆತಾನೆ ಸಾಧ್ಯ ? ಇದೊಂದೇ ಅಲ್ಲ, ಪಬ್ಲಿಕ್ ಪ್ರಾಸಿಕ್ಯೂಟರುಗಳಾಗಿ ಕೆಲವರನ್ನು ಸರಕಾರ ಸೆಲೆಕ್ಟ್ ಮಾಡಿದೆ, ಇದನ್ನು ಪಿ. ಎಸ್. ಸಿ ಗೆ ವಹಿಸುವುದಿಲ್ಲ. ಕೋ-ಅಪರೇಟಿವ್ ಟ್ರಿಬ್ಯೂನಲ್ ತೆಗೆದು ಕೊಳ್ಳಿ, ಅಲ್ಲಿರುವ ಚೇರ್ಮನ್ನರ ಅರ್ಹತೆಯೇನು ? ಲಾಯರಾಗಿ ಪ್ರಾಕ್ಟೀಸ್ ಮಾಡುತ್ತಿದ್ದರು. ರಾಜಕೀಯ ಆಡಳಿತದಲ್ಲೂ ಪ್ರವೇಶವಾಗಿರುವುದರಿಂದ ಆಡಳಿತವೆಲ್ಲಾ ಹಾಳಾಗಿಹೋಗಿದೆ. ಪಿ.ಎಸ್. ಸಿ. ಯನ್ನು ನೇಮಿಸಿರುವ ಉದ್ದೇಶವಾದರೂ ಏನು ? ಸರಕಾರ ಮಾಡುವ ನೇಮಕ, ಬಡ್ತಿ ಕೊಡುವುದು, ಶಿಕ್ಷೆ ವಿಧಿಸುವುದು ಮುಂತಾದ ಪ್ರತಿಯೊಂದನ್ನೂ ಕೂಡ ಕಮಿಷನ್ನಿಗೆ ತಿಳಿಸಿ ಅದರ ಅಭಿಪ್ರಾಯ ತೆಗೆದುಕೊಂಡು ನಂತರ ಜಾರಿಗೆ ಕೊಡಬೇಕು, ರಾಜ್ಯಾಂಗದ ಪ್ರಕಾರ ಇದು ಸರಕಾರದ ಜವಾಬ್ದಾರಿ. ಆದರೆ ಸರಕಾರ ಅದರಂತೆ ಸರಿಯಾಗಿ ನಡೆದುಕೊಳ್ಳುತ್ತಿಲ್ಲ, ಕಮಿಷನನ್ನು ಕೇಳದೆ ಮೊದಲೇ ಮಾಡಿದನಂತರ ಕೇಳುವರು, ಕಮಿಷನ್ ಒಪ್ಪದಿದ್ದರೂ ತಮಗೆ ಬೇಕಾದ ಸಂದರ್ಭಗಳಲ್ಲಿ ಬೇಕಾದವರಿಗೆ ಪ್ರಮೋಷನ್ ಇತ್ಯಾದಿಗಳನ್ನು ಕೊಡುವರು. ಇದು ಸರಿಯಲ್ಲ. ಯಾರನ್ನೊ ಮೆಚ್ಚಿಸಲು ಬೇಕಾದವರಿಗೆ ಅರ್ಹತೆ ಇರಲಿ, ಇಲ್ಲದಿರಲಿ ಬಡ್ತಿ ಕೊಡುವರು, ಆಡಳಿತ ಹಾಳಾದರೂ ಪರವಾಗಿಲ್ಲ ಎಂದು ಹೀಗೆ ಮಾಡಿದರೆ ಅನ್ಯಾಯವಾಗುವುದು. ಸ್ಕ್ರೀನಿಂಗ್ ಮಾಡಲೇಬೇಕು, ಯೋಗ್ಯ ರಾದವರನ್ನು ಆರಿಸಬೇಕು. ಸ್ಪೆಲಿಂಗ್, ಮಗ್ಗಿ ಮುಂತಾದ್ದು ಬಾರದೇ ಇರುವುವರನ್ನು ಆರಿಸಿದರೆ ಅವರಿಂದ ಆಡಳಿತವನ್ನು ಸರಿಯಾಗಿ ನಡೆಸುವುದಕ್ಕಾಗುವುದಿಲ್ಲ. ನಾನೊಂದು ಸಲ ಒಂದುಕಡೆ ಟಿಕೆಟ್ ತೆಗೆದುಕೊಂಡು 5 ರೂಪಾಯಿ ಕೊಟ್ಟರೆ ಚಿಲ್ಲರೆ ಕೊಡುವಾಗ ಎರಡು ಸಾರಿ ಎಣಿಸಿ ಬಹಳ ನಿಧಾನ ಮಾಡಿದ. ಆಗ ಒಂದು ಫರ್ಲಾಂಗ್ ಕ್ಯೂ ಇತ್ತು. ಇಂಥವರಿಂದ ಆಡಳಿತದಲ್ಲಿ ಬಹಳ ಅನ್ಯಾಯವಾಗು ತ್ತಿದೆ, ಬಹಳ ಹಣ ವ್ಯರ್ಥವಾಗಿ ಖರ್ಚಾಗುವುದು. ಹಿಂದುಳಿದವರು, ಇಂಥ ಜಾತಿಯವರು, ಅಂಥಾ ಜಾತಿಯವರು ಎಂದು ನೋಡಿ ಅವರ ಯೋಗ್ಯತೆನೋಡದೆ ಕೆಲಸಕ್ಕೆ ತೆಗೆದುಕೊಂಡರೆ ದೇಶ ಹಾಳಾಗು ವುದು. ಐ.ಎ.ಎಸ್. ಆಫೀಸರುಗಳ ವಿಚಾರದಲ್ಲೂ ಕೂಡ ಸರಿಯಾದ ವ್ಯವಸ್ಥೆ ಮಾಡಿಲ್ಲ. ನಿರ್ದಾಕ್ಷಿಣ್ಯವಾಗಿ ಪ್ರಾಮಾಣಿಕತೆಯಿಂದ ಕೆಲಸ ಮಾಡುವವರಿಗೆ ಉತ್ತೇಜನ ಸರಿಯಾಗಿ ಕೊಡುವುದಿಲ್ಲ. ಶ್ರೀ ಶಂಕರ ರಾಯರು ದಾಕ್ಷಿಣ್ಯಕ್ಕೆ ಒಳಗಾಗುವುದಿಲ್ಲ. ಕಾನೂನಿನ ಪ್ರಕಾರ ಕೆಲಸಮಾಡುವರು, ಅಂಥವರನ್ನು ಎಲ್ಲೋ ಒಂದು ಕಡೆ ಹಾಕಿಬಿಡುವರು, ಕೇಳಿದರೆ ಸಾರ್ವಜನಿಕ ಹಿತದೃಷ್ಟಿಯಿಂದ ವರ್ಗಾಯಿಸಲಾಗಿದೆ ಎಂದು ಹೇಳುವರು. ಇದು ಅರ್ಥವಾಗುವುದಿಲ್ಲ. ಸರಕಾರ ಪಬ್ಲಿಕ್ ಪ್ರಾಸಿಕ್ಯೂಟರುಗಳನ್ನು ಮತ್ತು ಸರಕಾರಿ ಪ್ಲೀಡರುಗಳನ್ನು ನೇಮಿಸಿದೆ. ಶ್ರೀ ಗಂಗಾಧರ್‌ರವರು ಅಡ್ವೊಕೇಟರು, ಅವರ ಹತ್ತಿರ ಸರ್ಕಾರಿ ಪ್ಲೀಡರು ಬಂದು ನಾಲ್ಕೈದು ಸಾರಿ ವಿಷಯಗಳನ್ನು ತಿಳಿದುಕೊಂಡು ಹೋಗಿದ್ದಾರೆ ಪೂರ್ಣವಾಗಿ ವಿಷಯಗಳನ್ನು ಅವರು ಅಧ್ಯಯನ ಮಾಡುವುದಿಲ್ಲ. ಇದರಿಂದ ಸರಕಾರದ ಕೇಸು ಹಾಳಾಗುವುದು. ಪರಿಣತರಲ್ಲದವರನ್ನು ಅಧ್ಯಕ್ಷರುಗಳಾಗಿ ನೇಮಿಸುವುದರಿಂದ ಆಡಳಿತ ಯಂತ್ರ ಕುಸಿದಿದೆ. ಇಂದು ಎಚ್ಚರಿಕೆ ನೀಡುತ್ತೇನೆ. ಮುಂದಾದರೂ ರಾಜಕೀಯದಿಂದ ಪ್ರಾಮಾಣಿಕರಲ್ಲದಿರು

(ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ)

ವವರನ್ನು ದಕ್ಷರಲ್ಲದವರನ್ನು ನಾಮಿನೇಟ್ ಮಾಡಬೇಡಿ. ಪಬ್ಲಿಕ್ ಸರ್ವಿಸ್ ಕಮಿಷನ್‌ನಲ್ಲಿ 6 ಜನ ಸದಸ್ಯರಿದ್ದಾರೆ, ರಾಜ್ಯಾಂಗದ ಪ್ರಕಾರ ಎರಡು ರಾಜ್ಯಗಳಿಗೆ ಒಂದು ಪಬ್ಲಿಕ್ ಸರ್ವಿಸ್ ಕಮಿಷನ್ ಇರಬಹುದು. ಹಾಗಿರುವಾಗ ಮೈಸೂರಿನಂಥ ಸಣ್ಣ ದೇಶಕ್ಕೆ ಆರು ಜನರೇಕೆ ? ಈ ಸರಕಾರದಲ್ಲಿ 29 ಜನ ಮಂತ್ರಿಗಳಿದ್ದಾರೆ. ಅನಾವಶ್ಯಕವಾಗಿ ಸಂಖ್ಯೆ ಹೆಚ್ಚಿಸುವುದನ್ನು ನೋಡಿದರೆ ಆಡಳಿತ ಯಂತ್ರ ಚೆನ್ನಾಗಿಲ್ಲ ಎಂಬುದು ಸ್ಪಷ್ಟವಾಗುವುದು. ಆಡಳಿತ ಯಂತ್ರವನ್ನು ಶುದ್ಧಿ ಕರಣ ಮಾಡಬೇಕು.

ಇನ್ನು ಡಿ. ಎಲ್. ಆರ್. ಸಿ. ಎಂದು ಜನರನ್ನು ನೇಮಕ ಮಾಡಿಕೊಳ್ಳುವುದಕ್ಕೆ ಮಾಡಿದ್ದೀರಿ.

[MR SPEAKER in the Chair]

ಡಿ. ಎಲ್. ಆರ್. ಸಿ. ಸುಮಾರು 6–7 ವರ್ಷದಿಂದ ತುಮಕೂರು ಜಿಲ್ಲೆಯಲ್ಲಿ ಏನೂ ಕೆಲಸಮಾಡಿಲ್ಲ. ಸುಮಾರು ಒಂದು ಸಾವಿರ ಜನ ಉಪಾಧ್ಯಾಯರು 8—12 ವರ್ಷದಿಂದ ಕೆಲಸ ಮಾಡುತ್ತಾ ಇದ್ದಾರೆ, ಅವರ ಭವಿಷ್ಯ ಏನು ಎಂಬುದು ಇನ್ನೂ ಅವರಿಗೆ ಅರ್ಥವಾಗಿಲ್ಲ. ಅದೇ ರೀತಿ ವಿಲೇಜ್ ಅಕೌಂಟೆಂಟ್ಸ್, ಪಂಚಾಯಿತಿ ಸೆಕ್ರೆಟೆರಿಯವರು ಇದ್ದಾರೆ. ಡಿ. ಎಲ್. ಆರ್. ಸಿ. ಅವರು ಏನು ಕೆಲಸ ಮಾಡದೆ ಇದ್ದರೂ ಅವರನ್ನು ನಾಮ್ಕಾವಾಸ್ತೆ ಇಟ್ಟಿದ್ದಾರೆ. ಇದನ್ನೆಲ್ಲಾ ನೋಡಿದ ಪಕ್ಷದಲ್ಲಿ ಸರ್ಕಾರದವರು ತಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸುತ್ತಿಲ್ಲ ಎಂಬುದು ತನಗೆ ತಾನೆ ಗೊತ್ತಾಗುತ್ತದೆ. 1956ನೇ ಇಸವಿಯಲ್ಲಿ ಎಷ್ಟು ಜನ ಸೆಕ್ರೆಟರಿಗಳು ಇದ್ದರು ಎಷ್ಟು ಜನ ಡಿಪಾರ್ಟ್‌ಮೆಂಟ್ ಹೆಡ್ಸ್ ಇದ್ದರು, ಇವತ್ತು ಎಷ್ಟು ಜನ ಇದ್ದಾರೆ ಎಂಬುದನ್ನು ನೋಡಿ ; ಮುಂಚೆ ಇಡೀ ಸ್ಟೇಟ್‌ಗೆ ಒಬ್ಬ ರೆವಿನ್ಯೂ ಕಮಿಷನರು ಇದ್ದರು, ಇವತ್ತು ನಾಲ್ಕು ಜನ ಇದ್ದಾರೆ. ಇಷ್ಟಾದರೂ ಕೂಡ ಸೀನಿಯಾರಿಟಿ ಲಿಸ್ಟ್ ಬರದಿದ್ದರೆ ಪಬ್ಲಿಕ್ ಸರ್ವೀಸ್ ಕಮಿಷನ್‌ಗೆ ಇರತಕ್ಕ ಕೆಲಸವಾದರೂ ಏನು? ಮುಖ್ಯ ಮಂತ್ರಿಗಳು ಬಹಳ ಕಷ್ಟದಲ್ಲಿದ್ದಾರೆ. ಅವರಿಗೆ ಮೇಜರ್ ಇರಿಗೇಷನ್ ಇದೆ, ಜನರಲ್ ಅಡ್ಮಿನಿಸ್ಟ್ರೇಷನ್ ಇದೆ, ಅವುಗಳ ಜೊತೆಗೆ ಇನ್ನೂ ಕೆಲವು ಇಲಾಖೆಗಳನ್ನು ಇಟ್ಟುಕೊಂಡಿದ್ದಾರೆ, ಅವರ ಮನಸ್ಸಿನಲ್ಲಿ ಇದನ್ನೆಲ್ಲಾ ಸರಿಮಾಡಬೇಕೆಂದು ಇದೆ. ಆದರೆ ಅದು ಸಾಧ್ಯವಾಗುತ್ತಿಲ್ಲ ಕಾರಣವೇನೆಂದರೆ ಅವರು ಡೆಲ್ಲಿಗೆ ಹೋಗಬೇಕಾಗುತ್ತದೆ, ಎಷ್ಟೋ ಸಭೆಗಳ ಅಧ್ಯಕ್ಷತೆ ವಹಿಸಬೇಕಾಗುತ್ತದೆ, ಹೊರದೇಶದಿಂದ ಬರತಕ್ಕವರನ್ನು ನೋಡಬೇಕಾಗುತ್ತದೆ. ಆದ್ದರಿಂದ ಜನರಲ್ ಅಡ್ಮಿನಿಸ್ಟ್ರೇಷನ್ ಒಂದನ್ನು ಮಾತ್ರ ಅವರು ಇಟ್ಟುಕೊಂಡರೆ ಆಡಳಿತ ಚೆನ್ನಾಗಿ ಆಗುತ್ತದೆ ಇಲ್ಲದೇ ಹೋದರೆ ನಮ್ಮ ದೇಶದ ಪ್ರಜಾಪ್ರಭುತ್ವ ಹಾಳಾಗಿ ಹೋಗುತ್ತದೆ ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಬಿ. ಪಿ. ಗಂಗಾಧರ್.—ಸ್ವಾಮಿ, 6 ಗಂಟೆಗೆ ತಾವು ಸಭೆಯನ್ನು ಅಡ್ಜರ್ನ್ ಮಾಡುತ್ತೀರಿ, ಆದ್ದರಿಂದ ಈಗ ನನ್ನ ಅರ್ಧಗಂಟೆ ಕಾಲದ ಚರ್ಚೆಯನ್ನು ತೆಗೆದುಕೊಳ್ಳಬೇಕೆಂದು ಕೇಳುತ್ತೇನೆ.

ಅಧ್ಯಕ್ಷರು.—ಇದರ ಮೇಲೆ ಇನ್ನೂ ಅನೇಕ ಜನ ಮಾತನಾಡುವವರು ಇದ್ದಾರೆ.

ಶ್ರೀ ಬಿ. ಪಿ. ಗಂಗಾಧರ್.—ಎಷ್ಟು ಜನ ಮಾತನಾಡಿದರೂ ಇಷ್ಟೆ. ಅಂತೂ ಇದು ಮುಂದಿನ ಸೆಷನ್‌ಗೆ ಹೋಗುತ್ತದೆ ಎಂದು ತೀರ್ಮಾನವಾಯಿತಲ್ಲಾ ?

ಕುಡಿಯುವ ನೀರಿನ ವಿಷಯದಲ್ಲಿ ತುಮಕೂರಿನ ಜನರಿಗೆ ಬಹಳ ತೊಂದರೆಯಾಗಿದೆ, ಅದನ್ನು ಸರ್ಕಾರದವರಿಗೆ ಹೇಳಬೇಕಾಗುತ್ತದೆ. ಈಗಾಗಲೇ 4 ಸಾರಿ ಇದು ಬಂದು ನಿಂತು ಹೋಗಿದೆ, ಮೊನ್ನೆ ಚರ್ಚೆ ಪ್ರಾರಂಭ ಮಾಡಿದೆ, ದೀಪ ಹೊರಟು ಹೋಯಿತು, ಆದ್ದರಿಂದ ದಯವಿಟ್ಟು ಇವತ್ತು ಇದನ್ನು ತೆಗೆದುಕೊಳ್ಳಬೇಕು ಎಂದು ಒತ್ತಾಯ ಮಾಡುತ್ತೇನೆ.

Mr. SPEAKER.—As per the schedule, the discussion on the Public Service Commission Report should have concluded at 5-30 P.M. and the Concerned Minister on behalf of the Government, should have commenced his reply at 5-30 P.M.

ಶ್ರೀ ಬಿ. ಪಿ. ಗಂಗಾಧರ್.—ನಾಲ್ಕು ವರ್ಷದಿಂದ ಪ್ರತಿಯೊಂದು ಅಧಿವೇಶನದಲ್ಲೂ ಹೇಳುತ್ತಾ ಬಂದಿದ್ದೇನೆ, ಒಂದು ಲೀಟರ್ ನೀರು ಕೂಡ ಜಾಸ್ತಿಯಾಗಿಲ್ಲ. ಅಲ್ಲಿನ ಜನರ ಕಷ್ಟಸುಖ ಏನೆಂಬುದನ್ನು ಸರ್ಕಾರದವರಿಗೆ ನಿವೇದನೆ ಮಾಡಿಕೊಳ್ಳಬೇಕು, ಆದ್ದರಿಂದ ತಾವು ದಯವಿಟ್ಟು ಇದಕ್ಕೆ ಈಗಲೇ ಅವಕಾಶ ಕೊಡಬೇಕು.

ಅಧ್ಯಕ್ಷರು.—ಈಗ ಸದ್ಯಕ್ಕೆ ಹೇಗೆ ಆಗುತ್ತದೆ?

ಶ್ರೀ ಬಿ. ಪಿ. ಗಂಗಾಧರ್.—ನನ್ನ ವಿಷಯ ನನಗೆ ದೊಡ್ಡದು ಸ್ವಾಮಿ. ಏಕೆಂದರೆ ಅಲ್ಲಿ ಸುಮಾರು ಒಂದು ಲಕ್ಷ ಜನ ಇದ್ದಾರೆ, ಅವರಿಗೆ ನೀರಿನ ಪ್ರಶ್ನೆ ಒಂದು ದೊಡ್ಡ ಸಮಸ್ಯೆಯಾಗಿದೆ. ಲೇಬರರ್ಸ್ ಮುಂತಾದವರ ಪ್ರತಿನಿಧಿಗಳು ಯಾರಿದ್ದಾರೆ ಅವರು ಇಲ್ಲಿ ಸತ್ಯಾಗ್ರಹ ಮಾಡುತ್ತಾರೆ. ಒಂದು ವೇಳೆ ನೀವು ಅವಕಾಶ ಕೊಡದಿದ್ದರೆ ನನಗೆ ಉಳಿದಿರುವುದು ಅದು ಒಂದೇ ಮಾರ್ಗ. ನನ್ನ ಜೊತೆ ಕೃಷ್ಣನ್‌ರವರೂ ಕೂಡ ಸಹಕರಿಸುತ್ತಾರೆ ಎಂದು ತಿಳಿದುಕೊಂಡಿದ್ದೇನೆ, ಹೀಗೆ ನಾವು 4—5 ಜನ ಸತ್ಯಾಗ್ರಹ ಮಾಡಬೇಕಾಗುತ್ತದೆ ಆದ್ದರಿಂದ ಅದಕ್ಕೆ ಅವಕಾಶ ಕೊಡದೆ ದಯವಿಟ್ಟು ಈ ಚರ್ಚೆಗೆ ಅವಕಾಶ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಬೋಳ ರಘುರಾಮಶೆಟ್ಟಿ.—ಪಿ. ಎಸ್. ಸಿ. ರಿಪೋರ್ಟ್‌ಮೇಲೆ ಸುಮಾರು ಹೊತ್ತು ಚರ್ಚೆಯಾಗಿದೆ, ಸರ್ಕಾರದಿಂದ ಏನು ಉತ್ತರ ಬರುತ್ತದೆ ಎಂದು ನಾವು ಕಾದುಕೊಂಡು ಇದ್ದೇವೆ ಆದ್ದರಿಂದ ಮಾನ್ಯ ಮಂತ್ರಿಗಳು ಉತ್ತರ ಕೊಡುವುದಾದರೆ ನಾವು ಇಲ್ಲಿ ಇರುತ್ತೇವೆ, ಆದ್ದರಿಂದ ಇದು ಮೊದಲು ತೀರ್ಮಾನ ಆಗಬೇಕು.

ಅಧ್ಯಕ್ಷರು.—ಕೆಲವು ಪದ್ಧತಿಗಳು ಇವೆ, ಆ ಪ್ರಕಾರ ಮಾಡಬೇಕಾಗುತ್ತದೆ. ಅದನ್ನು ಬಿಟ್ಟು ಮಾಡುವುದಕ್ಕಾಗುವುದಿಲ್ಲ. ಇದು ಕೊನೆಯ ದಿವಸ, ಸುಮ್ಮನೆ ಕಹಿವಾತಾವರಣವನ್ನುಂಟು ಮಾಡುವುದು ಬೇಡ.

ಶ್ರೀ ಬಿ. ಪಿ. ಗಂಗಾಧರ್.—ಹಾಗಾದರೆ ಸತ್ಯಾಗ್ರಹ ಮಾಡಿ ಎಂದರೆ ಮಾಡಿಯೇ ಬಿಡುತ್ತೇನೆ. ಸತ್ಯಾಗ್ರಹ ಮಾಡಿದ ಹೊರತು ಅವಕಾಶ ಸಿಕ್ಕುವ ಹಾಗೆ ಇಲ್ಲ, ಅದೇ ಒಂದು ಬಾಕಿ ಉಳಿದಿರುವುದು ಅದನ್ನೂ ಮಾಡಲೇ ಬೇಕಾಗುತ್ತದೆ, ನಾನು ಆಗಿನಿಂದಲೂ ಕೇಳಿಕೊಳ್ಳುತ್ತಾ ಇದ್ದೇನೆ, ಆದ್ದರಿಂದ ಒಂದು ಹತ್ತು ನಿಮಿಷ ನನಗೆ ಮಾತನಾಡಲು ಅವಕಾಶ ಕೊಡಿ.

Mr. SPEAKER.—Now before all these matters are taken up, I have to give my ruling on the Notice of Privilege matter raised by the hon. Member Sri H. M. Channabasappa.

Sri B. P. GANGADHAR.—I press the Chair to take my subject on water supply in Tumkur Town, which is awaiting consideration for so many days.

Sri H. SIDDAVEERAPPA.—I wish to say a few words.

ಶ್ರೀ ಬಿ. ಪಿ. ಗಂಗಾಧರ್.— ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಅಂಡರ್‌ಗ್ರೌಂಡ್ ಡ್ರೈನೇಜ್ ಮತ್ತು ನೀರಿನ ಪ್ರಶ್ನೆ ಕೇಳುತ್ತೇನೆ. ಅದು ಬಿಟ್ಟರೆ ಬೇರೆ ಏನೂ ಕೇಳುವುದಿಲ್ಲ. ಅದು ಒಂದು ಲಕ್ಷ ಜನರಿಗೆ ಸಂಬಂಧಪಟ್ಟ ವಿಷಯ. ಆದುದರಿಂದ ಅದನ್ನು ಈ ಸಭೆಯಲ್ಲಿ ಎತ್ತುವುದಕ್ಕೆ ಅವಕಾಶಕೊಡಬೇಕು.

ಶ್ರೀ ಎಂ. ಎನ್. ರಾಮಣ್ಣ.—ತುಮಕೂರಿನಲ್ಲಿರುವವರಿಗೆ ಹೆಣ್ಣು ಕೊಡಿ ಎಂದರೆ, ಅಲ್ಲಿ ನೀರು ಇಲ್ಲ. ಅವರಿಗೆ ಹೆಣ್ಣು ಕೊಡುವುದಿಲ್ಲ ಎಂದು ಹೇಳುತ್ತಾರೆ. ಆದುದರಿಂದ ಈಗ ಅಲ್ಲಿಗೆ ಜಾಗ್ರತೆ ನೀರು ಒದಗಿಸುವ ಪ್ರಶ್ನೆಯನ್ನು ತೆಗೆದುಕೊಳ್ಳಬೇಕು.

Sri B. P. GANGADHAR. –I have no time to lose. I have to raise my subject immediately as there are hardly 10 minutes for the Session to adjourn. Please do not drive me to take an extreme step as a last resort.

Sri H. SIDDAVEERAPPA.—Mr. Speaker Sir, I won't take more than two to three minutes.

ಶ್ರೀ ಬಿ. ಪಿ. ಗಂಗಾಧರ್.– ಈಗ ಉಳಿದಿರುವ ಒಂದೇ ಮಾರ್ಗವನ್ನು ಅನುಸರಿಸದೆ ವಿಧಿಯಿಲ್ಲ.

There is no other go for me but to offer Satyagraha here if the Chair does not take up my subject.

Sri H. SIDDAVEERAPPA.—Sir, Sri Hutchmasty Gowda had mentioned something about the recognition of the Opposition party.

Sri B. P. GANGADHAR.—May I raise discussion on my subject? The Chair may give the Ruling tomorrow. If you start reading it, it will take 20 minutes. Instead, I must be permitted to introduce my subject. Otherwise, I am prepared even to be ordered out, when I will have a chance to plead with my Constituency my helplessness.

ಅದಕ್ಕೋಸ್ಕರ ಇನ್ನು ಹೆಚ್ಚುಕಾಲ ವ್ಯಯ ಮಾಡದೆ, ನನಗೆ ನನ್ನ ಟೌನಿಗೆ ಸಂಬಂಧಪಟ್ಟ ವಿಷಯವನ್ನು ಎತ್ತಲು ಅವಕಾಶ ಕೊಡದಿದ್ದರೆ ಪ್ರೊಟೆಸ್ಟ್ ಮಾಡಿ ಸತ್ಯಾಗ್ರಹ ಮಾಡುತ್ತೇನೆ.

(Hon. Member Sri B. P. Gangadhar walked to the aisle and sat along the aisle of the House).

Sri H. SIDDAVEERAPPA.—I have been standing to say something.

Sri N. A. CHANNE GOWDA.—Is the House in order since Hon. Member Sri Gangadhar is staging 'dharana'?

Sri G. CHANDRAKANTH.—The House is not in order. I personally feel that the House should be adjourned. The decision on the position of the Opposition Party should be postponed.

Sri D. B. KALMANKAR.—The House should be adjourned as it was not in order or the subject of Sri Gangadhar may be taken up.

Sri H. SIDDAVEERAPPA.—Give some ruling on the main Opposition Party.

Mr. SPEAKER.—Obviously I cannot jump over the business. It can be taken up next time.

Sri D. B. KALMANKAR.—A promise may be given to Sri Gangadhar that his subject will be taken up now.

Sri N. A. CHANNE GOWDA.—No business can be transacted now as the House is not in order.

Sri S. SIVAPPA.—Sri Gangadhar is agitated over acute water scarcity in Tumkur Town and he is awaiting a discussion on it for the last several days. The half-an-hour discussion on it has been adjourned twice for want of time. Sri Gangadhar represents Tumkur Constituency and it is but right that on every occasion he should agitate for it as nothing has materialised. He is expecting a reply from the Government. But so far the Government has not cared even to reply and give an assurance. Government should give an assurance to him as to what steps they are going to take to relieve water scarcity in Tumkur Town. If that assurance is given, we can request Sri Gangadhar to come back to his seat. So let the Government reply and give an assurance.

Sri H.N. NANJE GOWDA.—According to Rule 31, business included in the List of Business alone should be taken. There is a Call Attention Notice by me. If any preference is shown to any other business or business not included in the Agenda, I shall also have to follow suit.

Sri S. SIVAPPA.—Is the House in order?

Mr. SPEAKER.—It is nearing 6 P.M. and there is no time to give my ruling on the Privilege matter. I shall give it some other time.

Sri H. SIDDAVEERAPPA.—What about the position of the parties in the House ?

Sri N. A. CHANNEGOWDA.—Unless the House is in order nothing can be discussed.

Sri D. DEVARAJ URS.—According to some hon. Members the House may not be in order because one member is sitting here. I would like to know from the Hon. Chair whether he is not in a position to bring this House into order.

Sri H. SIDDAVEERAPPA.—I wish to know whether the Chair is so incompetent as not to bring the House under control and whether there are no rules under which you can control Members.

Sri D. DEVARAJ URS.—The Chair should exercise control over Members and bring the House to order.

Sri N. A. CHANNE GOWDA.—The Chair cannot control as it is not in order. The Chair has to adjourn the House....

A MEMBER.—I request that Rules may be observed. Debate cannot continue when the House is not in order.

Mr. SPEAKER.—We cannot sit beyond 6 P.M. As regards the point raised by hon. Member Sri H. Siddaveerappa, I wish to tell him that the matter is before me. There was not sufficient time for me to go into it. I will pass an order later. I cannot do it hurriedly.

Hon. MEMBERS.—The House is not in order.

6-00 P.M.

Sri H. SIDDAVEERAPPA.—In the event of the S. V. D. being dissolved who is going to be recognized as the Leader of the Opposition ?

Sri N. A. CHANNE GOWDA.—Sir you had promised to close the session at 6 O' clock and now it is 6 O'clock

Sri H. SIDDAVEERAPPA.—Are you taking a decision that the House is not in order ?

Mr. SPEAKER.—I shall give my decision about the Opposition very early. Unless I go through the papers I cannot give a decision.

The Hous now stands adjourned *sine die*.

The House adjourned sine die *at Two Minutes past Six of the Clock.*

WD 15556—GPB—600—31-12-1970